# ೯ ನೆಯ ತರಗತಿ

# ಪ್ರಥಮ ಭಾಷೆ ಕನ್ನಡ


# ಗದ್ಯ ಮತ್ತು ಪದ್ಯಗಳ ಪ್ರಶ್ನೋತ್ತರಗಳು

ರಚನೆ : ಮಮತಾ ಭಾಗ್ವತ .ಸಹಶಿಕ್ಷಕಿ

ಸರ್ಕಾರಿ ಪ್ರೌಢಶಾಲೆ ಬೇಗೂರು ಬೆಂಗಳೂರು -೬೮

## ಗದ್ಯ ಪಾಠ –೧ ಕನ್ನಡ ಮೌಲ್ವಿ – ಗೊರೂರು ರಾಮಸ್ವಾಮಿ ಅಯ್ಯಂಗಾರ

### ಕೃತಿಕಾರರ ಪರಿಚಯ



ಗೊರೂರು ರಾಮಸ್ವಾಮಿ ಅಯ್ಯಂಗಾರರು ಕ್ರಿ.ಶ. ೧೯೦೪ ರಲ್ಲಿ ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಇವರು ಗರುಡ ಗಂಬದ ದಾಸಯ್ಯ ,ಹೇಮಾವತಿಯ ತೀರದಲ್ಲಿ,ಮೆರವಣಿಗೆ , ಪುನರ್ಜನ್ಮ , ನಮ್ಮ ಊರಿನ ರಸಿಕರುಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರ ಅಮೆರಿಕದಲ್ಲಿ ಗೊರೂರು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಪ್ರಸ್ತುತ ಗದ್ಯ ಭಾಗವನ್ನು ಗೊರೂರರ ಕನ್ಯಾಕುಮಾರಿ ಮತ್ತು ಇತರ ಕಥೆಗಳು ಎನ್ನುವ ಕಥಾಸಂಕಲನದಿಂದ ಆರಿಸಿಕೊಳ್ಳಲಾಗಿದೆ.

### ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ .

೧. ಮೌಲ್ವಿ ಹಿಡಿದಿದ್ದ ಕನ್ನಡದ ಪುಸ್ತಕ ಯಾವುದು ?
ಉ: ಮೌಲ್ವಿ ಹಿಡಿದಿದ್ದ ಕನ್ನಡದ ಪುಸ್ತಕ ಕುಮಾರವ್ಯಾಸ ಭಾರತ

೨. ಯಕ್ಷಗಾನದ ಪಾತ್ರಧಾರಿ ಸಾಹೇಬನು ಏನೆಂದು ಹೆಸರಾಗಿದ್ದನು ?
ಉ : ಯಕ್ಷಗಾನದ ಪಾತ್ರಧಾರಿ ಸಾಹೇಬನು 'ಹುಸೇನ್ ಕೃಷ್ಣ ' ಎಂದು ಹೆಸರಾಗಿದ್ದನು.

೩. ಕನ್ನಡ ಮೌಲ್ವಿಯ ವೃತ್ತಿ ಯಾವುದು ?
ಉ: ಕನ್ನಡ ಮೌಲ್ವಿಯವರು ಪ್ರೈಮರಿ ಶಾಲೆಯ ಉಪಾಧ್ಯಾಯ ವೃತ್ತಿಯಲ್ಲಿದ್ದರು.

೪. ಡಿ.ವಿ.ಜಿ.ಯವರ ಯಾವ ಕೃತಿ ಮೌಲ್ವಿಯ ಬಾಯಿಗೆ ಪೂರ್ತಿ ಬರುತ್ತಿತ್ತು ?
ಉ:ಡಿ.ವಿ.ಜಿ.ಯವರ ಉಮರನ ಒಸಗೆ ಮೌಲ್ವಿಯ ಬಾಯಿಗೆ ಪೂರ್ತಿ ಬರುತ್ತಿತ್ತು.

### ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಕನ್ನಡ ಮೌಲ್ವಿಯ ವೇಷಭೂಷಣ ಹೇಗಿತ್ತು ?
ಉ: ಕನ್ನಡ ಮೌಲ್ವಿಯವರಿಗೆ ವಯಸ್ಸು ೫೫ ರಿಂದ ೫೮ ಇದ್ದಿರಬಹುದು .ಆಜಾನುಬಾಹುವಾಗಿ ಪುಷ್ಟವಾಗಿ ಬೆಳೆದಿದ್ದ ಎತ್ತರದ ಕೆಂಪನೆಯ ಆಳು, ಮುಖದಲ್ಲಿ ಸಹ ಒಳ್ಳೆಯ ಕಳೆ ಇತ್ತು. ಕಣ್ಣಿನ ದೃಷ್ಟಿ ತೀಕ್ಷ್ಣವಾಗಿತ್ತು. ಗಡ್ಡ ಪೂರ್ಣವಾಗಿ ಬೆಳ್ಳಗಾಗಿ ಶುದ್ಧಿ ಮಾಡಿದ ಹತ್ತಿಯ ತುಪ್ಪಳದಂತೆ ತೋರುತ್ತಿತ್ತು. ವಿಶಾಲವಾದ ಹಣೆ ,ಗಂಭೀರವಾದ ಮುಖ ,ಮಡಿ–ಮಡಿ ಇಸ್ತ್ರೀ ಮಾಡಿದ್ದ ಬಿಳಿಯ ಶರಾಯಿ(ಕೋಟು) ಇವುಗಳಿಂದ ಅವರನ್ನು ನೋಡುವವರಿಗೆ ಅವರೊಬ್ಬ ಮರ್ಯಾದಸ್ತ ಸದ್ಗೃಹಸ್ಥ ಎಂಬ ಭಾವನೆ ಉಂಟಾಗುತ್ತಿತ್ತು.

೨. ಮೌಲ್ವಿಯ ವಿದ್ಯಾಭ್ಯಾಸ ಹೇಗಾಯಿತು ?
ಮೌಲ್ವಿಯವರ ಊರಿನಲ್ಲಿ ಉರ್ದು ಶಾಲೆ ಇರಲಿಲ್ಲ. ಅವರ ತಂದೆಯವರಿಗೆ ಉರ್ದು ಓದಲು ,ಬರೆಯಲು ಬರುತ್ತಿರಲಿಲ್ಲ. ಅವರ ಊರಿನಲ್ಲಿ ಅವರ ಜನರ ಹಲವು ಸಂಸಾರಗಳಿದ್ದವು.ಆದರೆ ಅವರಾರಿಗೂ ಉರ್ದುವನ್ನು ಓದುವುದಕ್ಕಾಗಲೀ, ಬರೆಯುವುದಕ್ಕಾಗಲೀ ಬರುತ್ತಿರಲಿಲ್ಲ. ಆರು ಮೈಲಿ ದೂರದ ಹಳ್ಳಿಯಲ್ಲಿ ಒಂದು ಉರ್ದು ಶಾಲೆ ಇತ್ತು. ಅಲ್ಲಿಯ

ಉಪಾಧ್ಯಾಯರು ವಾರದಲ್ಲಿ ಎರಡು ದಿನ (ಶನಿವಾರ ,ಭಾನುವಾರ ) ಮೌಲ್ವಿಯವರ ಮನೆಗೆ ಬಂದು ಉರ್ದು ಪಾಠವನ್ನು ಹೇಳುವಂತೆ ಮೌಲ್ವಿಯವರ ತಂದೆ ಗೊತ್ತು ಮಾಡಿದ್ದರು. ಅವರ ಕಡೆಯಿಂದ ಇವರು ಉರ್ದುವನ್ನು ಬೇಗ ಬೇಗ ಕಲಿತರು.

೩. ಹುಸೇನ್ ಕೃಷ್ಣನ ಅಭಿನಯದ ಬಗ್ಗೆ ತಿಳಿಸಿ .
ಗೊರೂರು ರಾಮಸ್ವಾಮಿ ಅಯ್ಯಂಗಾರರ ಹಳ್ಳಿಯಲ್ಲಿಯೇ ಒಬ್ಬ ಯಕ್ಷಗಾನದಲ್ಲಿ ಕೃಷ್ಣನ ಪಾತ್ರವನ್ನು ಅತ್ಯುತ್ಕೃಷ್ಟವಾಗಿ ಅಭಿನಯಿಸುತ್ತಿದ್ದನು. ರಂಗಸ್ಥಳದಲ್ಲಿ ಬಂದು ನಂತರ ಅವನ ವೇಷವನ್ನು , ವಾಕ್ ಶುದ್ಧಿಯನ್ನು ನೋಡಿ ವೈದಿಕ ಮನೆತನದ ವೃದ್ಧ ಸ್ತ್ರೀಯರೂ ಸಹ ಮೈ ಮರೆತು ಕೃಷ್ಣಪರಮಾತ್ಮ ಕಾಪಾಡಪ್ಪ ಎಂದು ಕೈ ಮುಗಿಯುತ್ತಿದ್ದರು. ಆಗ ಗೊರೂರರು ಸೇರಿದಂತೆ ಇವನು  ಹೊಸಕೇರಿಯ ಹುಸೇನ್ ಸಾಬಿ ಎಂದರೆ ಆ ವೃದ್ಧೆಯರು ಹುಸೇನ್ ಸಾಬಿಯಂತೆ ಹುಸೇನ್ ಸಾಬಿ ,ನಾವು ಕೈ ಮುಗಿದಿರುವುದು ತಲುಪುವುದು ಶ್ರೀ ಕೃಷ್ಣನಿಗೆ.  ಇವನು ಯಾರಾದರೇನು ?ಎನ್ನುತ್ತಿದ್ದರು. ಆ ಸಾಹೇಬನು ಹುಸೇನ್ ಕೃಷ್ಣ ಎಂದೇ  ಹೆಸರಾಗಿದ್ದನು.

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ .
ಗೊರೂರು ಹಾಗೂ ಮೌಲ್ವಿಯ ನಡುವೆ ನಡೆದ ಸಂಭಾಷಣೆಯನ್ನು ಸಂಕ್ಷೇಪಿಸಿ ಬರೆಯಿರಿ.
ಉ: ಗೊರೂರರು ಒಮ್ಮೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ನೋಡಲು ಹದಿನಾರಾಣೆಯ ಮುಸಲ್ಮಾನನಂತಿದ್ದರೂ ಕುಮಾರವ್ಯಾಸ ಭಾರತವನ್ನು ಓದುತ್ತಿದ್ದ ಮೌಲ್ವಿಯವರನ್ನು ನೊಡಿ ಕುತೂಹಲ ತಾಳಿದರು. ಅವರ ಬಳಿ ಸಾರಿ ನಿಮಗೆ ಕನ್ನಡ ಬರುವುದೇ ಎಂದಾಗ ಮೂರನೇ ತರಗತಿಯವರೆಗೆ ಕನ್ನಡ ಕಲಿತರೂ ಮೂವತ್ತು ವರ್ಷ ಅದರಿಂದಲೇ ಜೀವನ ನಿಭಾಯಿಸಿದ್ದನ್ನು , ತಾನೊಬ್ಬ ಪ್ರೈಮರಿ ಶಾಲೆಯ ಕನ್ನಡ ಉಪಾಧ್ಯಾಯನಾಗಿ ಸೇವೆ ಸಲ್ಲಿಸಿ ನಿವೃತ್ತನಾಗಿರುವುದನ್ನು ವಿವರಿಸಿದರು. ಅವರು ಕಲಿತಿದ್ದು ಉರ್ದುವಾಗಿದ್ದರೂ ಕಲಿಸಿದ್ದು ಕನ್ನಡವೆಂದೂ ,ತಾನು ಉರ್ದುವನ್ನು ,ತನ್ನ ಶಿಕ್ಷಣವನ್ನು ಹೇಗೆ ಪಡೆದೆನೆಂದು ಗೊರೂರರಿಗೆ ವಿವರಿಸಿದರು. ಭಾರತದ ಕಥೆ ನಿಮಗೆ ಒಪ್ಪುವುದೇ , ನಿಮ್ಮ ಧರ್ಮಕ್ಕೆ ವಿರೋಧವಾದುದು ಅದರಲ್ಲಿ ಯಾವುದೂ ಇಲ್ಲವೇ ಎಂದು ಗೊರೂರರು ಕೇಳಿದಾಗ ಮೌಲ್ವಿಯವರು ಉದ್ಯಾನವನದಲ್ಲಿ ಎಲ್ಲ ಬಗೆಯ ಹೂಗಳಿದ್ದರೆ ಉದ್ಯಾನವನದ ಸೌಂದರ್ಯ ಹೆಚ್ಚುವಂತೆ ನಾಡಿನಲ್ಲಿ ಎಲ್ಲ ಧರ್ಮದವರೂ ಇರಬೇಕು. ಎಲ್ಲ ಮತಗಳಲ್ಲಿಯೂ ಉದಾತ್ತ ತತ್ವಗಳಿವೆ. ನಾನು ಎಲ್ಲ ಧರ್ಮಗಳ ಪವಿತ್ರ ಗ್ರಂಥವನ್ನು ಓದಿದ್ದೇನೆ. ಎಲ್ಲ ಧರ್ಮಗಳೂ ಹೇಳುವುದು ಮನುಷ್ಯ ಒಳ್ಳೆಯವನಾಗಿರಬೇಕೆಂದು ಎಂದು ಉತ್ತರಿಸುತ್ತಾರೆ. ಕನ್ನಡ ಪಾಠ ಚೆನ್ನಾಗಿ ಮಾಡುತ್ತೀರಾ ಎಂಬ ಗೊರೂರರ ಪ್ರಶ್ನೆಗೆ ಅವರು ತನ್ನ ಸಮ ಪಾಠ ಮಾಡುವವರು ಯಾರೂ ಇಲ್ಲ ಎಂಬ ಹೆಸರು ಗಳಿಸಿದ್ದೇನೆ. ಎಷ್ಟು ಜನರಿದ್ದರೂ ಮಾತನಾಡಲು ಹಿಂಜರಿಯುವುದಿಲ್ಲ. ಗುರುಧ್ಯಾನ ಮಾಡಿದರೆ ಎಲ್ಲ ಭಯಗಳೂ ನಿವಾರಣೆಯಾಗುತ್ತವೆ ಎನ್ನುತ್ತಾರೆ. ಅಲ್ಲದೇ ಪ್ರತಿದಿವೂ ಎರಡು ಗಂಟೆ ಕನ್ನಡ ಪುಸ್ತಕಗಳನ್ನು ಓದುವುದನ್ನು ಡಿ.ವಿ.ಜಿ.ಯವರ ಉಮರನ ಒಸಗೆ ತನಗೆ ಪೂರ್ತಿ ಕಂಠ ಪಾಠ ಆಗಿರುವುದನ್ನು ಹೇಳುತ್ತಾರೆ. ಗೊರೂರರು ಹಾಸನದ ಗೊರೂರಿನವರು ಎಂದು ಅರಿತು ಅಲ್ಲಿಯ ಗೊರೂರು ರಾಮಸ್ವಾಮಿ ಅಯ್ಯಂಗಾರರು ಒಳ್ಳೆಯ ಕಥೆಗಳನ್ನು ಬರೆಯುತ್ತಾರೆ. ನೋಡಬೇಕಾದ ಮನುಷ್ಯ ಎನ್ನುತ್ತಾರೆ. ಅವರು ಸಿಕ್ಕರೆ ಏನು ಮಾಡುವಿರಿ ಎಂದಾಗ ಅವರನ್ನು ಆಲಂಗಿಸಿಕೊಳ್ಳುತ್ತೇನೆ ಎಂದು ಉತ್ತರಿಸುತ್ತಾರೆ. ತನ್ನೆದುರುಗೆ ಇರುವವರೇ ಅವರು ಎಂದು ಅರಿತು ಸಂತಸದಿಂದ ಗೊರೂರರನ್ನು ತಬ್ಬಿ ಈವತ್ತು ಸುದಿನ , ದೇವರ ದಯೆ ನಾವಿಬ್ಬರೂ ಸೇರಿದೆವು ಮತ್ತೆ ಯಾವತ್ತು ನಮ್ಮನ್ನು ಸೇರಿಸುವ ಕೃಪೆಯನ್ನು ದೇವರು ಮಾಡುತ್ತಾನೋ ಎನ್ನುತ್ತಾರೆ.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ .
೧. “ ನಿಮಗೆ ಕನ್ನಡ ಬರುತ್ತದೆಯೇ?”

ಉ: ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ರಚಿಸಿರುವ ಕನ್ಯಾಕುಮಾರಿ ಮತ್ತು ಇತರ ಕಥೆಗಳು ಕಥಾಸಂಕಲನದಿಂದ ಆರಿಸಲಾದ 'ಕನ್ನಡ ಮೌಲ್ವಿ' ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಪ್ರಶ್ನೆಯನ್ನು ಲೇಖಕರು ಬಸ್ಸಿನಲ್ಲಿ ತಾನು ನೋಡಿದ ಕನ್ನಡ ಮೌಲ್ವಿಗೆ ಕೇಳಿದ್ದಾರೆ .

ಸಂದರ್ಭ: ಗೊರೂರರು ಒಮ್ಮೆ ಬಸ್ಸಿನಲ್ಲಿ ಹೋಗುತ್ತಿದ್ದಾಗ ನೋಡುವುದಕ್ಕೆ ಹದಿನಾರಾಣೆಯ ಮುಸಲ್ಮಾನನಂತಿದ್ದರೂ ಕೈಯಲ್ಲಿ ಕುಮಾರವ್ಯಾಸ ಭಾರತವನ್ನು ಹಿಡಿದು ಓದುತ್ತಿದ್ದ ವ್ಯಕ್ತಿಯನ್ನು ನೋಡಿ ಅಚ್ಚರಿಪಟ್ಟರು. ಅವರನ್ನು ನೋಡಿ ಗೊರೂರರಿಗೆ ಜಾತಿ ,ಭಾಷೆ, ಪ್ರಾಂತ್ಯಗಳ ಗೊಂದಲದಲ್ಲಿ ನಮ್ಮನ್ನು ಮುಸುಕಿರುವ ಅಂಧಕಾರದಲ್ಲಿ ಒಂದು ಮಿಂಚು ಹೊಳೆದಂತೆ ಭಾಸವಾಯಿತು.ಅವರನ್ನು ಹೇಗಾದರೂ ಮಾತನಾಡಿಸಬೇಕೆಂದು ಯೋಚಿಸಿದ ಗೊರೂರರು ಅವರನ್ನು ಸಮೀಪಿಸಿ ಮೇಲಿನಂತೆ ಕೇಳಿದ್ದಾರೆ.

ಸ್ವಾರಸ್ಯ : ಅಪ್ಪಟ ಮುಸಲ್ಮಾನ ವ್ಯಕ್ತಿಯೊಬ್ಬ ಕನ್ನಡದಲ್ಲಿರುವ ಕುಮಾರವ್ಯಾಸ ಭಾರತವನ್ನು ಓದುತ್ತಿದ್ದುದನ್ನು ನೋಡಿ ಗೊರೂರರು ಆಶ್ಚರ್ಯ ಹೊಂದಿ ಅವರನ್ನು ಪ್ರಶ್ನಿಸುವ ಪ್ರಸಂಗ ಇದಾಗಿದೆ.

೨. " ನಾನು ಕಲಿತಿದ್ದು ಉರ್ದು ,ಕಲಿಸಿದ್ದು ಕನ್ನಡ ."

ಉ: ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ರಚಿಸಿರುವ ಕನ್ಯಾಕುಮಾರಿ ಮತ್ತು ಇತರ ಕಥೆಗಳು ಕಥಾಸಂಕಲನದಿಂದ ಆರಿಸಲಾದ 'ಕನ್ನಡ ಮೌಲ್ವಿ' ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಕನ್ನಡ ಮೌಲ್ವಿಯವರು ಗೊರೂರರಿಗೆ ಈ ಮಾತನ್ನು ಹೇಳಿದ್ದಾರೆ.

ಸಂದರ್ಭ : ಕುಮಾರವ್ಯಾಸ ಭಾರತವನ್ನು ಓದುತ್ತಿದ್ದ ಮುಸಲ್ಮಾನ ವ್ಯಕ್ತಿಯನ್ನು ತಾವು ಸಂಚರಿಸುತ್ತಿದ್ದ ಬಸ್ಸಿನಲ್ಲಿ ನೋಡಿದ ಗೊರೂರರು ಆಶ್ಚರ್ಯಚಕಿತರಾಗುತ್ತಾರೆ. ಅವರ ಬಗ್ಗೆ ಕುತೂಹಲವುಂಟಾಗಿ ಹತ್ತಿರ ಹೋಗಿ ಮಾತನಾಡಿಸುತ್ತಾರೆ. ಅವರ ಮಾತಿನಿಂದ ಅವರೊಬ್ಬ ನಿವೃತ್ತ ಉಪಾಧ್ಯಾಯರೆಂಬುದು ಗೊತ್ತಾಗುತ್ತದೆ. ಗೊರೂರರು ಅವರನ್ನು ನೀವು ಕನ್ನಡ ಉಪಾಧ್ಯಾಯರೋ ಅಥವಾ ಉರ್ದು ಉಪಾಧ್ಯಾಯರೋ ಎಂದು ಪ್ರಶ್ನಿಸಿದಾಗ ಅವರು ಕನ್ನಡ ಉಪಾಧ್ಯಾಯರು ಎನ್ನುತ್ತಾರೆ .ಪುನಃ ಗೊರೂರರು ನಿಮಗೆ ಉರ್ದು ಬರುವುದಿಲ್ಲವೇ ಎಂದಾಗ ಅವರು ಮೇಲಿನಂತೆ ಉತ್ತರಿಸುತ್ತಾರೆ.

ಸ್ವಾರಸ್ಯ : ಕನ್ನಡ ಮೌಲ್ವಿಯವರು ಉರ್ದು ಕಲಿತಿದ್ದರೂ ಅವರ ಅಭಿಮಾನ ಕನ್ನಡ ಭಾಷೆಯ ಬಗ್ಗೆ ಇರುವುದು ಇಲ್ಲಿ ವ್ಯಕ್ತವಾಗಿದೆ.

೩. "ನನ್ನ ಸಮಾನ ಪಾಠ ಮಾಡುವವರು ಯಾರೂ ಇಲ್ಲ."

ಉ: ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ರಚಿಸಿರುವ ಕನ್ಯಾಕುಮಾರಿ ಮತ್ತು ಇತರ ಕಥೆಗಳು ಕಥಾಸಂಕಲನದಿಂದ ಆರಿಸಲಾದ 'ಕನ್ನಡ ಮೌಲ್ವಿ' ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಗೊರೂರರಿಗೆ ಬಸ್ಸಿನಲ್ಲಿ ಭೆಟ್ಟಿಯಾದ ಕನ್ನಡ ಮೌಲ್ವಿ ಹೇಳಿದ್ದಾರೆ.

ಸಂದರ್ಭ :ಒಮ್ಮೆ ಗೊರೂರರರು ಬಸ್ಸಿನಲ್ಲಿ ಹೋಗುತ್ತಿದ್ದಾಗ ಧರ್ಮದಿಂದ ಮುಸಲ್ಮಾನನಾಗಿದ್ದರೂ ಕುಮಾರವ್ಯಾಸ ಭಾರತವನ್ನು ಓದುತ್ತಿದ್ದ ಮೌಲ್ವಿಯನ್ನು ನೋಡುತ್ತಾರೆ. ಅವರನ್ನು ಮಾತನಾಡಿಸಿ ಅವರು ಕನ್ನಡ ಉಪಾಧ್ಯಾಯರಾಗಿ ನಿವೃತ್ತರಾದವರು ಎಂಬುದನ್ನು ಅರಿಯುತ್ತಾರೆ. ಜಾತಿ ,ಭಾಷೆ ,ಪ್ರಾಂತ್ಯಗಳ ಗೊಂದಲದಲ್ಲಿ ನಮ್ಮನ್ನು ಮುಸುಕಿರುವ ಗೊಂದಲದಲ್ಲಿ ಮಿಂಚಿನಂತೆ ಕಾಣುವ ಮೌಲ್ವಿಯವರನ್ನು ನೋಡಿ ಆಶ್ಚರ್ಯ ಪಟ್ಟ ಗೊರೂರರು ಅವರನ್ನು ನೀವು ಕನ್ನಡ ಪಾಠ ಚೆನ್ನಾಗಿ ಮಾಡುತ್ತೀರಾ ಎಂದು ಕೇಳಿದಾಗ ಮೌಲ್ವಿಯವರು ಮೇಲಿನಂತೆ ಉತ್ತರಿಸುತ್ತಾರೆ.

ಸ್ವಾರಸ್ಯ : ಮೌಲ್ವಿಯವರು ಕಲಿತದ್ದು ಉರ್ದುವಾದರೂ ಕೇವಲ ಮೂರನೆಯ ತರಗತಿಯವರೆಗೆ ಕಲಿತ ಕನ್ನಡವನ್ನು ಬಳಸಿಕೊಂಡು ಕನ್ನಡ ಉಪಾಧ್ಯಾಯರಾಗಿರುವುದು ಮತ್ತು ಅವರ ಸಮ ಪಾಠ ಮಾಡುವವರು ಯಾರೂ ಇಲ್ಲವೆಂದು

ಎಲ್ಲರಿಂದ ಪ್ರಶಸ್ತಿ ಪಡೆದಿರುವುದು ಅವರಿಗೆ ಕನ್ನಡದ ಬಗೆಗಿನ ಅಭಿಮಾನದ ಜೊತೆ ಕನ್ನಡದಲ್ಲಿ ಅವರು ಹೊಂದಿದ್ದ ಪಾಂಡಿತ್ಯವನ್ನು ವ್ಯಕ್ತಪಡಿಸುವುದು.

೪. " ಅವರು ನಿಮ್ಮೆದುರಿಗೆ ಬಂದರೆ ಏನು ಮಾಡುತ್ತೀರಿ ?”

ಉ: ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ರಚಿಸಿರುವ ಕನ್ಯಾಕುಮಾರಿ ಮತ್ತು ಇತರ ಕಥೆಗಳು ಕಥಾಸಂಕಲನದಿಂದ ಆರಿಸಲಾದ 'ಕನ್ನಡ ಮೌಲ್ವಿ' ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಗೊರೂರರು ಬಸ್ಸಿನಲ್ಲಿ ತಮಗೆ ಭೆಟ್ಟಿಯಾದ ಕನ್ನಡ ಮೌಲ್ವಿಗೆ ಕೇಳಿದ್ದಾರೆ.

ಸಂದರ್ಭ : ಬಸ್ಸಿನಲ್ಲಿ ಸಿಕ್ಕ ಅಪ್ಪಟ ಮುಸಲ್ಮಾನನಂತಿದ್ದ ಕನ್ನಡ ಮೌಲ್ವಿಯವರ ಕುರಿತು ಕುತೂಹಲ ತಾಳಿದ ಗೊರೂರರು ಅವರನ್ನು ಮಾತನಾಡಿಸಿ ಅವರ ಪರಿಚಯ ಮಾಡಿಕೊಳ್ಳುತ್ತಾರೆ. ಅವರಿಗಿದ್ದ ಕನ್ನಡ ಅಭಿಮಾನವನ್ನು ಅರಿಯುತ್ತಾರೆ. ಮೌಲ್ವಿಯವರು ಗೊರೂರರನ್ನು ನೀವು ಎಲ್ಲಿಯವರು ? ಯಾವ ಹಳ್ಳಿ ಮುಂತಾಗಿ ವಿಚಾರಿಸಿದಾಗ ಗೊರೂರರು ಹಾಸನದ ಗೊರೂರಿನವರೆಂದು ಹೇಳಿಕೊಳ್ಳುತ್ತಾರೆ. ಆಗ ಮೌಲ್ವಿಯವರು ಅಲ್ಲಿನ ಒಬ್ಬ ಕನ್ನಡ ಲೇಖಕರು ಗೊರೂರು ರಾಮಸ್ವಾಮಿ ಅಯ್ಯಂಗಾರರು ಚೆನ್ನಾಗಿ ಕಥೆಗಳನ್ನು ಬರೆಯುತ್ತಾರೆ .ನೋಡಬೇಕಾದ ಮನುಷ್ಯರು ಎನ್ನುತ್ತಾರೆ. ಆಗ ಗೊರೂರರು ಅವರನ್ನು ಮೇಲಿನಂತೆ ಪ್ರಶ್ನಿಸುತ್ತಾರೆ.

ಸ್ವಾರಸ್ಯ : ಕನ್ನಡ ಮೌಲ್ವಿಯವರು ತಮ್ಮ ಬಗ್ಗೆ ಆಡಿದ ಅಭಿಮಾನದ ಮಾತುಗಳನ್ನು ಕೇಳಿದಾಗ ಆಕಸ್ಮಾತ್ತಾಗಿ ಎದುರಿಗೆ ಸಿಕ್ಕರೆ ಅವರ ಪ್ರತಿಕ್ರಿಯೆ ಹೇಗಿರಬಹುದೆಂಬ ಗೊರೂರರ ಕುತೂಹಲ ಇಲ್ಲಿ ವ್ಯಕ್ತವಾಗಿದೆ.

೫. "ನಾನೇ ಆ ಪ್ರಾಣಿ "

ಉ: ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ರಚಿಸಿರುವ ಕನ್ಯಾಕುಮಾರಿ ಮತ್ತು ಇತರ ಕಥೆಗಳು ಕಥಾಸಂಕಲನದಿಂದ ಆರಿಸಲಾದ 'ಕನ್ನಡ ಮೌಲ್ವಿ' ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಗೊರೂರರು ಹೇಳಿದ್ದಾರೆ.

ಸಂದರ್ಭ : ತಮಗೆ ಬಸ್ಸಿನಲ್ಲಿ ಸಿಕ್ಕಿದ ಕನ್ನಡ ಮೌಲ್ವಿಗಳನ್ನು ಗೊರೂರರು ಮಾತನಾಡಿಸಿ ಪರಿಚಯ ಮಾಡಿಕೊಳ್ಳುತ್ತಾರೆ. ಅವರು ಜಾತಿ ,ಭಾಷೆ,ಪ್ರಾಂತ್ಯಗಳ ಸೀಮೆಗೆ ಸೀಮಿತವಾದವರಲ್ಲ ಎಂಬುದನ್ನು ಅರಿಯುತ್ತಾರೆ. ಅವರಿಗಿದ್ದ ಕನ್ನಡ ಅಭಿಮಾನವನ್ನು ಅಲ್ಲದೇ ಅವರು ಗೊರೂರು ರಾಮಸ್ವಾಮಿ ಅಯ್ಯಂಗಾರರ ಬಗ್ಗೆ ಅಭಿಮಾನವೂ ಅವರ ಮಾತಿನಲ್ಲಿ ವ್ಯಕ್ತವಾಗಿದ್ದನ್ನು ಅರಿಯುತ್ತಾರೆ. ಅವರು ಎದುರಿಗೆ ಬಂದರೆ ಏನು ಮಾಡುವಿರಿ ಎಂದು ಕುತೂಹಲದಿಂದ ಪ್ರಶ್ನಿಸಿದಾಗ ಮೌಲ್ವಿಯವರು ಅವರನ್ನು ಆಲಂಗಿಸಿಕೊಳ್ಳುತ್ತೇನೆ ಎಂದು ತಮಗೆ ಗೊರೂರರ ಮೇಲಿದ್ದ ಅಭಿಮಾನವನ್ನು ವ್ಯಕ್ತಪಡಿಸುತ್ತಾರೆ.ಆಗ ಗೊರೂರರು ಮೇಲಿನಂತೆ ಹೇಳುತ್ತಾರೆ.

ಸ್ವಾರಸ್ಯ : ಬಸ್ಸಿನಲ್ಲಿ ಆಕಸ್ಮಾತ್ತಾಗಿ ಭೆಟ್ಟಿಯಾದ ಕನ್ನಡ ಮೌಲ್ವಿಯವರ ಪರಿಚಯ ಮಾಡಿಕೊಂಡ ಗೊರೂರರು ಆ ವ್ಯಕ್ತಿಯು ಕನ್ನಡದ ಬಗೆಗೆ ಮತ್ತು ಗೊರೂರರ ಬಗ್ಗೆಯೂ ಅಭಿಮಾನ ಹೊಂದಿದ್ದನ್ನು ತಿಳಿದು ಆಕಸ್ಮಾತ್ತಾಗಿ ಗೊರೂರರಿಗೆ ಅವರು ಮುಖಾಮುಖಿಯಾದರೆ ಏನು ಮಾಡುವಿರಿ ಎಂದು ಪ್ರಶ್ನಿಸಿ ಉತ್ತರ ಪಡೆಯುವ ಹಾಸ್ಯದ ಸಂದರ್ಭ ಇದಾಗಿದೆ.

ಭಾಷಾ ಚಟುವಟಿಕೆ

೧. ಆಗಮ ಸಂಧಿ ಎಂದರೇನು ?ಉದಾಹರಣೆ ಕೊಡಿ .

ಉ: ಸ್ವರದ ಮುಂದೆ ಸ್ವರವು ಬಂದು ಸಂಧಿಯಾದಾಗ ಪೂರ್ವ ಪದದ ಕೊನೆಯ ಸ್ವರ ಹಾಗೂ ಉತ್ತರ ಪದದ ಮೊದಲ ಸ್ವರಗಳ ಮಧ್ಯದಲ್ಲಿ 'ಯ್' ಕಾರವನ್ನು ಅಥವಾ 'ವ' ಕಾರವನ್ನು ಹೊಸದಾಗಿ ಸೇರಿಸಿ ಹೇಳಿದರೆ ಅದು ಆಗಮ ಸಂಧಿ .

ಉದಾ : ಹಳ್ಳಿ+ಅಲ್ಲಿ =ಹಳ್ಳಿಯಲ್ಲಿ , ಗುರು +ಅನ್ನು =ಗುರುವನ್ನು

೨. ಆದೇಶ ಸಂಧಿ ಎಂದರೇನು ? ಉದಾಹರಣೆ ಕೊಡಿ .

ಉ: ಉತ್ತರ ಪದದ ಆದಿಯಲ್ಲಿರುವ ಕ,ತ,ಪ ವ್ಯಂಜನಗಳಿಗೆ ಕ್ರಮವಾಗಿ ಗ,ದ,ಬ ವ್ಯಂಜನಗಳು ಆದೇಶವಾಗುವವು. ಇದನ್ನು ಆದೇಶ ಸಂಧಿ ಎನ್ನುವರು .

.೩ ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.

ಪಾತ್ರವನ್ನು ,ಶುದ್ದಿಯನ್ನು ,ಚಳಿಗಾಲ, ಪಡೆದಿದ್ದೇನೆ, ಬೆಮರ್ವನಿ ,

ಪಾತ್ರ+ಅನ್ನು =ಆಗಮಸಂಧಿ

ಶುದ್ಧಿ+ಅನ್ನು =ಆಗಮಸಂಧಿ

ಚಳಿ+ಕಾಲ=ಆದೇಶಸಂಧಿ

ಪಡೆದು+ಇದ್ದೇನೆ =ಲೋಪಸಂಧಿ

ಬೆಮರ್ +ಪನಿ =ಆದೇಶಸಂದಿ

ಕೊಟ್ಟಿರುವ ಪದಗಳನ್ನು ವಿಗ್ರಹಿಸಿ ಸಮಾಸ ಹೆಸರಿಸಿ.

ಮರಗಾಲು,ಹೆಮ್ಮರ, ಬೆಳ್ಗೊಡೆ,ಒಗ್ಗಟ್ಟು, ಸಪ್ತಸ್ವರಗಳು

ಮರದ+ಕಾಲು =ತತ್ಪುರುಷ ಸಮಾಸ

ಹಿರಿದು+ಮರ=ಕರ್ಮಧಾರಯ ಸಮಾಸ

ಬಿಳಿದು+ಕೊಡೆ =ಕರ್ಮಧಾರಯ ಸಮಾಸ

ಒಂದು+ಕಟ್ಟು =ದ್ವಿಗು ಸಮಾಸ

ಸಪ್ತಗಳಾದ +ಸ್ವರಗಳು=ದ್ವಿಗು ಸಮಾಸ

**ಕೊಟ್ಟಿರುವ ಗಾದೆಯನ್ನು ವಿಸ್ತರಿಸಿ ಬರೆಯಿರಿ.**

೧. ತುಂಬಿದ ಕೊಡ ತುಳುಕುವುದಿಲ್ಲ.

ಗಾದೆಗಳು ವೇದಗಳಿಗೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳು . ಗಾದೆಗಳು ನಮ್ಮ ಬಾಳಿಗೆ ಮಾರ್ಗದರ್ಶನ ನೀಡಿ ನಮ್ಮ ಬಾಳನ್ನು ಹಸನು ಗೊಳಿಸುತ್ತವೆ. ಅಂತಹ ಅಮೂಲ್ಯವಾದ ಗಾದೆ ಮಾತುಗಳಲ್ಲಿ ಮೇಲಿನ ಗಾದೆಯೂ ಒಂದಾಗಿದೆ.

ಕೊಡ ತುಂಬಿದ್ದರೆ ಸಾಧಾರಣಕ್ಕೆ ತುಳುಕುವ ಕಾರಣವಿಲ್ಲ . ಅರ್ಧಮರ್ಧ ಇರುವಾಗ ನಾವು ಸಹಜವಾಗಿ ಎತ್ತಿದರೆ ನೀರು ಮೇಲೆ ಚಿಮ್ಮಿ ನಮ್ಮ ಮುಖಕ್ಕೆ ಸಿಂಪಡಿಸಿದಂತಾಗುವುದು. ಈ ಗಾದೆಯನ್ನು ಜ್ಞಾನಿಗೂ ಅರೆಬರೆ ತಿಳಿದವನಿಗೂ ಇರುವ ವ್ಯತ್ಯಾಸ ತಿಳಿಸಲು ಬಳಸುತ್ತಾರೆ.

ನಿಜವಾದ ಜ್ಞಾನಿಯಾದವನು ತನ್ನ ಜ್ಞಾನ ,ಹೆಸರು ,ಗೌರವವನ್ನು ತಾನೇ ಪ್ರಚಾರ ಮಾಡಿಕೊಳ್ಳಲು ಹೋಗುವುದಿಲ್ಲ . ಆದರೆ ಅರೆಬರೆ ಕಲಿತ ವ್ಯಕ್ತಿಗಳು ತಮ್ಮನ್ನು ಮಾಹಾ ಜ್ಞಾನಿಗಳು .ತಾನೇ ಸರ್ವ ಶ್ರೇಷ್ಠ ಎಂಬಂತೆ ಸಮಾಜದಲ್ಲಿ ವರ್ತಿಸುತ್ತಾರೆ. ರಾಮಕೃಷ್ಣ ಪರಹಂಸರಂತವರು ಆಲ್ಬರ್ಟ್ ಐನ್ ಸ್ಟೈನ್ ನಂತಹ ಮಹಾನ್ ವ್ಯಕ್ತಿಗಳಿಗೆ ತಮ್ಮನ್ನು ಪ್ರಚಾರಕ್ಕೆ ಒಳಪಡಿಸಿಕೊಳ್ಳಬೇಕಾದ ಆವಶ್ಯಕತೆಯೇ ಇರುವುದಿಲ್ಲ.ಸಂದರ್ಭ ಬಂದಾಗಲೆಲ್ಲ ಮಹಾತ್ಮರ ವ್ಯಕ್ತಿತ್ವ ತಾನೇ ತಾನಾಗಿ ವ್ಯಕ್ತವಾಗುತ್ತದೆ. ಅಲ್ಪವಿದ್ಯಾ ಮಹಾಗರ್ವಿಗಳು ಅರ್ಧ ತುಂಬಿದ ಕೊಡದ ಹಾಗೆ ಕೊಡವನ್ನೆತ್ತಿದ್ದರೆ ನೀರು ತುಳುಕುವಂತೆ ಆವಶ್ಯಕತೆ ಇಲ್ಲದಿದ್ದರೂ ತಮ್ಮನ್ನು ಪ್ರಚಾರಕ್ಕೆ ಒಳಪಡಿಸಿಕೊಳ್ಳುತ್ತಾರೆ.

ಯಾವುದೇ ವಿಷಯದಲ್ಲಿ ಪೂರ್ಣ ಜ್ಞಾನ ಪಡೆಯಲು ಪ್ರಯತ್ನಿಸಬೇಕು .ಅರ್ಧ ಬೆಂದ ಇಟ್ಟಿಗೆಯಾಗಬಾರದು .ಸ್ವ ಪ್ರದರ್ಶನ ಮಾಡಿಕೊಳ್ಳುವುದು ,ಆತ್ಮ ಪ್ರಶಂಸೆ ಮಾಡಿಕೊಳ್ಳುವುದು ದೊಡ್ಡಸ್ತಿಕೆಯ ಲಕ್ಷಣವಲ್ಲ.

ಪೂರ್ಣ ವಿಚಾರವನ್ನು ಅರಿತವರು ಪ್ರಚಾರಪ್ರಿಯರಾಗಿರುವುದಿಲ್ಲ.ಸಂಯಮ ವುಳ್ಳವರಾಗಿರುತ್ತಾರೆ. ಆದರ್ಶಪ್ರಾಯರಾಗಿರುತ್ತಾರೆ.ಅರ್ಧ ತಿಳಿದುಕೊಂಡವರ ಮಾತಿನಲ್ಲಿ,ನಡೆನುಡಿಗಳಲ್ಲಿ ಸಂಯಮವಿರಲಾರದು. ಈ ಗಾದೆ ಮಾತಿನಲ್ಲಿ ಜ್ಞಾನಿಗಳನ್ನು, ತುಂಬಿದ ಕೊಡಕ್ಕೂ ಅರ್ಧ ತಿಳಿದು ಪ್ರಚಾರ ಪ್ರಿಯರಾಗಿರುವವರನ್ನು ಅರ್ಧ ತುಂಬಿದ ಕೊಡಕ್ಕೂ ಹೋಲಿಸಲಾಗಿದೆ.

# ಗದ್ಯ ಪಾಠ -೨ ಬೆಡಗಿನ ತಾಣ ಜಯಪುರ -ಡಾ ಶಿವರಾಮ ಕಾರಂತ

## ಕೃತಿಕಾರರ ಪರಿಚಯ ಪರಿಚಯ



ನಡೆದಾಡುವ ವಿಶ್ವಕೋಶ ,ಕಡಲ ತೀರದ ಭಾರ್ಗವ ಎಂದೇ ಖ್ಯಾತರಾಗಿದ್ದ ಡಾ.ಶಿವರಾಮ ಕಾರಂತರು ಉಡುಪಿ ಜಿಲ್ಲೆಯ ಕೋಟದವರು. ಇವರು ಜನಿಸಿದ್ದು ಕ್ರಿ.ಶ ೧೯೦೨ ಅಕ್ಟೋಬರ್ ೧೦ ರಂದು . ಕಾರಂತರು ಬರೆಯದೇ ಇದ್ದ ಸಾಹಿತ್ಯ ಕ್ಷೇತ್ರವೇ ಇಲ್ಲ ಎನ್ನಬಹುದು. ಚೋಮನ ದುಡಿ ,ಮರಳಿ ಮಣ್ಣಿಗೆ , ಬೆಟ್ಟದ ಜೀವ ,ಅಳಿದ ಮೇಲೆ ಇವೇ ಮೊದಲಾದ ಕಾದಂಬರಿಗಳನ್ನು ಬರೆದಿದ್ದಾರೆ. ಅಬೂವಿನಿಂದ ಬರಾಮಕ್ಕೆ , ಅಪೂರ್ವ ಪಶ್ಚಿಮ ,ಅರಸಿಕರಲ್ಲ, ಪಾತಾಳಕ್ಕೆ ಪಯಣ ಮೊದಲಾದ ಪ್ರವಾಸ ಕಥನಗಳನ್ನು ಇವರು ಬರೆದಿದ್ದಾರೆ. ಹುಚ್ಚು ಮನಸ್ಸಿನ ಹತ್ತು ಮುಖಗಳು ಎನ್ನುವುದು ಇವರ ಆತ್ಮಕಥನ . ಇವರು ಬರೆದ ಮೂಕಜ್ಜಿಯ ಕನಸುಗಳು ಎಂಬ ಕೃತಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಯಕ್ಷಗಾನ ಬಯಲಾಟ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಮೈಮನಗಳ ಸುಳಿಯಲ್ಲಿ ಕೃತಿಗೆ ಪಂಪ ಪ್ರಶಸ್ತಿ ದೊರೆತಿದೆ.

ಪ್ರಸ್ತುತ ಪ್ರವಾಸ ಕಥನ ಬೆಡಗಿನ ತಾಣ ಜಯಪುರ ಪಠ್ಯಭಾಗವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರತಂದಿರುವ ಶಿವರಾಮಕಾರಂತರ ಸಾಹಿತ್ಯ ಶ್ರೇಣಿಯ ಸಂಪುಟ -೩೨ ,ಭಾಗ -೨ ,ಗ್ರಂಥದ ಅಬುವಿನಿಂದ ಬರಾಮಕ್ಕೆ ಭಾಗದಿಂದ ಆರಿಸಿ ,ಸಂಪಾದಿಸಿ ನಿಗದಿಪಡಿಸಲಾಗಿದೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ .**

೧.ರೈಗಳ ಮನೆ ಎಂತಹ ಪ್ರದೇಶದಲ್ಲಿತ್ತು ?

ಉ: ನಾಲ್ಕು ಸುತ್ತಲೂ ಉಸುಬು ಹರಡಿದ್ದ ಮರುಭೂಮಿಯಲ್ಲಿ ರೈಗಳ ಮನೆಯಿತ್ತು.

೨. ಲೇಖಕರಿಗೆ ಜಯಪುರದ ಮನೆಗಳ ಮೇಲೆ ಮೋಹವೇಕೆ ?

ಉ: ಜಯಪುರದ ಒಂದೊಂದು ಮನೆಯೂ ಒಂದೊಂದು ಶೈಲಿಯದೂ ಒಂದೊಂದು ದೇಶದ್ದೂ ಆಗಿ ಕಾಣಿಸುವುದಿಲ್ಲ. ಆದ್ದರಿಂದ ಲೇಖಕರಿಗೆ ಅಲ್ಲಿನ ಮನೆಗಳ ಮೇಲೆ ಮೋಹ .

೩.ಜಯಪುರದ ಜನರಿಗೆ ಯಾವಯಾವ ಬಣ್ಣಗಳು ಇಷ್ಟ ?

ಉ: ಜಯಪುರದ ಜನರಿಗೆ ಕೆಂಪು ,ಕಿತ್ತಳೆ, ಹಳದಿ ಬಣ್ಣಗಳು ಎಂದರೆ ಇಷ್ಟ .

೪. ಜಯಪುರದ ಪೂರ್ವದ ರಾಜಧಾನಿ ಯಾವುದು ?

ಉ: ಜಯಪುರದ ಪೂರ್ವದ ರಾಜಧಾನಿ ಅಂಬೇರ

೫.ಲೇಖಕರಿಗಿದ್ದ ಹಂಬಲವೇನು ?

ಉ: ಜಯಪುರದ ಜಾನಪದ ನೃತ್ಯವನ್ನು ನೋಡಬೇಕೆಂಬುದು ಲೇಖಕರ ಹಂಬಲವಾಗಿತ್ತು .

**ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧.ಜಯಪುರದ ಬೀದಿ ಹಾಗೂ ಮನೆಗಳ ಸೌಂದರ್ಯವನ್ನು ವರ್ಣಿಸಿ.

ಉ: ಸುಮಾರು ಶತಮಾನಗಳ ಹಿಂದೆ ಜಯಪುರದ ನಗರದ ಬೀದಿಗಳು ನಿರ್ಮಾಣವಾಗಿದ್ದರೂ ಬಹಳ ಅಗಲವಾದ ಬೀದಿಗಳವು .ನೇರವಾದವುಗಳು . ಬಹುದೂರದಿಂದ ಕಾಣಿಸುವ ಅಂಗಡಿ ಮನೆಗಳ ದೇಶೀ ವಾಸ್ತು ರಚನೆ ಚೆನ್ನಾಗಿ ಶೋಭಿಸುತ್ತದೆ. ಇಲ್ಲಿನ ಒಂದೊಂದು ಮನೆಯೂ ಒಂದೊಂದು ಶೈಲಿಯದೂ ಒಂದೊಂದು ದೇಶದ್ದೂ ಆಗಿ ಕಾಣಿಸುವುದಿಲ್ಲ. ಇಲ್ಲಿನ ಮುಖ್ಯ ಬೀದಿಗಳು ಸಂಧಿಸುವ ಕಡೆಗಳಲ್ಲಿ ಸುಂದರವಾದ ಚೌಕಗಳು ಮತ್ತು ಕೆಲವೆಡೆಗಳಲ್ಲಿ ಮಹಾದ್ವಾರಗಳಿವೆ.

೨. ಲೇಖಕರ ಮೊದಲ ಅಂಬೇರ ಭೇಟಿಗೂ ಇತ್ತೀಚಿನ ಭೇಟಿಗೂ ಯಾವ ವ್ಯತ್ಯಾಸವಿತ್ತು ?

ಉ: ಲೇಖಕರು ಮೊದಲು ಅಂಬೇರಕ್ಕೆ ಭೇಟಿ ನೀಡಿದಾಗ ಅಲ್ಲಿ ಜನವಸತಿ ಇರಲಿಲ್ಲ. ಹಲವಾರು ಪ್ರಾಚೀನ ಗುಡಿ ಗೋಪುರಗಳು ಗೂಬೆಯ ಮನೆಗಳಾಗಿದ್ದವು. ಆದರೆ ಅವರು ಎರಡನೆಯ ಬಾರಿ ಭೆಟಿ ನೀಡಿದಾಗ ಅಲ್ಲಿ ನೂರಾರು ಸಿಂಧೀ ಕುಟುಂಬಗಳು ಮನೆ ಮಾಡಿಕೊಂಡಿದ್ದವು.

೩. ಮೀರಾಬಾಯಿ ದೇವಾಲಯದ ಸೌಂದರ್ಯವನ್ನು ವರ್ಣಿಸಿ.

ಉ: ಅಂಬೇರದ ಅರಮನೆಯ ಆವರಣದ ಹಿಂದುಗಡೆ ಇರುವ ತಗ್ಗಿನ ಕಣಿವೆಯ ತಳದಲ್ಲೇ ಕಾಣಿಸುತ್ತದೆ ಮೀರಾಬಾಯಿಯ ದೇವಾಲಯ .ಕೆಳಗಿಳಿದು ಹೋಗಿ ಗುಡಿಯನ್ನು ನೋಡಿದರೆ ಅದರ ಸೊಬಗು ಚೆನ್ನಾಗಿ ಕಾಣಿಸುತ್ತದೆ .ನಕ್ಷತ್ರಾಕೃತಿಯನ್ನು ತುಂಬಿಕೊಂಡ ಗರ್ಭಗೃಹ ನವರಂಗಗಳಿವೆ. ಗುಡಿಯ ಆವರಣ ಸುಂದರವಾಗಿದೆ.

೪. ಲೇಖಕರು ನೋಡಿದ ಜನಪದ ನೃತ್ಯದ ಸೊಬಗನ್ನು ವರ್ಣಿಸಿ.

ಉ: ಊರಿನ ಜನಸಾಮಾನ್ಯರ ನೃತ್ಯವಾಗಿತ್ತದು . ಇಬ್ಬರು ಯೌವನಸ್ಥರು ಸ್ತ್ರೀಯರ ಉಡುಗೆ ತೊಟ್ಟಿದ್ದರು. ಮಾರವಾಡಿ ಸ್ತ್ರೀಯರಂತೆ ತಲೆಗೆ ಸೆರಗು ಹಾಕಿಕೊಂಡು ,ಮುಖ ತೋರಿಸದೆ ಕುಣಿದರು. ಹಿಮ್ಮೇಳಕ್ಕೆ ಡೋಲು ತಮಟೆಗಳಿದ್ದವು.ಮುಂಭಾಗದಲ್ಲಿ ಸ್ತ್ರೀ ವೇಷದ ನರ್ತಕರು ಲಾಸ್ಯವೆಸಗಿದರು. ಅವರ ಕಾಲಿನ ನಡಿಗೆಯಲ್ಲೂ ಕೈಗಳ ಚಲನೆಯಲ್ಲೂ ಜಾಣ್ಮೆ ಚೆಲುವುಗಳೆರಡೂ ಇದ್ದವು.

ಐದು/ಆರು ವಾಕ್ಯಗಳಲ್ಲಿ ಉತ್ತರಿಸಿ.

೧. ಜಯಪುರದ ಜನರಿಗೆ ಬಣ್ಣಗಳ ಬಗೆಗೆ ಇರುವ ಮೋಹವನ್ನು ತಿಳಿಸಿ .

ಉ: ಜಯಪುರ ಬಣ್ಣಗಾರರ ತವರೂರು . ಬಣ್ಣ ಹಾಕುವ ಕುಶಲಿಗರು ,ಬಣ್ಣದ ಮೋಹವಿರುವ ಜನರೂ ಬಹಳ ಮಂದಿ ಇದ್ದಾರೆ. ಇಲ್ಲಿನ ಜನರು ಅದರಲ್ಲೂ ಹೆಂಗಸರು ರಂಗುರಂಗಿನ ಲಂಗ , ಪಾಯಿಜಾಮಾ , ಸೀರೆ ,ರವಿಕೆ ,ಮೇಲುದೆ ತೊಡುವ ಅಭ್ಯಾಸದವರು .ಅದರಲ್ಲೂ ಕೆಂಪು ,ಕಿತ್ತಳೆ ,ಹಳದಿ ಎಂದರೆ ಪ್ರಾಣ .ನಿತ್ಯವೂ ಹೋಳಿ ಹುಣ್ಣಿಮೆ ಮಾಡುವವರಂತೆ ಬಣ್ಣದ ಚೆಲ್ಲಾಟ ಅವರ ಬಟ್ಟೆಗಳಲ್ಲಿ .ಗಂಡಸರೂ ರಂಗುರಾಯರೇ . ಅವರ ಪಂಚೆ ಅಂಗಿಗಳಲ್ಲಿ ರಂಗು ಕಾಣಿಸದಿದ್ದರೂ ಮುಂಡಾಸಿನ ಮೂವತ್ತು ಮೊಳಗಳಲ್ಲಿ ಮುನ್ನೂರು ಬಣ್ಣಗಳನ್ನು ಮೆರೆಯಿಸುವುದುಂಟು . ಸುತ್ತುಸುತ್ತಿನ ಅವರ ದೇಶೀ ಮುಂಡಾಸನ್ನು ಚೆನ್ನಾಗಿ ಬಿಗಿದುಕೊಂಡಾಗ ಬಲು ಗಂಭೀರವಾಗಿಯೇ ಕಾಣಿಸುತ್ತದೆ.

೨.ಅಂಬೇರ ಬೆಟ್ಟದ ಮೂರು ಅಂತಸ್ತಿನ ಅರಮನೆಯ ಒಳಾಂಗಣ ಚೆಲುವನ್ನು ತಿಳಿಸಿ.

ಉ: ಅರಮನೆಯ ಮೊದಲ ಅಂತಸ್ತಿನ ಪುಟ್ಟ ದೇವಾಲಯದ ಚಿತ್ರ ಕೆಲಸಗಳಿಂದ ಕೂಡಿದ ಹಾಲುಗಲ್ಲಿನ ರಚನೆಯಿಂದ ಕೂಡಿದೆ. ಗೋಡೆ ,ನೆಲ ,ಸ್ತಂಭಗಳೂ ಹಾಲುಗಲ್ಲಿನಿಂದ ಕೂಡಿವೆ. ಗುಡಿಯ ವಿಗ್ರಹ ಆಕಾರ ಅಲಂಕಾರಗಳಿಂದ ಅಷ್ಟೊಂದು ಶೋಭಿಸದು. ಅಲ್ಲಿಂದ ಮುಂದೆ ಮೇಲಿನ ಅಂಗಳವನ್ನೇರಿದರೆ ದೊಡ್ಡದೊಂದು ಸಭಾಂಗಣ ,ಅದೂ ಹಾಲುಗಲ್ಲಿನ ರಚನೆ

,ಅದರ ಚಾವಣಿ ,ರಜಪುತಾನ ಶೈಲಿಯ ಕಮಾನು ಮತ್ತು ಕಂಬಗಳು ಲಲಿತವಾಗಿದ್ದು ಪರಸ್ಪರ ಹೊಂದಿಕೊಂಡು ಈ ರಚನೆಗೆ ಚೆಲುವು ನೀಡಿವೆ. ಎದುರಿನ ಅಂಗಣವೂ ಸಾಕಷ್ಟು ವಿಶಾಲವಾಗಿದೆ. ಮೂರನೆಯ ಅಂತಸ್ತಿನಲ್ಲಿರುವ ರಾಜರ ಅಂತಃಪುರದಲ್ಲಿ ಚಂದ್ರಕಾಂತ ಶಿಲೆಯ ಕೆಲವು ಸುಂದರ ಮಂಟಪಗಳಿವೆ. ಶಿಲೆಯನ್ನು ಕೆತ್ತಿ ಬಣ್ಣದ ಕಲ್ಲುಗಳಿಂದ ತುಂಬಿಸಿದ ಲತಾ ಪುಷ್ಪಗಳ ಚಿತ್ರಾವಳಿಗಳು ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ ಚಿತ್ರ ವಿಚಿತ್ರ ಪ್ರತಿರೂಪಗಳನ್ನು ನಿರ್ಮಿಸಿ ಅಲಂಕರಿಸಿದ ಕಂಬವಿದೆ. ಅರಮನೆಯ ಮೊದಲನೆಯ ಮಟ್ಟದಲ್ಲಿ ಹಾಲುಗಲ್ಲಿನ ಚಾವಡಿ ಮತ್ತು ನೀರಿನ ಕಾರಂಜಿಗಳಿವೆ.

೩. ಜಂತ್ರಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿಕೊಡಿ.

ಉ: ಜಂತ್ರ ಮಂತ್ರ ಹಳೆಯ ಕಾಲದ ಖಗೋಳ ವಿಜ್ಞಾನದ ಪರಿಶೀಲನಾಲಯ . ೪೦೦-೫೦೦ ವರ್ಷಗಳ ಪೂರ್ವದಲ್ಲಿ ಖಗೋಳ ಶಾಸ್ತ್ರಜ್ಞರು ಗ್ರಹ ,ಸೂರ್ಯ , ಚಂದ್ರ ತಾರಾಮಂಡಲಗಳನ್ನು ಅಳೆದು ಪರಿಶೀಲಿಸಿ ನೋಡುವ ಸಲುವಾಗಿ ,ಇಲ್ಲಿ ವಿಚಿತ್ರವಾದ ಸಾಧನಗಳನ್ನು ನೆಟ್ಟಿದ್ದಾರೆ ಗಳಿಗೆ ಅಳೆಯುವುದಕ್ಕೆ ಪ್ರತಿಯೊಂದು ತಿಂಗಳಿನಲ್ಲಿಯೂ ಸೂರ್ಯ ನಕ್ಷತ್ರಗಳ ಗತಿ ಪರಿಶೀಲಿಸುವುದಕ್ಕೆ ಏನೇನೋ ಏರ್ಪಾಟುಗಳಿವೆ. ಪ್ರತಿಯೊಂದು ಸಾಧನದ ಮೇಲೂ ಅವುಗಳ ಕಾಲ ಮತ್ತು ಉಪಯೋಗಗಳನ್ನು ಅಳೆಯುವ ರೀತಿ ಮೊದಲಾದವನ್ನು ನಮೂದಿಸಿದೆ. ದೂರದರ್ಶಿಯ ಸಹಾಯವಿಲ್ಲದೇ ,ಬರಿಗಣ್ಣಿನಿಂದಲೇ ಖಗೋಳದ ಗ್ರಹಗಳ ಗತಿಯನ್ನು ಅಳೆಯಲು ಮಾಡಿದ ಈ ಸಾಧನಗಳು ,ಗಣಿತಕ್ಕೂ ಸೂಕ್ಷ್ಮ ಪರಿಶೀಲನೆಗೂ ಹಿರಿಯರು ಸಲ್ಲಿಸಿದ ಕಾಣಿಕೆ .

ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ.

೧. ''ಅಲ್ಲಿ ಮಧ್ಯಾಹ್ನ ವೇಳೆ ಸ್ನಾನಕ್ಕೆ ನೀರು ಕಾಯಿಸುವ ಅಗತ್ಯವಿಲ್ಲ.''

ಉ:ಈ ಮೇಲಿನ ವಾಕ್ಯವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರತಂದಿರುವಶಿವರಾಮ ಕಾರಂತರ ಸಾಹಿತ್ಯ ಶ್ರೇಣಿಯ ಸಂಪುಟ ಗ್ರಂಥದ ಅಬೂವಿನಿಂದ ಬರಾಮಕ್ಕೆ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ : ಲೇಖಕರು ಮತ್ತು ಅವರ ಜೊತೆಯಿದ್ದ ಶ್ರೀಪತಿ ಜಯಪುರಕ್ಕೆ ಹೋದಾಗ ಬೆಳಗಿನ ೧೧ ಗಂಟೆ . ಅವರ ಸ್ನೇಹಿತ ರೈಯವರು ಅವರನ್ನು ಊರ ಹೊರಗಿನ ತಮ್ಮ ಮನೆಗೆ ಕರೆದುಕೊಂಡು ಹೋದರು. ಹೊರಗಡೆ ನಾಲ್ಕು ಸುತ್ತಲೂ ಉಸುಬು ಹರಡಿದ್ದ ಮರುಭೂಮಿಯಲ್ಲಿ ಅವರ ಮನೆಯಿತ್ತು. ಅಲ್ಲಿ ಮಧ್ಯಾಹ್ನ ಸ್ನಾನಕ್ಕೆ ನೀರು ಕಾಯಿಸುವ ಅಗತ್ಯ ಇರಲಿಲ್ಲ. ಏಕೆಂದರೆ ಉಸುಬಿನ ಕಾವಿಗೆ ನಲ್ಲಿ ನೀರು ಕಾದೇ ಬರುತ್ತಿತ್ತು ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಜಯಪುರವು ಎಂತಹ ತಾಪಮಾನ ಹೊಂದಿದ ಪ್ರದೇಶ ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೨. ''ಗಂಡಸರೂ ರಂಗುರಾಯರೇ ''

ಉ: ಈ ಮೇಲಿನ ವಾಕ್ಯವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರತಂದಿರುವಶಿವರಾಮ ಕಾರಂತರ ಸಾಹಿತ್ಯ ಶ್ರೇಣಿಯ ಸಂಪುಟ ಗ್ರಂಥದ ಅಬೂವಿನಿಂದ ಬರಾಮಕ್ಕೆ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಜಯಪುರದ ಜನರಿಗೆ ಬಣ್ಣಗಳ ಮೇಲೆ ವಿಪರೀತವಾದ ವ್ಯಾಮೋಹ . ಜಯಪುರ ಬಣ್ಣಗಾರರ ತವರೂರು. ಅದರಲ್ಲಿ ಹೆಂಗಸರು ರಂಗುರಂಗಿನ ಲಂಗ ,ಪಾಯಿಜಾಮಾ ,ಸೀರೆ ,ರವಿಕೆ ,ಮೇಲುದೆ ತೊಡುವ ಅಭ್ಯಾಸದವರು.ನಿತ್ಯವೂ ಹೋಳಿ ಹುಣ್ಣಿಮೆ ಮಾಡುವವರಂತೆ ಬಣ್ಣದ ಚೆಲ್ಲಾಟ ಅವರ ಬಟ್ಟೆಗಳಲ್ಲಿ .ಗಂಡಸರೂ ರಂಗುರಾಯರೇ ,ಅವರ ಪಂಚೆ ಅಂಗಿಗಳಲ್ಲಿ ರಂಗು ಕಾಣಿಸದಿದ್ದರೂ ಮುಂಡಾಸಿನ ಮೂವತ್ತು ಮೊಳಗಳಲ್ಲಿ ಮುನ್ನೂರು ಬಣ್ಣಗಳನ್ನು ಮೆರೆಯಿಸುವುದುಂಟು ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಜಯಪುರದ ಜನರಿಗೆ ಬಣ್ಣಗಳ ಬಗೆಗೆ ಇರುವ ಮೋಹವನ್ನು ಮೇಲಿನ ವಾಕ್ಯವು ಸೂಚಿಸುವುದು.

೩. ''ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು,.''

ಉ: ಈ ಮೇಲಿನ ವಾಕ್ಯವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರತಂದಿರುವಶಿವರಾಮ ಕಾರಂತರ ಸಾಹಿತ್ಯ ಶ್ರೇಣಿಯ ಸಂಪುಟ ಗ್ರಂಥದ ಅಬೂವಿನಿಂದ ಬರಾಮಕ್ಕೆ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ : ಲೇಖಕರು ಮೊದಲನೆಯ ಬಾರಿ ಅಂಬೇರಕ್ಕೆ ಹೋದಾಗ ಅಲ್ಲಿ ಜನವಸತಿ ಇರಲಿಲ್ಲ. ಹಲವಾರು ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು. ಆದರೆ ಎರಡನೆಯ ಬಾರಿಗೆ ಹೋದಾಗ ಅಲ್ಲಿ ಸಿಂಧಿ ಕುಟುಂಬಗಳು ವಾಸಿಸುತ್ತಿದ್ದವು ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಅಂಬೇರದ ಹಿಂದಿನ ಪರಿಸ್ಥಿತಿಯನ್ನು ,ಕೆಲವೇ ವರ್ಷಗಳಲ್ಲಿ ಅಲ್ಲಿ ಆದ ಬದಲಾವಣೆಯನ್ನು ಕುರಿತು ಲೇಖಕರು ಹೇಳಿದ್ದಾರೆ. ಅಲ್ಲಿ ಮೊದಲು ಈಗಿನಷ್ಟು ಜನವಸತಿ ಇರಲಿಲ್ಲವೆಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೪. '' ಚಾವಡಿಗೆ ನಕ್ಷತ್ರ ಲೋಕದ ಸೊಬಗನ್ನು ಕೊಡುತ್ತವೆ''

ಉ: ಈ ಮೇಲಿನ ವಾಕ್ಯವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರತಂದಿರುವಶಿವರಾಮ ಕಾರಂತರ ಸಾಹಿತ್ಯ ಶ್ರೇಣಿಯ ಸಂಪುಟ ಗ್ರಂಥದ ಅಬೂವಿನಿಂದ ಬರಾಮಕ್ಕೆ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ : ಅಂಬೇರದಲ್ಲಿರುವ ಅರಮನೆಯ ಮೂರನೆಯ ಅಂತಸ್ತಿನಲ್ಲಿ ಚಂದ್ರಕಾಂತ ಶಿಲೆಯ ಸುಂದರ ಮಂಟಪಗಳಿವೆ. ಇನ್ನೊಂದೆರಡು ಚಾವಡಿಗಳು ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ ,ಚಿತ್ರವಿಚಿತ್ರ ಪ್ರತಿರೂಪಗಳನ್ನು ನಿರ್ಮಿಸಿ ಅಲಂಕರಿಸಿದಂತಹ ಕಂಬ ,ಮುಚ್ಚಿಕೆಗಳುಳ್ಳ ರಚನೆ ,ಕತ್ತಲಿನಲ್ಲಿ ದೀವಿಗೆ ಹೊತ್ತಿಸಿದಾಗ ,ಲಕ್ಷೋಪಲಕ್ಷ ಈ ಗಾಜಿನ ತುಣುಕುಗಳು ಚಾವಡಿಗೆ ನಕ್ಷತ್ರ ಲೋಕದ ಸೊಬಗು ನೀಡಿವೆ ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಅಂಬೇರದ ಅರಮನೆಯ ಸೊಬಗು ಇಲ್ಲಿ ವರ್ಣಿತವಾಗಿದೆ.

ಬಿಟ್ಟ ಸ್ಥಳ ತುಂಬಿರಿ.

೧. ಜಯಪುರ ಬಣ್ಣಗಾರರ ----- (ತವರೂರು)

೨.ಚಿತ್ರ ಕೊರೆದು ಮಾಡಿದ ---- ನೀರ ಕಾಲುವೆಗಳು (ಹಾಲುಗಲ್ಲಿನ )

೩. --------- ಹಳೆಯ ಕಾಲದ ಖಗೋಳ ವಿಜ್ಞಾನ ವೀಕ್ಷಣಾಲಯ (ಜಂತ್ರಮಂತ್ರ )

೪. ಹಿಮ್ಮೇಳಕ್ಕೆ ---- ತಮಟೆಗಳಿದ್ದವು. (ಡೋಲು)

೫.ಮಿತ್ರ ರೈಗಳ ----- ವಂದನೆ ಸಲ್ಲಿಸಿದವು.(ಸತ್ಕಾರಕ್ಕೆ )

ಹೊಂದಿಸಿ ಬರೆದಿದೆ.

| ಅ | ಬ |
|---|---|
| ಅಂಬೇರ | ಪೂರ್ವಕಾಲದ ರಾಜಧಾನಿ |
| ಲಕ್ಷೋಪಲಕ್ಷ | ಗುಣಸಂಧಿ |
| ಬಣ್ಣಬಣ್ಣ | ದ್ವಿರುಕ್ತಿ |
| ಜಂತ್ರಮಂತ್ರ | ಖಗೋಳ ವೀಕ್ಷಣಾಲಯ |
| ಶೃಂಗಾರ | ತತ್ಸಮ |

ಭಾಷಾಚಟುವಟಿಕೆ

೧. ಸಂಸ್ಕೃತ ಸಂಧಿ ಎಂದರೇನು ?ಅದರ ವಿಧಗಳಾವುವು ?

ಉ: ಸಂಸ್ಕೃತ ಪದಗಳೇ ಸೇರಿ ಸಂಧಿಯಾದರೆ ಅವುಗಳನ್ನು ಸಂಸ್ಕೃತ ಸಂಧಿ ಎನ್ನುತ್ತಾರೆ. ಅದರಲ್ಲಿ ಸಂಸ್ಕೃತ ಸ್ವರಸಂಧಿ ಮತ್ತು ಸಂಸ್ಕೃತ ವ್ಯಂಜನ ಸಂಧಿ ಎಂದು ವಿಧಗಳಿವೆ.

೨.ಸವರ್ಣದೀರ್ಘ ಸಂಧಿ ಎಂದರೇನು ?

ಉ: ಸವರ್ಣಸ್ವರಗಳು ಒಂದರ ಮುಂದೊಂದು ಬಂದು ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ ಅದೇ ಜಾತಿಯ ದೀರ್ಘಸ್ವರ ಆದೇಶವಾಗಿ ಬಂದರೆ ಸವರ್ಣದೀರ್ಘ ಸಂಧಿ ಎನ್ನುವರು. ಉದಾ : ದೇವಾಲಯ

೩.ಗುಣಸಂಧಿ ಎಂದರೇನು ?ಉದಾಹರಣೆ ಕೊಡಿ.

ಉ: ಅ,ಆ ಕಾರಗಳಿಗೆ ಇ,ಈ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಏ ಕಾರವೂ ,ಉ ಊ ಕಾರಗಳು ಪರವಾದರೆ ಓ ಕಾರವೂ ಋ ಕಾರ ಪರವಾದರೆ ಅರ್ ಕಾರವೂ ಪರವಾದರೆ ಅದು ಗುಣಸಂಧಿ ಎನಿಸುವುದು.

೪. ಸಮಾಸ ಎಂದರೇನು ?ಅದರ ವಿಧಗಳಾವುವು ?

ಎರಡು ಅಥವಾ ಅದಕ್ಕಿಂತ ಹೆಚ್ಚು ಪದಗಳು ಸೇರಿ ಒಂದು ಪದವಾಗುವುದು ಸಮಾಸ ಎನಿಸುವುದು.

ಸಮಾಸದ ಪ್ರಕಾರಗಳು -

- ತತ್ವರುಷ ಸಮಾಸ
- ಕರ್ಮಧಾರಯ ಸಮಾಸ
- ದ್ವಂದ್ವ ಸಮಾಸ
- ದ್ವಿಗು ಸಮಾಸ
- ಅಂಶಿ ಸಮಾಸ
- ಬಹುವ್ರೀಹಿ ಸಮಾಸ
- ಕ್ರಿಯಾ ಸಮಾಸ
- ಗಮಕ ಸಮಾಸ

೫. ಅಂಶಿಸಮಾಸ ಎಂದರೇನು ?ಎರಡು ಉದಾಹರಣೆಗಳನ್ನು ಬರೆಯಿರಿ.

ಉ : ಪೂರ್ವೋತ್ತರ ಪದಗಳು ಅಂಶಾಂಶಿ ಭಾವ ಸಂಬಂಧದಿಂದ ಸೇರಿ ಪೂರ್ವ ಪದದ ಅರ್ಥ ಪ್ರಧಾನವಾಗುಳ್ಳ ಸಮಾಸವೇ ಅಂಶಿ ಸಮಾಸ .ಈ ಸಮಾಸವನ್ನು ಅವ್ಯಯೀ ಭಾವ ಸಮಾಸವೆಂತಲೂ ಕರೆಯುವರು.

ಉದಾ : ಅಂಗಾಲು ,ಮುಂಗಾಲು ,ನಡುರಾತ್ರಿ ಇತ್ಯಾದಿ

೬. ದ್ವಂದ್ವ ಸಮಾಸ ಎಂದರೇನು ?ಎರಡು ಉದಾಹರಣೆಗಳನ್ನು ಬರೆಯಿರಿ.

ಉ: ಎರಡು ಅಥವಾ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇರಿ ಎಲ್ಲಾ ಪದಗಳ ಅರ್ಥವೂ ಪ್ರಧಾನವಾಗಿ ಇರುವ ಸಮಾಸವೇ ದ್ವಂದ್ವಸಮಾಸ .

ಉದಾ : ಗುಡುಗುಸಿಡಿಲುಮಿಂಚುಗಳು ,ಗಿರಿವನದುರ್ಗಗಳು .

ಆ. ಕೊಟ್ಟಿರುವ ಪದಗಳಲ್ಲಿ ಅನುಸ್ವಾರ -ವಿಸರ್ಗ ಸಹಿತ ಅಕ್ಷರಗಳನ್ನು ಗುರುತಿಸಿ ಬರೆಯಿರಿ.

ಸ್ವತಃ -ತಃ ಸುಂದರ-ಸುಂ ರಂಗುರಂಗಿನ -ರಂ ಕೆಂಪು -ಕೆಂ ದುಃಖ -ದುಃ

ಹಿಂದೊಮ್ಮೆ - ಹಿಂ ಗಂಡಸರು - ಗಂ ಅಂತಃಕರಣ -ತಃ ಪಂಚೆ-ಪಂ ಅಂಗಿ -ಅಂ

ಮುಂಡಾಸು -ಮುಂ ಅಂಬೇರ -ಅಂ ಸಭಾಂಗಣ -ಭಾಂ ಅಂತಃಪುರ -ಅಂ ತಃ ಪುನಃ -ನಃ

ಜಂತ್ರ ಮಂತ್ರ -ಜಂ , ಮಂ ಅಂತಸ್ತು-ಅಂ

ಇ. ಕೊಟ್ಟಿರುವ ಪದಗಳಲ್ಲಿ ಅನುನಾಸಿಕ ಅಕ್ಷರಗಳನ್ನು ಗುರುತಿ ಬರೆಯಿರಿ.

ನಗರ-ನ ಮಧ್ಯ -ಮ ಪರಿಣಾಮ -ಣಾ ,ಮ ಬಣ್ಣ -ಣ್ಣ ನಿತ್ಯ -ನಿ ಜನ-ನ ಮನೆ -ಮ,ನೆ

ಕಣಿವೆ -ಣಿ ಮಂದಿರ -ಮಂ ವಿಜ್ಞಾನ-ನ

## ಗದ್ಯಪಾಠ –೩ ಧರ್ಮಸಮದೃಷ್ಟಿ – ಶಾಸನ

ಬುಕ್ಕರಾಯನ ಶಾಸನ ಪಾಠವು ದೇವಚಂದ್ರನ (೧೭೭೦–೧೮೪೧)ರಾಜಾವಳಿ ಕಥಾಸಾರದಲ್ಲಿ (ಕನ್ನಡ ಅಧ್ಯಯನ ಸಂಸ್ಥೆ ,ಮೈಸೂರು ವಿಶ್ವವಿದ್ಯಾನಿಲಯ,೧೯೮೮,ಪು.೧೯೮–೧೯೯)ಕೂಡ ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ ಬಂದಿದೆ.ಆ ಶಾಸನ ಪಾಠ ಹೀಗಿದೆ.... (ಈ ಗದ್ಯಭಾಗವನ್ನು ಬಿ.ಎಂ.ಶ್ರೀಯವರು ಸಂಪಾದಿಸಿದ ಕನ್ನಡಬಾವುಟ ಕೃತಿಯಿಂದ ಆಯ್ದುಕೊಳ್ಳಲಾಗಿದೆ.)

ಶಾಸನದ ಪಠ್ಯ –ಅರ್ಥ

ಒಳ್ಳೆಯದಾಗಲಿ, ನಾಸ್ತಿಕರೆಂಬ ಸಮುದ್ರವನ್ನು ಬತ್ತಿಸುವ ಬಡವಾಗ್ನಿಯಾಗಿ ,ಶ್ರೀರಂಗನಾಥನ ಪಾದಕಮಲಗಳ ಸೇವಕರಾಗಿ ,ಶ್ರೀ ವಿಷ್ಣು ಸನ್ನಿಧಿಯೆಂಬ ರತ್ನ ಮಂಟಪಕ್ಕೆ ಮಾರ್ಗದಾಯಕರಾಗಿ ಇರುವ ಯತಿರಾಜರಾಜರಾದ ರಾಮಾನುಜಾಚಾರ್ಯರಿಗೆ ಜಯವಾಗಲಿ.

ಶಕವರ್ಷ ೧೨೯೦ ನೆಯ ಕೀಲಕನಾಮ ಸಂವತ್ಸರಸದ ಭಾದ್ರಪದ ಮಾಸದ ಶುಕ್ಲಪಕ್ಷದ ದಶಮಿಯ ಗುರುವಾರದಂದು ಶ್ರೀ ಮನ್ ಮಹಾಮಂಡಳೇಶ್ವರನೂ ಶತ್ರು ರಾಜರನ್ನೂ ಸದೆಬಡಿಯುವವನೂ , ನುಡಿದಂತೆ ನಡೆಯದ ರಾಜರ ದರ್ಪವನ್ನು ಮುರಿಯುವವನೂ ಆದ ಶ್ರೀ ಬುಕ್ಕ ರಾಯನು ರಾಜ್ಯಭಾರ ಮಾಡುತ್ತಿರುವಾಗ ಜೈನರಿಗೂ ಶ್ರೀವೈಷ್ಣವರಿಗೂ ( ಒಂದು ಸಲ) ವಾಗ್ವಾದವಾಯಿತು. ಆಗ ಆನೆಯಗೊಂದಿ ,ಹೊಸಪಟ್ಟಣ ,ಪೆನುಗೊಂಡೆ,ಕಲ್ಲೆಹ –ಇವುಗಳನ್ನು ಒಳಗೊಂಡ ಎಲ್ಲ ನಾಡುಗಳ ಜೈನ ಮತೀಯರು (ಭವ್ಯಜನಂಗಳು )ಬುಕ್ಕರಾಯನಿಗೆ ಶ್ರೀವೈಷ್ಣವರು (ಭಕ್ತರು ) ಮಾಡುವ ಅನ್ಯಾಯಗಳನ್ನು ವಿಜ್ಞಾಪಿಸಿಕೊಂಡರು . .ಕೋವಿಲ್ ,ತಿರುಮಲೆ,ಪೆರುಮಾಳ್,ಕೋಯಿಲ್,ತಿರುನಾರಾಯಣಪುರ –ಇವೇ ಮುಖ್ಯವಾದ (ಕ್ಷೇತ್ರಗಳ) ಸಕಲಾಚಾರ್ಯರು , ಸಕಲಮಯಿಗಳು, ಸಕಲ ಸಾತ್ವಿಕರು ,ಮೋಕ್ಷಿಕರು , ತಿರುಪಣಿ, ತಿರುವಿಡಿ , ತಣ್ಣೀರವರು ನಾಲ್ವತ್ತೆಂಟು ಜನಗಳು ಸಾಮಂತ ಬೋವರು ಗಳು ತಿರಿಕುಲ ಜಾಂಬವ ಕುಲ ಒಳಗೊಂಡ ಹದಿನೆಂಟು ನಾಡುಗಳ ಶ್ರೀವೈಷ್ಣವರನ್ನು ಬರಮಾಡಿಕೊಂಡು ಮಹಾರಾಜನು ವೈಷ್ಣವರ ಕೈಯಲ್ಲಿ ಜೈನರ ಕೈಯನ್ನು ಹಿಡಿದು ಕೊಟ್ಟು ವೈಷ್ಣವ ಧರ್ಮಕ್ಕೂ ಜೈನಧರ್ಮಕ್ಕೂ ಭೇದವಿಲ್ಲವೆಂದು ಹೇಳಿದನು.

ಜೈನಧರ್ಮಕ್ಕೆ ಈ ಹಿಂದೆ ಸಲ್ಲುತ್ತಿದ್ದಂತೆ ( ಪೂರ್ವಮರ್ಯಾದೆಯಲು ) ಪಂಚಮಹಾವಾದ್ಯಗಳು (ಶೃಂಗವಾದ್ಯ,ತಮಟೆ, ಶಂಖ,ಭೇರಿ,ಜಯಘಂಟೆ)ಕಳಶವು ಸಲ್ಲುವುದು ಶ್ರೀ ವೈಷ್ಣವರ ಕಡೆಯಿಂದ ಜೈನಧರ್ಮಕ್ಕೆ ಯಾವುದೇ ಹಾನಿಯಾಗಲಿ ವೃದ್ಧಿಯಾಗಲಿ ಆದರೆ ಅದು ವೈಷ್ಣವ ಧರ್ಮಕ್ಕೆ ಆದ ಹಾನಿಯೆಂದು ವೃದ್ಧಿಯೆಂದು ಶ್ರೀವೈಷ್ಣವರು ತಿಳಿಯಬೇಕು . . ಈ ನಿಯಮದಂತೆ (ಮರ್ಯಾದೆಯಲು ) ರಾಜ್ಯದಲ್ಲಿರುವ ಎಲ್ಲಾ ಬಸದಿಗಳಲ್ಲಿ ಶ್ರೀ ವೈಷ್ಣವರೇ ಶಾಸನವನ್ನು ಹಾಕಿಸಿ ಇದನ್ನು ಪಾಲಿಸಬೇಕು . ಚಂದ್ರ ಸೂರ್ಯರು ಇರುವವರೆಗೆ ವೈಷ್ಣವ ಧರ್ಮವು ಜೈನಧರ್ಮವನ್ನು ರಕ್ಷಿಸಿಕೊಂಡು ಬರುತ್ತದೆ. ವೈಷ್ಣವ ಧರ್ಮ ಜೈನಧರ್ಮಗಳು ಒಂದೇ,ಅವುಗಳ ನಡುವೆ ಭೇದವಿಲ್ಲ .ಅದನ್ನು ಬೇರೆ ಬೇರೆ ಎಂದು ತಿಳಿಯಬಾರದು . ಶ್ರೀ ತಿರುಮಲೆ ತಾತಯ್ಯನವರು ರಾಜ್ಯದ ಎಲ್ಲ ಜೈನ ಮತೀಯರ ಅನುಮತಿಯಂತೆ ಶ್ರವಣ ಬೆಳುಗೊಳ ಕ್ಷೇತ್ರದಲ್ಲಿ (ಬೆಳುಗೊಳ ತೀರ್ಥದಲ್ಲಿ ) ವೈಷ್ಣವ (=ವಿಷ್ಣು ದೇವಾಲಯ )ಅಂಗರಕ್ಷೆಗೆ (ಎಂದರೆ ಕಾವಲಿನ ವ್ಯವಸ್ಥೆಗಾಗಿ) ರಾಜ್ಯದಲ್ಲಿರು ವ ಎಲ್ಲ ಜೈನರು ಬಾಗಿಲು ಗಟ್ಟಳೆಯಾಗಿ (ಪ್ರತಿಮನೆಯವರು )ಮನೆಮನೆಗೆ ವರ್ಷಕ್ಕೆ ಒಂದು ಹಣ ಎಂದು ಕೊಡಬೇಕು. ಹಾಗೆ ಸಂಗ್ರಹಿಸಿದ ಹೊನ್ನಿನಿಂದ ದೇವರ ಕಾವಲಿಗೆ ಇಪ್ಪತ್ತು ಜನರನ್ನು ನೇಮಿಸಬೇಕು .ಉಳಿದ ಹೊನ್ನಿನಿಂದ ಜೀರ್ಣಜಿನಾಲಯಗಳಿಗೆ ಸು ಣ್ಣವನ್ನು ಬಳಸಬೇಕು . ಈ ನಿಯಮದಂತೆ ಚಂದ್ರಸೂರ್ಯರು ಇರುವವರೆಗೆ ಪ್ರತಿವರ್ಷ ಹೊನ್ನನ್ನು ಕೊಟ್ಟು ಕೀರ್ತಿಯನ್ನು ಪುಣ್ಯವನ್ನು (ಜೈನರು ಅರ್ಜಿಸಿಕೊಳ್ಳಲಿ) ಹೀಗೆ ಮಾಡಿದ ಕಟ್ಟಳೆಯನ್ನು ಯಾರು ಮೀರಿದರೂ ಆತ ರಾಜದ್ರೋಹಿ .ಜೈನ ಸಂಘ –ವೈಷ್ಣವ ಸಮಾಜಗಳಿಗೆ ದ್ರೋಹಿ ,ಮುನಿಯಾಗಲಿ,ಗ್ರಾಮೀಣನಾಗಲಿ ಈ ಧರ್ಮವನ್ನು ಯಾರಾದರೂ ಕೆಡಿಸಿದರೆ ಅವರು ಗಂಗಾನದಿಯ ದಡದಲ್ಲಿ ಹಸುವನ್ನೂ ಬ್ರಾಹ್ಮಣನ್ನೂ ಕೊಂದ ಪಾಪಕ್ಕೆ ಗುರಿಯಾಗುತ್ತಾರೆ.

ತಾನು ಕೊಟ್ಟದ್ದಾಗಲಿ , ಬೇರೆಯವರು ಕೊಟ್ಟದ್ದಾಗಲಿ ಅಪಹರಿಸಿದ್ದಾದರೆ ಅಂಥವನು ಈ ಭೂಮಿಯಲ್ಲಿ ಅರವತ್ತು ಸಾವಿರ ಕ್ರಿಮಿಯಾಗಿ ಹುಟ್ಟುತ್ತಾನೆ.ಕಲ್ಲೆಹದ ಬುಸುವಿ ಸೆಟ್ಟಿ ಬುಕ್ಕರಾಯರಿಗೆ ವಿಜ್ಞಾಪನೆ ಮಾಡಿ ತಿರುಮಲೆ ತಾತಯ್ಯನವರನ್ನು ಕರೆದುಕೊಂಡು ಬಂದು ಜೀರ್ಣೋದ್ಧಾರವನ್ನು ಮಾಡಿಸಿದರು . ಎರಡು ಧರ್ಮದವರೂ ಸೇರಿಕೊಂಡು ಬುಸುವಿ ಸೆಟ್ಟಿಗೆ ಸಂಘನಾಯಕ (ಜೈನ ಸಮಾಜದ ಮುಖ್ಯಸ್ಥ) ಪಟ್ಟವನ್ನು ಕಟ್ಟಿದರು.

_೧. ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧.ಬುಕ್ಕರಾಯನ ಹಿರಿಮೆ ಏನು ?

ಉ: ವಿಶಾಲ ಸಾಮ್ರಾಜ್ಯದ ಒಡೆಯನಾಗಿದ್ದು ಶತ್ರು ರಾಜರನ್ನು ಸದೆಬಡಿಯುವವನೂ ,(ಅರಿರಾಯ ವಿಭಾಡ) ನುಡಿದಂತೆ ನಡೆಯದ ರಾಜರ ದರ್ಪವನ್ನು ಮುರಿಯುವವ(ಭಾಷೆಗೆ ತಪ್ಪುವ ರಾಯರ ಗಂಡ)ನೂ ಆಗಿದ್ದುದು ಬುಕ್ಕರಾಯನ ಹಿರಿಮೆಯಾಗಿತ್ತು .

೨.ಬುಕ್ಕ ರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು ?

ಉ: ಬು ಕ್ಕ ರಾಯನ ರಾಜ್ಯಭಾರ ಕಾಲದಲ್ಲಿ ಜೈನ (ಭವ್ಯಜನ)ರಿಗೂ ವೈಷ್ಣವ(ಭಕ್ತರು )ರಿಗೂ ಸಂವಾದ (ಘರ್ಷಣೆ) ನಡೆಯಿತು .

೩.ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು ?

ಉ: ನಾಡ ಭವ್ಯ ಜನರು ಬುಕ್ಕರಾಯನ ಬಳಿ ಬಂದು ಭಕ್ತರು ಮಾಡುವ ಅನ್ಯಾಯಗಳನ್ನು ಬಿನ್ನಹ ಮಾಡಿದರು .

೪.ಶ್ರೀ ವೈಷ್ಣವರೊಡನೆ ಮಹಾರಾಜನು ಏನು ಹೇಳಿದನು ?

ಉ: ಶ್ರೀವೈಷ್ಣವರ ಕೈಯಲ್ಲಿ ಜೈನರ ಕೈಯನ್ನು ಹಿಡಿಸಿಕೊಟ್ಟು ಬುಕ್ಕ ರಾಯನು ವೈಷ್ಣವ ಧರ್ಮಕ್ಕೂ ಜೈನಧರ್ಮಕ್ಕೂ ಯಾವುದೇ ಭೇದವಿಲ್ಲ.ಪರಸ್ಪರ ಹೊಂದಿಕೊಂಡಿರಬೇಕು ಎಂದು ಹೇಳಿದನು.

೫.ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು ?

ಉ: ರಾಯನು ವಿಧಿಸಿದ ಕಟ್ಟಳೆ ಮೀರಿದವನು ರಾಜದ್ರೋಹಿ ಎಂದು ತೀರ್ಮಾನಿಸಲಾಗುವುದು (ಶಿಕ್ಷೆಗೆ ಒಳಪಡಿಸಲಾಗುವುದು ).

ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧.' ಧರ್ಮ ಸಮದೃಷ್ಟಿ ' ಪಾಠದಲ್ಲಿ ರಾಮಾನು ಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?

ಉ: ಶ್ರೀ ರಾಮಾನು ಜಾಚಾರ್ಯರು ನಾಸ್ತಿಕರೆನ್ನುವ ಸಮುದ್ರವನ್ನು ಬತ್ತಿಸುವ ಬಡವಾಗ್ನಿಯಂತೆ ಇರುವವರು , ಶ್ರೀ ರಂಗನಾಥನ ಪಾದ ಕಮಲಗಳ ಸೇವಕರು (ಪರಮ ಭಕ್ತರು ), ಶ್ರೀ ವಿಷ್ಣು ಸನ್ನಿಧಿಯೆಂಬ ರತ್ನ ಮಂಟಪಕ್ಕೆ ಮಾರ್ಗದಾಯಕರೂ (ಶ್ರೀ ವಿಷ್ಣು ವಿನ ಕೃಪೆಗೆ ಪಾತ್ರರಾಗಲು ದಾರಿ ತೋರು ವವರು ) ಯತಿರಾಜರಾಜರು ಆದ ಶ್ರೀ ರಾಮಾನುಜಾಚಾರ್ಯರಿಗೆ ಜಯವಾಗಲಿ ಎಂದು ರಾಮಾನುಜಾಚಾರ್ಯರ ಗುಣ ವಿಶೇಷತೆಯನ್ನು ಧರ್ಮಸಮದೃಷ್ಟಿ ಪಾಠ (ಬುಕ್ಕರಾಯನ ಶಾಸನ)ದಲ್ಲಿ ವರ್ಣಿಸಲಾಗಿದೆ.

೨.ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು ?

ಉ: ಕ್ರಿ .ಶ. ೧೩೬೮ರಲ್ಲಿ ವಿಜಯನಗರವನ್ನು ಆಳುತ್ತಿದ್ದ ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಶ್ರೀರಂಗ ,ತಿರುಪತಿ ,ಕಾಂಚೀಪುರ ,ಮೇಲುಕೋಟೆ (ಕೋವಿಲ್,ತಿರು ಮಲೆ,ಪೆರುಮಾಳ್ ಕೋವಿಲ್,ತಿರುನಾರಾಯಣಪುರ )ಇವೇ ಮೊದಲಾದ ಕ್ಷೇತ್ರಗಳಿಂದ ಮುಖ್ಯರಾದ ಸಕಲಾಚಾರ್ಯರು ,ಸಕಲಮಯಿಗಳು ,ಸಕಲ ಸಾತ್ವಿಕರು ,ಮೋಷ್ಠಿಕರು (ಅಕ್ಕಸಾಲಿಗಳು ),ತಿರುಪಣಿ ತಿರುವಿಡಿ ತಣ್ಣೀರವರೂ (ರಾಟೆ ತಿರುಗಿಸಿ ನೀರು ಹರಿಸುವವರು )ಸಾವಂತ ,ಬೋವಕ್ಕಳೂ (ಮಲೆನಾಡು

ಪ್ರದೇಶದಲ್ಲಿ ವಾಸಿಸುವ ಒಂದು ವರ್ಗ), ತಿರಿಕುಲ(ಅಲೆಮಾರಿ)ದವರು ,ಜಾಂಬವ ಕುಲ (ಕರಡಿ ಗುರುತಿನ ಧ್ವಜವುಳ್ಳ ದೊರೆಯ ಕುಲದವರು ) ಮೊದಲಾದ ಹದಿನೆಂಟು ನಾಡ ಶ್ರೀವೈಷ್ಣವರನ್ನು ಆಹ್ವಾನಿಸಿದನು .

೩.ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು ?
ಉ: ಶ್ರೀ ತಿರುಮಲೆ ತಾತಯ್ಯನವರು ರಾಜ್ಯದ ಎಲ್ಲ ಜೈನಮತೀಯರ ಅನುಮತದಂತೆ ಶ್ರವಣಬೆಳಗೊಳ ಕ್ಷೇತ್ರದಲ್ಲಿ ವೈಷ್ಣವ (ವಿಷ್ಣು ದೇವಾಲಯ )ಅಂಗರಕ್ಷೆಗೆ (ಎಂದರೆ ಕಾವಲಿನ ವ್ಯವಸ್ಥೆಗೆ) ರಾಜ್ಯದಲ್ಲಿರುವ ಎಲ್ಲ ಜನರು ಬಾಗಿಲು ಗಟ್ಟಳೆಯಾಗಿ (ಪ್ರತಿ ಮನೆಮನೆಯವರು )ಮನೆಮನೆಗೆ ವರ್ಷಕ್ಕೆ
ಒಂದು ಹಣ ಎಂದು ಕೊಡಬೇಕು . ಹಾಗೆ ಸಂಗ್ರಹಿಸಿದ ಹೊನ್ನಿನಿಂದ ದೇವರ ಕಾವಲಿಗೆ ಇಪ್ಪತ್ತು ಜನರನ್ನು ನೇಮಿಸಬೇಕು .ಉಳಿದ ಹೊನ್ನಿನಿಂದ ಜೀರ್ಣ ಜಿನಾಲಯಗಳಿಗೆ ಸುಣ್ಣವನ್ನು ಬಳಿಸಬೇಕು . ಈ ನಿಯಮದಂತೆ ಚಂದ್ರ ಸೂರ್ಯರು ಇರುವವರೆಗೆ ಪ್ರತಿವರ್ಷ ಹೊನ್ನನ್ನು ಕೊಟ್ಟು ಕೀರ್ತಿಯನ್ನು ಪುಣ್ಯವನ್ನು ಅರ್ಜಿಸಿಕೊಳ್ಳಲಿ ಎಂದು ಬುಕ್ಕ ರಾಯನು ಜೈನ ಧರ್ಮದ ಸುಧಾರಣೆಗಾಗಿ ಕ್ರಮ ತೆಗೆದು ಕೊಂಡನು..

.ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.
ಬುಕ್ಕ ರಾಯನು ತನ್ನ ಆಳ್ವಿಕೆಯಲ್ಲಿ ಧರ್ಮಸಮದೃಷ್ಟಿಯನ್ನು ಹೇಗೆ ಆಚರಣೆಗೆ ತಂದನು ?
ಉ: ವಿಜಯನಗರ ಸಾಮ್ರಾಜ್ಯದ ಅರಸ ಬುಕ್ಕರಾಯನು ರಾಜ್ಯಭಾರ ಮಾಡುತ್ತಿದ್ದ ಸಮಯದಲ್ಲಿ ಭವ್ಯಜನಂಗಳು (ಜೈನರು) ಬಂದು ಶ್ರೀ ವೈಷ್ಣವರು ತಮಗೆ ಮಾಡುತ್ತಿದ್ದ ಅನ್ಯಾಯಗಳನ್ನು ಬಿನ್ನವಿಸಿಕೊಂಡಾಗ ಶ್ರೀ ರಂಗ, ತಿರುಪತಿ ,ಕಾಂಚಿಪುರ .ಮೇಲು ಕೋಟೆ (ಕೋವಿಲ್,ತಿರುಮಲೆ,ಪೆರುಮಾಳ್ ಕೋಯಿಲ್,ತಿರುನಾರಾಯಣಪುರ ) ಮೊದಲಾದ ಕ್ಷೇತ್ರಗಳ ಸಕಲಾಚಾರ್ಯರು ಸಕಲಮಯಿಗಳು ,ಸಕಲ ಸಾತ್ವಿಕರು ,ನಾಲ್ವತ್ತೆಂಟು ಜನಗಳು , ಸಾಮಂತರು , ಮೊದಲಾದ ಹದಿನೆಂಟು ನಾಡುಗಳ ಶ್ರೀ ವೈಷ್ಣವರನ್ನು ಬರಮಾಡಿಕೊಂಡು ಮಹಾರಾಜನು ವೈಷ್ಣವರ ಕೈಯಲ್ಲಿ ಜೈನರ ಕೈಯನ್ನು ಹಿಡಿಸಿಕೊಟ್ಟು ವೈಷ್ಣವ ಧರ್ಮಕ್ಕೂ ಜೈನಧರ್ಮಕ್ಕೂ ಭೇದವಿಲ್ಲೆಂದು ಹೇಳಿದನು .ಜೈನ ಧರ್ಮಕ್ಕೆ ಈ ಹಿಂದೆ ಸಲ್ಲು ತ್ತಿದ್ದಂತೆ ಪಂಚಮಹಾವಾದ್ಯಗಳು ಕಳಶವು ಸಲ್ಲುವುದು .ಶ್ರೀವೈಷ್ಣವರ ಕಡೆಯಿಂದ ಜೈನಧರ್ಮಕ್ಕೆ ಹಾನಿ ಅಥವಾ ವೃದ್ಧಿ ಸಂಭವಿಸಿದರೆ ಅದು ವೈಷ್ಣವ ಧರ್ಮಕ್ಕೆ ಆದುದು ಎಂದು ತಿಳಿಯಬೇಕು . .ಈ ನಿಯಮದಂತೆ ರಾಜ್ಯದಲ್ಲಿರುವ ಎಲ್ಲಾ ಬಸದಿಗಳಲ್ಲಿ ಶ್ರೀ ವೈಷ್ಣವರೇ ಶಾಸನವನ್ನು ಹಾಕಿಸಿ ಪಾಲಿಸಬೇಕು .ಅಷ್ಟೇ ಅಲ್ಲ ಜೈನರೂ ಸಹ ಶ್ರವಣಬೆಳಗೊಳ ಕ್ಷೇತ್ರದಲ್ಲಿ ಶ್ರೀ ವೈಷ್ಣವ ಅಂಗ ರಕ್ಷೆಗೆ ಪ್ರತಿ ಮನೆಗೊಂದರಂತೆ ಹಣವನ್ನು ಸಂಗ್ರಹಿಸಿ , ಸಂಗ್ರಹಿಸಿದ ಹಣದಿಂದ ದೇವರ ಕಾವಲಿಗೆ ಇಪ್ಪತ್ತು ಆಳನ್ನು (ಜನರನ್ನು ) ನೇಮಿಸಿ ಉಳಿದ ಹಣವನ್ನು ಜೈನ ಜಿನಾಲಯಗಳ ಜೀರ್ಣೋದ್ಧಾರಕ್ಕೆ ವಿನಿಯೋಗಿಸಬೇಕು .ಈ ನಿಯಮವನ್ನು ಜೈನರೂ ವೈಷ್ಣವರೂ ಚಂದ್ರ ಸೂರ್ಯರು ಇರುವವರೆಗೆ ಪಾಲಿಸಿ ಪ್ರತಿವರ್ಷ ಹೊನ್ನನ್ನು ಕೊಟ್ಟು ಕೀರ್ತಿಯನ್ನು ,ಪುಣ್ಯವನ್ನೂ ಸಂಪಾದಿಸಲಿ .ಇದನ್ನು ಮೀರಿದವನು ರಾಜದ್ರೋಹಿಯೆನಿಸುವನು (ಶಿಕ್ಷೆ ಖಚಿತ )ಎಂದು ಆದೇಶ ಹೊರಡಿಸಿದ ಬುಕ್ಕರಾಯನು ವೈಷ್ಣವ ಮತ್ತು ಜೈನರು ಎಂದು ಪ್ರತ್ಯೇಕವಾಗಿ ಕಾಣಲಾಗದು .ಅವೆರಡೂ ಒಂದೇ ಎಂದು ತನ್ನ ಆಳ್ವಿಕೆಯಲ್ಲಿ 'ಧರ್ಮಸಮದೃಷ್ಟಿ' ಯನ್ನು ಆಚರಣೆಗೆ ತಂದನು .

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.
೧." ಪಾಷಂಡ ಸಾಗರ ಮಹಾಬಡವಾಮುಖಾಗ್ನಿಃ."
ಉ: ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರು ಸಂಪಾದಿಸಿದ ಕನ್ನಡ ಬಾವುಟ ಎನ್ನುವ ಕೃತಿಯಿಂದ ಆರಿಸಲಾದ ಧರ್ಮ ಸಮದೃಷ್ಟಿ ಪಾಠದಿಂದ ಆಯ್ದು ಕೊಳ್ಳಲಾಗಿದೆ

ಈ ಮಾತನ್ನು ರಾಮಾನು ಜಾಚಾರ್ಯರನ್ನು ಕುರಿತು ಹೇಳಲಾಗಿದೆ.

ಸಂದರ್ಭ: ರಾಮಾನು ಜಾಚಾರ್ಯರು ನಾಸ್ತಿಕರೆನ್ನುವ ಸಾಗರದ ನೀರನ್ನು ಇಂಗಿಸಬಲ್ಲ ಬಡವಾಗ್ನಿಯಂತವರು . ಅಂದರೆ ತಮ್ಮ ಕಾಲದ ಜನರಲ್ಲಿ ವಿಷ್ಣುವಿನ ಕುರಿತು ಭಕ್ತಿ ಭಾವ ಮೂಡಿಸಿ ಶ್ರೀ ವಿಷ್ಣುವಿನ ಮುನಿಮಂಟಪಕ್ಕೆ ದಾರಿ ತೋರಿಸುವವರಾಗಿದ್ದರು..ಎಂದು ವಿಜಯನಗರಸಾಮ್ರಾಜ್ಯದ ಅರಸ ಬುಕ್ಕರಾಯನ ಶಾಸನದಲ್ಲಿ ಹೇಳಲಾಗಿದೆ.

ಸ್ವಾರಸ್ಯ:ಶ್ರೀರಾಮಾನುಜಾಚಾರ್ಯರು ವಿಷ್ಣುವಿನ ಪರಮ ಭಕ್ತರಾಗಿದ್ದು ನಾಸ್ತಿಕತೆಯನ್ನು ಹೋಗಲಾಡಿಸಿ ,ಭಕ್ತರಿಗೆ ವಿಷ್ಣುವಿನ ಕೃಪಾಕಟಾಕ್ಷಕ್ಕೆ ಪಾತ್ರರಾಗಲು ದಾರಿ ತೋರಿಸುವವರಾಗಿದ್ದರು ಎಂಬುದನ್ನು ಮೇಲಿನ ವಾಕ್ಯ ಸೂಚಿಸುವುದು.

೨."ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀ ವೈಷ್ಣವರು ಶಾಸನವ ನಟ್ಟು ಪಾಲಿಸುವರು ".

ಉ: ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರು ಸಂಪಾದಿಸಿದ ಕನ್ನಡ ಬಾವುಟ ಎನ್ನುವ ಕೃತಿಯಿಂದ ಆರಿಸಲಾದ ಧರ್ಮ ಸಮದೃಷ್ಟಿ ಪಾಠದಿಂದ ಆಯ್ದು ಕೊಳ್ಳಲಾಗಿದೆ .ಈ ಮಾತನ್ನು ಬುಕ್ಕರಾಯನು ಹೇಳಿದ್ದಾನೆ.

ವಿಜಯನಗರ ಅರಸ ಬುಕ್ಕರಾಯನು ರಾಜ್ಯಭಾರ ಮಾಡುತ್ತಿರುವ ಸಂದರ್ಭದಲ್ಲಿ (೧೩೬೮ ಕ್ರಿ.ಶ.)ಜೈನರು ಬಂದು ವೈಷ್ಣವರಿಂದ ತಮಗಾಗುತ್ತಿರುವ ಅನ್ಯಾಯಗಳನ್ನು ಬಿನ್ನವಿಸಿಕೊಂಡಾಗ ಬುಕ್ಕರಾಯನು ಸಮಸ್ತ ಹದಿನೆಂಟು ನಾಡಿನ ಸಮಸ್ತ ವೈಷ್ಣವ ಮುಖ್ಯರನ್ನು ಕರೆಯಿಸಿ ವೈಷ್ಣವರ ಕೈಯಲ್ಲಿ ಜೈನರ ಕೈಯನ್ನು ಹಿಡಿಸಿ ವೈಷ್ಣವ ಧರ್ಮಕ್ಕೂ ಜೈನ ಧರ್ಮಕ್ಕೂ ಯಾವುದೇ ಭೇದವಿಲ್ಲೆಂದು ಹೇಳಿದನು . ಶ್ರೀ ವೈಷ್ಣವರ ಕಡೆಯಿಂದ ಜೈನ ಧರ್ಮಕ್ಕೆ ಯಾವುದೇ ಹಾನಿ ಅಥವಾ ವೃದ್ಧಿ ಸಂಭವಿಸಿದರೆ ಅದು ಜೈನ ಧರ್ಮಕ್ಕೆ ಆದುದು ಎಂದು ತಿಳಿಯಬೇಕು . ಈ ನಿಯಮದಂತೆ ರಾಜ್ಯದಲ್ಲಿರುವ ಎಲ್ಲ ಬಸದಿಗಳಲ್ಲಿ ಶ್ರೀವೈಷ್ಣವರೇ ಶಾಸನವನ್ನು ಹಾಕಿಸಿ ಇದನ್ನು ಪಾಲಿಸಬೇಕು .. ಎಂದು ಶಾಸನ ರೂಪಿಸುವಾಗ ಈ ಮಾತು ಬಂದಿದೆ.

ಸ್ವಾರಸ್ಯ:ಎಲ್ಲ ಧರ್ಮಗಳ ಸಮನ್ವಯ ಸಾಧಿಸುವ ಉದ್ದೇಶವನ್ನು ಬುಕ್ಕರಾಯನು ಹೊಂದಿದ್ದನು ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೩."ಮಿಕ್ಕ ಹೊನ್ನಿಂಗೆ ಜೀರ್ಣ ಜಿನಾಲಯಗಳಿಗೆ ಸೊದೆಯನಿಕ್ಕುವುದು ".

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರು ಸಂಪಾದಿಸಿದ ಕನ್ನಡ ಬಾವುಟ ಎನ್ನುವ ಕೃತಿಯಿಂದ ಆರಿಸಲಾದ ಧರ್ಮ ಸಮದೃಷ್ಟಿ ಪಾಠದಿಂದ ಆಯ್ದು ಕೊಳ್ಳಲಾಗಿದೆ . ಈ ಮಾತನ್ನು ವಿಜಯನಗರ ಸಾಮ್ರಾಜ್ಯದ ಅರಸ ಬು ಕ್ಕರಾಯನು ಹೇಳಿದ್ದಾನೆ.

ವೈಷ್ಣವರು ಜೈನರಿಗೆ ಅನ್ಯಾಯ ಮಾಡುತ್ತಿದ್ದಾರೆಂದು ಜೈನರು ಬಂದು ರಾಜನಲ್ಲಿ ಬಿನ್ನವಿಸಿಕೊಂಡಾಗ ಜೈನರು ಮತ್ತು ವೈಷ್ಣವರ ನಡುವೆ ಸಾಮರಸ್ಯ ಸಾಧಿಸಲು ಪ್ರಯತ್ನಿಸಿದ ಬುಕ್ಕ ರಾಯನು ವೈಷ್ಣವರ ಕಡೆಯಿಂದ ಜೈನ ಧರ್ಮಕ್ಕೆ ಯಾವುದೇ ಹಾನಿ ಸಂಭವಿಸಬಾರದೆಂದು ಶಾಸನ ವಿಧಿಸಿದನು .ಅಲ್ಲದೆ ಜೈನಮತೀಯರ ಅನುಮತದಂತೆ ಪ್ರತಿ ಜೈನ ಮನೆಗಳಿಂದ ವರ್ಷಕ್ಕೆ ಒಂದು ಹಣ ಸಂಗ್ರಹಿಸಿ ವೈಷ್ಣವ ದೇವರ ಕಾವಲಿಗೆ ಇಪ್ಪತ್ತು ಆಳನ್ನು ನೇಮಿಸಿ ಉಳಿದ ಹೊನ್ನಿಂದ ಜೀರ್ಣ ಜಿನಾಲಯಗಳಿಗೆ ಸುಣ್ಣವನ್ನು ಬಳಿಸಬೇಕು .ಎಂದು ನಿಯಮ ವಿಧಿಸಿದನು .

ಸ್ವಾರಸ್ಯ : ಬುಕ್ಕರಾಯನು ಜೈನ ಮತ್ತು ವೈಷ್ಣವ ಎಂಬ ತಾರತಮ್ಯ ಹೊಂದಿರಲಿಲ್ಲ.ಮತ್ತು ತನ್ನ ಪ್ರಜೆಗಳೂ ಆ ಭಾವವನ್ನು ಹೊಂದದೇ ಪರಸ್ಪರ ಧರ್ಮೀಯರು ಗೌರವಿಸಿಕೊಳ್ಳಲಿ ,ಸಾಮರಸ್ಯದಿಂದ ಬಾಳಲಿ ಎಂಬ ಉದ್ದೇಶದಿಂದ ಈ ರೀತಿಯಾಗಿ ಆದೇಶವನ್ನು ಹೊರಡಿಸಿದನೆಂದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. "ಈ ಮಾಡಿದ ಕಟ್ಟಳೆಯನ್ನು ಅವನೊಬ್ಬನು ಮೀರಿದವನು ರಾಜದ್ರೋಹಿಯಪ್ಪನು ."

ಉ: ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರು ಸಂಪಾದಿಸಿದ ಕನ್ನಡ ಬಾವುಟ ಎನ್ನುವ ಕೃತಿಯಿಂದ ಆರಿಸಲಾದ ಧರ್ಮ ಸಮದೃಷ್ಟಿ ಪಾಠದಿಂದ ಆಯ್ದು ಕೊಳ್ಳಲಾಗಿದೆ . ವಿಜಯನಗರ ಸಾಮ್ರಾಜ್ಯದ ಅರಸ ವೀರ ಬು ಕ್ಕ ರಾಯನು ವಿಧಿಸಿದ ಶಾಸನದಲ್ಲಿ ಈ ಮಾತು ಬಂದಿದೆ. ಜೈನರಿಗೂ ಶ್ರೀ ವೈಷ್ಣವರಿಗೂ ಘರ್ಷಣೆಯಾದ ಸಂದರ್ಭದಲ್ಲಿ ಅವರ ನಡು ವೆ ಸಾಮರಸ್ಯ ಸಾಧಿಸಲು ಪ್ರಯತ್ನಿಸಿದ ವಿಜಯನಗರ ಸಾಮ್ರಾಜ್ಯದ ಅರಸ ವೀರ ಬುಕ್ಕರಾಯನು (ಕ್ರಿ.ಶ.೧೩೬೮) ವೈಷ್ಣವ ಧರ್ಮದ ಪ್ರಮುಖರನ್ನು ಕರೆದು ಇನ್ನು ಮುಂದೆ ವೈಷ್ಣವರು ಜೈನರನ್ನು ಪ್ರತ್ಯೇಕವಾಗಿ ನೋಡಬಾರದು . .ಅವರಿಗೆ ಆದ ಹಾನಿಯನ್ನು ತಮಗೆ ಆದ ಹಾನಿ ಎಂದು ಪರಿಗಣಿಸಬೇಕು ..ಅದರಂತೆ ಜೈನರೂ ಮನೆಗೊಂದರಂತೆ ಹಣ ಸಂಗ್ರಹಿಸಿ ವೈಷ್ಣವ ದೇವಾಲಯಗಳ ಕಾವಲಿಗೆ ನೀಡಬೇಕು .ಉಳಿದ ಹಣದಿಂದ ಜೀರ್ಣ ಜಿನಾಲಯಗಳಿಗೆ ಸೊದೆಯನಿಕ್ಕಬೇಕು ..ಇದನ್ನು ತಪ್ಪಿದವನು ರಾಜದ್ರೋಹಿಯೆನಿಸುವನು ಎಂದು ಕಟ್ಟಳೆ ವಿಧಿಸಿದನು .
ಸ್ವಾರಸ್ಯ :ಬುಕ್ಕರಾಯನು ಧರ್ಮ ಸಮನ್ವಯ ಸಾಧಿಸುವ ಮನೋಭಾವನೆಯನ್ನು ಹೊಂದಿದ್ದನು ಮತ್ತು ಅವನ ಕಾಲದಲ್ಲಿ ರಾಜನು ಹೊರಡಿಸಿದ ಆದೇಶಕ್ಕೆ ಅವನ ಪ್ರಜೆಗಳು ಬದ್ಧರಾಗಿರಬೇಕಿತ್ತು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨.ಬಿಟ್ಟಿರುವ ಸ್ಥಳಗಳಲ್ಲಿ ಸೂಕ್ತ ಪದಗಳನ್ನು ತುಂಬಿರಿ.
೧. ರಾಮಾನು ಜೋ _______ ಯತಿರಾಜರಾಜಃ . (ವಿಜಯತೇ)
೨. ಜೈನದರ್ಶನಕ್ಕೆ ಪೂ ರ್ವಮರ್ಯಾದೆಯಲು ------------ ಕಳಶವೂ ಸಲು ವುದು . (ಪಂಚಮಹಾವಾದ್ಯಂಗಳೂ )
೩.ವೈಷ್ಣವರೂ ಜೈನರೂ ಒಂದು -----------ಕಾಣಲಾಗದು (ಭೇದವಾಗಿ)
ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.
೧. ವೃದ್ಧಿ ಸಂಧಿ ಎಂದರೇನು ? ನಿದರ್ಶನ ಸಹಿತ ಬರೆಯಿರಿ.
ಉ: ಅ,ಆ ಕಾರಗಳಿಗೆ ಏ ಐ ಕಾರಗಳು ಪರವಾದಾಗ ಅವೆರಡರ ಸ್ಥಾನದಲ್ಲಿ ಐ ಕಾರವೂ ಓ ಔ ಕಾರಗಳು ಪರವಾದಾಗ ಔ ಕಾರವೂ ಆದೇಶವಾಗಿ ಬಂದರೆ ಅದೇ ವೃದ್ಧಿ ಸಂಧಿ .
ಉದಾ : ಲೋಕೈಕ ,ಜಲೌಘ
೨. ಯಣ್ ಸಂಧಿ ಎಂದರೇನು ? ನಿದರ್ಶನ ಸಹಿತ ಬರೆಯಿರಿ.
ಉ: ಇ,ಈ ಕಾರಗಳಿಗೆ ಯ್ ಕಾರವೂ ಉ ಊ ಕಾರಗಳಿಗೆ ವ್ ಕಾರವೂ ಋ ಕಾರಕ್ಕೆ ರ್ ಕಾರವೂ ಆದೇಶವಾಗಿ ಬಂದರೆ ಅದು ಯಣ್ ಸಂಧಿ .
ಉದಾ : ಅತ್ಯವಸರ ,ಕೋಟ್ಯಧೀಶ ,ಮನ್ವಾದಿ ,ಪಿತ್ರರ್ಜಿತ

೩.ಕೊಟ್ಟಿರುವ ಪದಗಳ ತತ್ಸಮ-ತದ್ಭವ ರೂಪ ಬರೆಯಿರಿ .
ವರ್ಷ -ವರುಷ,(ದ್ಭ)
ಶ್ರೀ-ಸಿರಿ(ದ್ಭ)
ರಾಯ- ರಾಜ(ತ್ಸ)
ವೀರ- ಬೀರ (ದ್ಭ)
ಭಕ್ತ _ಬಕುತ(ದ್ಭ)
ಬಿನ್ನಹ -ವಿಜ್ಞಾಪನೆ(ತ್ಸ)
ದೆಸೆ-ದಿಶಾ(ತ್ಸ)

ಚಂದ್ರ–ಚಂದಿರ(ದ್ಭ)
ಸೊದೆ –ಸುಧೆ(ತ್ಸ)
೪. ಸಂಧಿ ಹೆಸರಿಸಿ.
ಚರಣ+ಅಂಬುಜ =ಚರಣಾಂಬುಜ =ಸವರ್ಣದೀರ್ಘಸಂಧಿ
ಮಂಡಳೇಶ್ವರ = ಮಂಡಳ+ಈಶ್ವರ = ಗು ಣಸಂಧಿ
ಸಕಳಾಚಾರ್ಯ =ಸಕಳ +ಆಚಾರ್ಯ =ಸವರ್ಣ ದೀರ್ಘ ಸಂಧಿ
ಭೇದವಿಲ್ಲ =ಭೇದ+ಇಲ್ಲ =ಆಗಮ ಸಂಧಿ
ಕೈವಿಡಿದು =ಕೈ+ಪಿಡಿದು =ಆದೇಶ ಸಂಧಿ(ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರು ವ ಪ,ಬ,ಮ ಮೂ ರು ವ್ಯಂಜನಗಳಿಗೆ ವ್ ವ್ಯಂಜನ ಆದೇಶವಾಗು ವುದು .ಇದು ವಕಾರಾದೇಶ ಸಂಧಿ. ಉದಾ......ಕೆನೆ +ಪಾಲು = ಕೆನೆವಾಲು ,ತಲೆ+ಬಾಗು =ತಲೆವಾಗು ,ಎಲೆ+ಮನೆ =ಎಲೆವನೆ.( ಆಧಾರ–ಸಮಗ್ರ ಕನ್ನಡ ವ್ಯಾಕರಣ)
ವೃದ್ಧಿಯಾಗಿ=ವೃದ್ಧಿ+ಆಗಿ =ಆಗಮ ಸಂಧಿ
ಭೇದವಾಗಿ=ಭೇದ+ಆಗಿ =ಆಗಮ ಸಂಧಿ
ಕಾಣಲಾಗದು = ಕಾಣಲು +ಆಗದು =ಲೋಪ ಸಂಧಿ
ಜಿನಾಲಯ =ಜಿನ +ಆಲಯ =ಸವರ್ಣದೀರ್ಘ ಸಂಧಿ
ತಪ್ಪಲೀಯದೆ=ತಪ್ಪಲು +ಈಯದೆ =ಲೋಪ ಸಂಧಿ
ಚಂದ್ರಾರ್ಕ =ಚಂದ್ರ+ಅರ್ಕ =ಸವರ್ಣದೀರ್ಘ ಸಂಧಿ

## ಗದ್ಯಪಾಠ - ೪ ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್

ಪ್ರಕೃತ ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ ವ್ಯಕ್ತಿಚಿತ್ರ ಗದ್ಯಭಾಗವನ್ನು ಕೆ.ಎಸ್.ರತ್ನಮ್ಮ ಅವರ ಡಾ.ಎಸ್ ರಾಧಾಕೃಷ್ಣನ್ - ಜೀವನ ಸಾಧನೆ ಮತ್ತು ಎ.ಎನ್.ಮೂರ್ತಿರಾವ್ ಅವರ ಚಿತ್ರ ಗಳು -ಪತ್ರ ಗಳು ಕೃತಿಗಳ ಆಧಾರದಿಂದ ಪಠ್ಯಪುಸ್ತಕ ರಚನಾ ಸಮಿತಿ ಸಿದ್ಧಪಡಿಸಿ ನಿಗದಿಮಾಡಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ .**

೧. ರಾಧಾಕೃಷ್ಣನ್ ಅವರ ತಂದೆತಾಯಿಯರ ಹೆಸರೇನು ?

ಉ: ರಾಧಾಕೃಷ್ಣನ್ ಅವರ ತಂದೆಯ ಹೆಸರು ವೀರಸ್ವಾಮಿ , ತಾಯಿ ಸೀತಮ್ಮ .

೨. ರಾಧಾಕೃಷ್ಣನ್ ಅವರ ತಂದೆಯ ಅಪೇಕ್ಷೆ ಏನಾಗಿತ್ತು ?

ಉ: ರಾಧಾಕೃಷ್ಣನ್ ಅವರು ದೇಶೀ ಭಾಷೆಯಾಗಿದ್ದ ಸಂಸ್ಕೃತವನ್ನು ಕಲಿಯಲಿ ಎಂಬುದು ಅವರ ತಂದೆಯ ಅಪೇಕ್ಷೆ ಆಗಿತ್ತು.

೩. ರಾಷ್ಟ್ರಪತಿಗಳಾಗಿ ಪಡೆಯುತ್ತಿದ್ದ ವೇತನವನ್ನು ರಾಧಾಕೃಷ್ಣನ್ ಅವರು ಹೇಗೆ ಸದುಪಯೋಗ ಪಡಿಸಿಕೊಂಡರು ?

ಉ: ರಾಷ್ಟ್ರಪತಿಗಳಾಗಿ ಅವರಿಗೆ ಬರುತ್ತಿದ್ದ ಹತ್ತುಸಾವಿರ ರೂಪಾಯಿಗಳ ವೇತನದಲ್ಲಿ ಎರಡುಸಾವಿರದ ಐದುನೂರು ರೂಪಾಯಿಗಳನ್ನು ಮಾತ್ರ ಅವರು ಪಡೆದು ,ಉಳಿದ ಹಣವನ್ನು ಪ್ರಧಾನಮಂತ್ರಿಗಳ ಪರಿಹಾರನಿಧಿಗೆ ವಂತಿಗೆಯಾಗಿ ನೀಡುವ ಮೂಲಕ ಅವರು ಸದುಪಯೋಗಪಡಿಸಿಕೊಳ್ಳುತ್ತಿದ್ದರು.

೪. ರಾಧಾಕೃಷ್ಣನ್ ಅವರ ಜನ್ಮದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತದೆ ?

ಉ: ರಾಧಾಕೃಷ್ಣನ್ ಅವರ ಜನ್ಮದಿನವನ್ನು 'ರಾಷ್ಟ್ರೀಯ ಶಿಕ್ಷಕರ ದಿನ ' ಎಂಬ ಹೆಸರಿನಿಂದ ಆಚರಿಸಲಾಗುತ್ತದೆ.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಏನು ಹೇಳಿದರು ?

ಉ: ನೀವೊಬ್ಬರೇ ನನ್ನನ್ನು ಮನುಷ್ಯನಂತೆ ಕಂಡು ವರ್ತಿಸಿದವರು. ನೀವು ನಮ್ಮನ್ನು ಬಿಟ್ಟು ಹೋಗುತ್ತಿರುವಿರಿ. ನನಗೆ ಇದು ದುಃಖ ನೀಡಿದೆ. ನೀವು ಹೆಚ್ಚು ಕಾಲ ಬಾಳಬೇಕೆಂಬುದು ನನ್ನಾಸೆ. ನಾನು ಹೆಚ್ಚು ಕಾಲ ಬಾಳುವುದಿಲ್ಲ. ಎಂದು ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರಿಗೆ ಮಾಸ್ಕೋದಲ್ಲಿ ನೀಡಿದ ಬೀಳ್ಕೊಡುಗೆ ಸಂದರ್ಭದಲ್ಲಿ ಹೇಳಿದರು.

೨. ರಾಧಾಕೃಷ್ಣನ್ ಅವರ ವಿದ್ಯಾಭ್ಯಾಸ ಎಲ್ಲೆಲ್ಲಿ ನಡೆಯಿತು ?

ಉ: ತಿರುಪತಿಯ ಹರ್ಮನ್ಸ್ ಬರ್ಗ್ ಮಿಷನರಿ ಶಾಲೆಗೆ ಸೇರಿ ಅಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಮನ್ನಣೆಯಿತ್ತು ಪ್ರೌಢಶಾಲಾ ಶಿಕ್ಷಣವನ್ನು ಮುಗಿಸಿದ ರಾಧಾಕೃಷ್ಣನ್ ವೆಲ್ಲೂರಿನ ವೂರ್ಸ್ ಕಾಲೇಜಿಗೆ ಬಿ.ಎ. ಪೂರ್ವದ ಎರಡು ವರ್ಷಗಳ ಕಲಾ ಪದವಿಗೆ ಸೇರಿದರು. ವಿದ್ಯಾರ್ಥಿವೇತನ ಪಡೆದು ಅಂದಿನ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ. ಪದವಿಗೆ ಸೇರಿದರಲ್ಲದೆ ತತ್ವಶಾಸ್ತ್ರದ ಉತ್ತಮ ವಿದ್ಯಾರ್ಥಿ ಎನಿಸಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಕಿರಿಯ ಸಹಪಾಠಿಗಳಿಗೆ ಮನೆಯ ಪಾಠ ಹೇಳಿ ಹಣಗಳಿಸುತ್ತಿದ್ದ ಅವರು ತಮ್ಮ ಆರ್ಥಿಕ ಪರಿಸ್ಥಿತಿ ತಮ್ಮ ಸಾಧನೆಯಲ್ಲಿ ತೊಡಕೆಂದು ಭಾವಿಸದೆ ಬಡತನದ ಬೇಗೆಯಲ್ಲಿ ತಮ್ಮ ಆಸಕ್ತಿಯ ವಿಷಯವಾದ ತತ್ವಶಾಸ್ತ್ರದಲ್ಲಿ ಎಂ.ಎ .ಪದವಿಯನ್ನು ಪಡೆದರು.

೩. ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ.

ಉ: ರಾಧಾಕೃಷ್ಣನ್ ಅವರ ಬಾಹ್ಯರೂಪ ಎತ್ತರವಾದ ನಿಲುವು ,ಬಿಸ್ಕೆಟ್ ಬಣ್ಣದ ರೇಷ್ಮೆಯ ನಿಲುವಂಗಿ ,ಶುಭ್ರವೂ ನಿರಾಡಂಬರವೂ ಆದ ಬಿಳಿಯ ಪಂಚೆ ಮತ್ತು ರುಮಾಲು ,ಕೋಪಸೂಚಕವಲ್ಲದ ಹುಬ್ಬು ,ಯಾವುದೋ ಸಮಸ್ಯೆಯ ಒಳಹೋಗುವಂತಿರುವ ಕಣ್ಣನೋಟ ,ಮುಗುಳುನಗೆಯ ಸುಳಿವು ಇವು ರಾಧಾಕೃಷ್ಣನ್ ಅವರ ವೇಷಭೂಷಣಗಳು. ಪ್ರಪಂಚದ ಫ್ಯಾಷನ್ ಎಷ್ಟೇ ಬದಲಾದರೂ ರಾಧಾಕೃಷ್ಣನ್ ತಮ್ಮ ವೇಷಭೂಷಣಗಳನ್ನು ಜತನವಾಗಿ ಉಳಿಸಿಕೊಂಡಿದ್ದರು.

೪. ಶಿಕ್ಷಣದ ಮಹತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ ?

ಉ: ಶಿಕ್ಷಣದ ಮಹತ್ವವನ್ನು ಮನಗಂಡ ರಾಧಾಕೃಷ್ಣನ್ ಅವರು " ಶಿಕ್ಷಣವು ಜೀವನದ ಅವಿಭಾಜ್ಯ ಅಂಗ. ಅದು ಮಾನವನನ್ನು ಪರಿಪೂರ್ಣತೆಯತ್ತ ಒಯ್ಯುವ ಸಾಧನ ಮಾರ್ಗ " ಎಂದಿದ್ದಾರೆ.

೫. ರಾಧಾಕೃಷ್ಣನ್ ಅವರಿಗೆ ಸಂದ ಪ್ರಶಸ್ತಿ ಗೌರವಗಳು ಯಾವುವು ?

ಉ: ರಾಧಾಕೃಷ್ಣನ್ ಅವರ ಸ್ಮರಣೀಯ ಸೇವೆಯನ್ನು ಗುರುತಿಸಿ ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬ್ರಸೆಲ್ಸ್ ನ ಫ್ರೀ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಿತು. ಭಾರತೀಯ ವಿದ್ಯಾಭವನದ ಬ್ರಹ್ಮವಿದ್ಯಾಭಾಸ್ಕರ ಬಿರುದಿಗೂ ಪಾತ್ರರಾದರು. ಹೀಗೆ ಇವರಿಗೆ ದೇಶವಿದೇಶಗಳ ಗೌರವ ಪದವಿಗಳು ದೊರಕಿದವು.

ಎಂಟು -ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ರಾಧಾಕೃಷ್ಣನ್ ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

ಉ: ರಾಧಾಕೃಷ್ಣನ್ ಅವರು ಶಿಕ್ಷಣ ಇಲಾಖೆಯ ಉಪಸಹಾಯಕ ಇನ್ ಸ್ಪೆಕ್ಟರ್ ಆಗಿ ಮದ್ರಾಸಿನಲ್ಲಿ ಮೊದಲ ಸೇವೆಯನ್ನು ಆರಂಭಿಸಿದರು. ಅನಂತರ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜು , ಸಯ್ಯದ್ ಪೇಟೆಯ ಟೀಚರ್ಸ್ ಟ್ರೈನಿಂಗ್ ಕಾಲೇಜು ,ಆಂಧ್ರದ ಅನಂತಪುರ ಹಾಗೂ ರಾಜಮುಂಡ್ರಿಯ ಸರ್ಕಾರಿ ಕಲಾ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಉಪಪ್ರಾಧ್ಯಾಪಕರಾಗಿ ಹಾಗೂ ಕೊಲ್ಕೊತಾದಲ್ಲಿ ಸ್ಮರಣೀಯ ಸೇವೆ ಸಲ್ಲಿಸಿದರು. ಆಕ್ಸ್ ಫರ್ಡ್ ವಿಶ್ವವಿದ್ಯಾಲಯದಲ್ಲೂ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ಅವರ ಬೋಧನಾ ಶೈಲಿ ,ನಿರರ್ಗಳತೆ, ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು. ಅವರು ಏರು ಜವ್ವನದ ಯುವಕರಂತೆ ವಿದ್ಯಾರ್ಥಿಗಳೊಂದಿಗೆ ಹಾಸ್ಯ ವಿನೋದಗಳಲ್ಲಿ ತೊಡಗುತ್ತಿದ್ದರು.

೨. ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನಡೆದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.

ಉ: ರಾಧಾಕೃಷ್ಣನ್ ಅವರು ಕೊಲ್ಕೊತಾ ವಿಶ್ವವಿದ್ಯಾಲಯದ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ನೇಮಕಗೊಂಡಾಗ ಮೈಸೂರಿನಿಂದ ಅವರಿಗೆ ಕೊಟ್ಟಂತಹ ವೈಭವದ ಬೀಳ್ಕೊಡುಗೆ ಯಾವ ಚಕ್ರವರ್ತಿಗೂ ದೊರೆತಿರಲಾರದಂತದ್ದು. ಅಂದಿನ ವಾತಾವರಣದಲ್ಲಿದ್ದುದು ವೈಭವಕ್ಕಿಂತ ಹೆಚ್ಚಾಗಿ ಹೃದಯದಿಂದ ನೇರವಾಗಿ ಹೊರಹೊಮ್ಮಿದ ಗುರುಪ್ರೇಮ . ವಿದ್ಯಾರ್ಥಿಗಳೆಲ್ಲರಲ್ಲೂ ಭಕ್ತಿಪ್ರೇಮದ ಚಿಲುಮೆ ಉಕ್ಕಿಬಂತು. ರಾಧಾಕೃಷ್ಣನ್ ಅವರನ್ನು ಮಹಾರಾಜ ಕಾಲೇಜಿನಿಂದ ರೈಲು ನಿಲ್ದಾಣಕ್ಕೆ ಕರೆದೊಯ್ಯುವಾಗ ಸಾರೋಟಿಗೆ ಕುದುರೆಯನ್ನು ಕಟ್ಟದೇ ಸ್ವತಃ ವಿದ್ಯಾರ್ಥಿಗಳೇ ಎಳೆದೊಯ್ದರು. ರಾಧಾಕೃಷ್ಣನ್ ಅವರಿಗಾಗಿ ಕಾದಿರಿಸಿದ್ದ ಕಂಪಾರ್ಟ್ ಮೆಂಟನ್ನು ,ಒರಗುದಿಂಬು ಹಾಗೂ ರತ್ನಗಂಬಳಿಯನ್ನು ಹಾಸಿ ಮಲಗುವ ಸೀಟನ್ನು ,ನೆಲವನ್ನು ಹೂವಿನಿಂದ ಸುಪ್ಪತ್ತಿಗೆಯಂತೆ ಮಾಡಿ ದೈವಮಂದಿರವನ್ನು ಭಕ್ತರು ಅಲಂಕರಿಸುವಂತೆ ಅಲಂಕರಿಸಲಾಗಿತ್ತು.

ರಾಧಾಕೃಷ್ಣನ್ ಅವರಿಗೆ ಜಯವಾಗಲಿ ಎಂಬ ಕೂಗು ರೇಲ್ವೆ ಸ್ಟೇಷನ್ನಿನ ಆವರಣದಲ್ಲೆಲ್ಲ ಮೊಳಗುತ್ತಿತ್ತು. ಭಾವೋದ್ರೇಕದಿಂದ ಜನರು ಅಳುತ್ತಿದ್ದರು.

೩. ಹಿಂದೂ ಧರ್ಮ ಮತ್ತು ತತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅಭಿಪ್ರಾಯವೇನು ? ವಿವರಿಸಿ .
ಉ: ಹಿಂದೂ ಧರ್ಮದ ತತ್ವಶಾಸ್ತ್ರ ಮತ್ತು ಸಾಹಿತ್ಯವನ್ನು ಅಧ್ಯಯನ ಮಾಡಿದ್ದ ರಾಧಾಕೃಷ್ಣನ್ ಅವರು ಹಿಂದೂ ಧರ್ಮವು ಒಂದು ವೈಚಾರಿಕ ಮಾರ್ಗವೆಂದೂ ,ನೈತಿಕ ಗುಣಾತ್ಮಕ ವಿಷಯಗಳಿಂದ ಕೂಡಿದ್ದು , ಮಾನವನ ಆಂತರಿಕ ಜೀವನದ ಬಗ್ಗೆ ಪ್ರಾಮುಖ್ಯತೆವುಳ್ಳದ್ದಾಗಿದೆ. ಹಿಂದೂ ಧರ್ಮವಾಗಲಿ ,ವೇದಾಂತವಾಗಲಿ ಅಸತ್ಯವನ್ನು ಹೇಳುವುದಿಲ್ಲ. ಭಾರತೀಯ ಚಿಂತನೆಗಳು ಯಾವುದೋ ವಿಚಿತ್ರ ಮತ್ತು ನಿಗೂಢ ಪರಿಕ್ಲಪನೆಗಳಾಗಿಲ್ಲ. ಜೀವನದ ನಾಡಿಮಿಡಿತಗಳನ್ನು ಸೂಕ್ಷ್ಮ ಮನಸ್ಸಿನ ಚಿಂತನೆಗಳನ್ನು ತಿಳಿಯಪಡಿಸುವುದಾಗಿದೆ ಎಂದು ಸರಳವಾಗಿ ಹೇಳಿದರು.
ಹೊಂದಿಸಿ ಬರೆಯಿರಿ.

ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ.
೧. “ ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು.”
ಉ: ಈ ಮೇಲಿನ ವಾಕ್ಯವನ್ನು ಕೆ.ಎಸ್ . ರತ್ನಮ್ಮ ಅವರ ಡಾ| ಎಸ್ ರಾಧಾಕೃಷ್ಣನ್ -ಜೀವನ ಸಾಧನೆ ಮತ್ತು ಎ.ಎನ್ .ಮೂರ್ತಿರಾವ್ ಅವರ ಚಿತ್ರಗಳು -ಪತ್ರಗಳು ಕೃತಿಗಳ ಆಧಾರದಿಂದ ಪಠ್ಯಪುಸ್ತಕ ರಚನಾ ಸಮಿತಿ ಸಿದ್ಧಪಡಿಸಿದ ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ರಾಧಾಕೃಷ್ಣನ್ ಅವರಿಗೆ ಹೇಳಿದ್ದಾರೆ.
ಸಂದರ್ಭ : ರಾಧಾಕೃಷ್ಣನ್ ರಷ್ಯಾದೇಶಕ್ಕೆ ಭಾರತದ ರಾಯಭಾರಿಯಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ರಷ್ಯಾ ದೇಶದ ಅಧ್ಯಕ್ಷ ಸ್ಟಾಲಿನ್ ಅವರ ಪರಿಚಯವಾಯಿತು. ರಷ್ಯಾದೇಶದಿಂದ ಅವರು ಭಾರತಕ್ಕೆ ಮರಳಿ ಹೊರಟ ಸಂದರ್ಭದಲ್ಲಿ ಮಾಸ್ಕೋದಲ್ಲಿ ಅವರಿಗೆ ಬೀಳ್ಕೊಡುಗೆ ಸಂದರ್ಭದಲ್ಲಿ ಸ್ಟಾಲಿನ ಅವರಿಗೆ ಮೇಲಿನ ಮಾತನ್ನು ಹೇಳುತ್ತ ರಾಧಾಕೃಷ್ಣನ್ ಅವರು ಬಹುಕಾಲ ಬಾಳಲಿ ಎಂಬುದೇ ತನ್ನಾಸೆ ,ಅವರು ಮರಳಿ ತನ್ನ ದೇಶಕ್ಕೆ ಹೋಗುತ್ತಿರುವುದು ತನಗೆ ಅತೀವ ದುಃಖ ತಂದಿದೆ ಎಂದೂ ಹೇಳಿದರು.
ಸ್ವಾರಸ್ಯ : ಕಮ್ಯುನಿಸ್ಟ್ ರಷ್ಯಾ ದೇಶದ ಅಧ್ಯಕ್ಷರಾಗಿದ್ದ ಸ್ಟಾಲಿನ ರನ್ನು ಅವರ ನಿಲುವುಗಳಿಂದಾಗಿ ಕಲ್ಲು ಹೃದಯದವರೆಂದು ಬಹುತೇಕರು ಭಾವಿಸಿದ್ದರು . ಆದರೆ ಸೂಕ್ಷ್ಮಗ್ರಾಹಿಯೂ ತತ್ವಜ್ಞಾನಿಯೂ ಆಗಿದ್ದ ರಾಧಾಕೃಷ್ಣನ್ ಅವರು ಸ್ಟಾಲಿನ ಅವರ ಬಗ್ಗೆ ತಳೆದ ನಿಲುವು ಇದಕ್ಕಿಂತ ಭಿನ್ನವಾಗಿತ್ತು. ಆದ್ದರಿಂದ ಸ್ಟಾಲಿನ್ ಮೇಲಿನಮತೆ ಹೇಳಿದರು.

೨. “ ಆರ್ಥಿಕ ಪರಿಸ್ಥಿತಿ ತಮ್ಮ ಸಾಧನೆಯಲ್ಲಿ ನಿವಾರಿಸಲಾಗದ ತೊಡಕೆಂದು ಭಾವಿಸಲಿಲ್ಲ. ”
ಉ: ಈ ಮೇಲಿನ ವಾಕ್ಯವನ್ನು ಕೆ.ಎಸ್ . ರತ್ನಮ್ಮ ಅವರ ಡಾ| ಎಸ್ ರಾಧಾಕೃಷ್ಣನ್ -ಜೀವನ ಸಾಧನೆ ಮತ್ತು ಎ.ಎನ್ .ಮೂರ್ತಿರಾವ್ ಅವರ ಚಿತ್ರಗಳು -ಪತ್ರಗಳು ಕೃತಿಗಳ ಆಧಾರದಿಂದ ಪಠ್ಯಪುಸ್ತಕ ರಚನಾ ಸಮಿತಿ ಸಿದ್ಧಪಡಿಸಿದ ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಸಂದರ್ಭ : ರಾಧಾಕೃಷ್ಣನ್ ಅವರು ತಮ್ಮ ಪದವಿ ಓದಿನ ದಿನಗಳಲ್ಲಿ ಮನೆಯ ಜವಾಬ್ದಾರಿ ಹೊತ್ತಿದ್ದರಿಂದ ಕಿರಿಯ ಸಹಪಾಠಿಗಳಿಗೆ ಮನೆಯ ಪಾಠ ಹೇಳಿ ಹಣ ಗಳಿಸುತ್ತಿದ್ದರು. ಆರ್ಥಿಕ ಪರಿಸ್ಥಿತಿ ತಮ್ಮ ಸಾಧನೆಯಲ್ಲಿ ನಿವಾರಿಸಲಾಗದ ತೊಡಕೆಂದು ಅವರು

ಭಾವಿಸಲಿಲ್ಲ. ಬಡತನದ ಬೇಗೆಯಲ್ಲೇ ತಮ್ಮ ಆಸಕ್ತಿಯ ವಿಷಯವಾದ ತತ್ವಶಾಸ್ತ್ರದಲ್ಲಿ ಎಂ.ಎ . ಪದವಿಯನ್ನು ಅವರು ಪಡೆದರು ಎನ್ನುವಲ್ಲಿ ಮೇಲಿನ ಮಾತು ಬಂದಿದೆ.

ಸ್ವಾರಸ್ಯ: ಸಾಧನೆಯ ಹಾದಿಯಲ್ಲಿ ಬರುವ ತೊಂದರೆಗಳನ್ನು ಎದುರಿಸುತ್ತ ,ಅದನ್ನು ನಿವಾರಿಸಿಕೊಳ್ಳುತ್ತ ಸಾಧಿಸಬೇಕೆಂಬ ಛಲ ರಾಧಾಕೃಷ್ಣನ್ ಅವರಲ್ಲಿ ಮನೆ ಮಾಡಿತ್ತು ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೩. " ಏರು ಜವ್ವನದ ಯುವಕರಂತೆ ಹಾಸ್ಯ ವಿನೋದಗಳಲ್ಲಿ ತೊಡಗುತ್ತಿದ್ದರು. "

ಉ: ಈ ಮೇಲಿನ ವಾಕ್ಯವನ್ನು ಕೆ.ಎಸ್ . ರತ್ನಮ್ಮ ಅವರ ಡಾ| ಎಸ್ ರಾಧಾಕೃಷ್ಣನ್ -ಜೀವನ ಸಾಧನೆ ಮತ್ತು ಎ.ಎನ್ .ಮೂರ್ತಿರಾವ್ ಅವರ ಚಿತ್ರಗಳು -ಪತ್ರಗಳು ಕೃತಿಗಳ ಆಧಾರದಿಂದ ಪಠ್ಯಪುಸ್ತಕ ರಚನಾ ಸಮಿತಿ ಸಿದ್ಧಪಡಿಸಿದ ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ರಾಧಾಕೃಷ್ಣನ್ ಅವರು ಪ್ರಾಧ್ಯಾಪಕರಾಗಿ ,ಕುಲಪತಿಯಾಗಿ,ಸಂದರ್ಶಕ ಪ್ರಾಧ್ಯಾಪಕರಾಗಿ ವಿವಿಧೆಡೆಗಳಲ್ಲಿ ಸೇವೆ ಸಲ್ಲಿಸಿದರು. ಅವರ ಬೋಧನಾ ಶೈಲಿ ,ನಿರರ್ಗಳತೆ ,ವಿಷಯದ ಮೇಲಿನ ಪ್ರಭುತ್ವ ವಿದ್ಯಾರ್ಥಿಗಳನ್ನು ಬಹುಬೇಗ ಆಕರ್ಷಿಸಿತು. ತಮ್ಮ ಪ್ರಾಧ್ಯಾಪಕತ್ವವನ್ನು ಯಾವಾಗಲೆಂದರೆ ಆವಾಗ ಕಳಚಿ ಏರು ಜವ್ವನದ ಯುವಕರಂತೆ ಹಾಸ್ಯವಿನೋದಗಳಲ್ಲಿ ತೊಡಗುತ್ತಿದ್ದರು ಎನ್ನುವಲ್ಲಿ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಶಿಕ್ಷಕನೊಬ್ಬನ ಗೌರವವು ಬೋಧನೆಯಿಂದಲೇ ವೃದ್ಧಿಸುತ್ತದೆ. ಜತೆಗೆ ವ್ಯಕ್ತಿತ್ವದ ಸೌಜನ್ಯ ,ಸ್ನೇಹಶೀಲತೆ ಎಲ್ಲರ ಗಮನವನ್ನು ಸೆಳೆಯುತ್ತದೆ ಎಂಬುದನ್ನು ಮೇಲಿನ ವಾಕ್ಯವು ಸೂಚಿಸುತ್ತದೆ.

೪. " ಅಶೋಕನು ಕಳಿಂಗ ಯುದ್ಧದ ಅನಂತರ ಶ್ರೇಷ್ಠ ಮನುಷ್ಯನಾದಂತೆ ನೀವೂ ಆಗುವಿರಿ. "

ಈ ಮೇಲಿನ ವಾಕ್ಯವನ್ನು ಕೆ.ಎಸ್ . ರತ್ನಮ್ಮ ಅವರ ಡಾ| ಎಸ್ ರಾಧಾಕೃಷ್ಣನ್ -ಜೀವನ ಸಾಧನೆ ಮತ್ತು ಎ.ಎನ್ .ಮೂರ್ತಿರಾವ್ ಅವರ ಚಿತ್ರಗಳು -ಪತ್ರಗಳು ಕೃತಿಗಳ ಆಧಾರದಿಂದ ಪಠ್ಯಪುಸ್ತಕ ರಚನಾ ಸಮಿತಿ ಸಿದ್ಧಪಡಿಸಿದ ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ರಷ್ಯಾ ದೇಶದ ಅಧ್ಯಕ್ಷನಾಗಿದ್ದ ಸ್ಟಾಲಿನ್ ಗೆ ರಾಧಾಕೃಷ್ಣನ್ ಅವರು ಹೇಳಿದ್ದಾರೆ.

ಸಂದರ್ಭ : ರಷ್ಯಾ ದೇಶದಲ್ಲಿ ಭಾರತದ ರಾಯಭಾರಿಯಾಗಿದ್ದರಾಧಾಕೃಷ್ಣನ್ ಭಾರತಕ್ಕೆ ಮರಳಿ ಹೊರಟ ಸಂದರ್ಭದಲ್ಲಿ ಭೇಟಿಯಾದ ಸ್ಟಾಲಿನ್ ರಾಧಾಕೃಷ್ಣನ್ ಅವರ ಮೊದಲ ಭೇಟಿಯಲ್ಲಿ ಅವರು ತನಗೆ ಮೇಲಿನಂತೆ ಹೇಳಿದ ಮಾತುಗಳನ್ನು ಸ್ಮರಿಸಿದನು.

ಸ್ವಾರಸ್ಯ : ಕಳಿಂಗ ಯುದ್ಧದ ನಂತರ ಅಶೋಕನು ಬದಲಾದಂತೆ ಸರ್ವಾಧಿಕಾರಿಯಾಗಿ ವರ್ತಿಸುತ್ತಿದ್ದ ಸ್ಟಾಲಿನ ರವರಲ್ಲಿ ಒಂದು ಪರಿವರ್ತನೆ ಬರಲೆಂದು ರಾಧಾಕೃಷ್ಣನ್ ಸಲಹೆ ನೀಡಿದ್ದರು ಎಂಬುದನ್ನು ಮೇಲಿನ ವಾಕ್ಯವು ಸೂಚಿಸುತ್ತದೆ.

೫. " ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ "

ಉ: ಈ ಮೇಲಿನ ವಾಕ್ಯವನ್ನು ಕೆ.ಎಸ್ . ರತ್ನಮ್ಮ ಅವರ ಡಾ| ಎಸ್ ರಾಧಾಕೃಷ್ಣನ್ -ಜೀವನ ಸಾಧನೆ ಮತ್ತು ಎ.ಎನ್ .ಮೂರ್ತಿರಾವ್ ಅವರ ಚಿತ್ರಗಳು -ಪತ್ರಗಳು ಕೃತಿಗಳ ಆಧಾರದಿಂದ ಪಠ್ಯಪುಸ್ತಕ ರಚನಾ ಸಮಿತಿ ಸಿದ್ಧಪಡಿಸಿದ ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಶಿಕ್ಷಣವು ಜೀವನದ ಅವಿಭಾಜ್ಯ ಅಂಗ . ಅದು ಮಾನವನನ್ನು ಪರಿಪೂರ್ಣತೆ ಹಾಗೂ ಸುಸಂಸ್ಕೃತಿಯತ್ತ ಒಯ್ಯುವ ಸಾಧನ ಎಂದು ಹೇಳಿದ ರಾಧಾಕೃಷ್ಣನ್ ಅವರು ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣದಲ್ಲಿ ಮಾನವತೆಯೇ ವಿಶ್ವ ಅನುಸರಿಸಬೇಕಾದ ಎಂದು ತಮ್ಮ ನಿಲುವನ್ನು ವ್ಯಕ್ತಪಡಿಸಿದರು.

ಸ್ವಾರಸ್ಯ : ಮಾನವೀಯತೆಗೆ ರಾಧಾಕೃಷ್ಣನ್ ನೀಡಿದ ಮಹತ್ವ ಮೇಲಿನ ವಾಕ್ಯದಲ್ಲಿ ವ್ಯಕ್ತವಾಗಿದೆ.

ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಸ್ಟಾಲಿನ್ | ರಾಷ್ಟ್ರೀಯ ಶಿಕ್ಷಕರ ದಿನಾಚರಣೆ |
| ಸರ್ವೇಪಲ್ಲಿ | ಮಿಷನರಿ ಶಾಲೆ |
| ಹರ್ಮನ್ಸ್‌ಬರ್ಗ್ | ಆಂಧ್ರ |
| ಭಾರತೀಯ ವಿದ್ಯಾಭವನ | ಮಾಸ್ಕೋ |
| ಆಕ್ಸಫರ್ಡ್ | ಭಾರತರತ್ನ |
| ಸೆಪ್ಟೆಂಬರ್ ೫ | ವಿಶ್ವವಿದ್ಯಾಲಯ |
| | ಬ್ರಹ್ಮವಿದ್ಯಾಭಾಸ್ಕರ |
| | ಅಮೆರಿಕಾ |

ಉತ್ತರಗಳು :

ಸ್ಟಾಲಿನ್ - ಮಾಸ್ಕೋ ಸರ್ವೇಪಲ್ಲಿ -ಆಂಧ್ರ ಹರ್ಮನ್ಸ್‌ಬರ್ಗ್ -ಮಿಷನರಿಶಾಲೆ ಭಾರತೀಯವಿದ್ಯಾಭವನ -ಬ್ರಹ್ಮವಿದ್ಯಾಭಾಸ್ಕರ ಆಕ್ಸಫರ್ಡ್-ವಿಶ್ವವಿದ್ಯಾಲಯ ಸೆಪ್ಟೆಂಬರ್ ೫ -ರಾಷ್ಟ್ರೀಯಶಿಕ್ಷಕರ ದಿನಾಚರಣೆ

ಕೊಟ್ಟಿರುವ ಪ್ರಶ್ನೆಗೆ ನೀಡಿದ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

೧. ರಾಧಾಕೃಷ್ಣನ್ ಅವರ ಸಾಧನೆಯಲ್ಲಿ ವಿಶೇಷ ಸಹಕಾರ ನೀಡಿದವರು ----- ಅವರ ಪತ್ನಿ

೨. ಮದ್ರಾಸಿನ ಕ್ರಿಶ್ಚಿಯನ್ ಶಾಲೆಯಲ್ಲಿ ರಾಧಾಕೃಷ್ಣನ್ ಅವರು ಉತ್ತಮ ವಿದ್ಯಾರ್ಥಿ ಎಂದು ಪರಿಗಣಿಸಲ್ಪಟ್ಟ ವಿಷಯ ---ತತ್ವಶಾಸ್ತ್ರ

೩. ರಾಧಾಕೃಷ್ಣನ್ ಅವರು ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ ವಿಶ್ವವಿದ್ಯಾಲಯ – ಆಕ್ಸಫರ್ಡ್

೪. ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ ಎಂದು ರಾಧಾಕೃಷ್ಣನ್ ಅವರು ರೇಡಿಯೋ ಪ್ರಸಾರ ಭಾಷಣ ಮಾಡಿದ ದೇಶ – ಕೆನಡಾ

೫. ಭಾರತ ಮತ್ತು ರಷ್ಯಾದ ಬಾಂಧವ್ಯವನ್ನು ವೃದ್ಧಿಗೊಳಿಸಿದ ರಾಧಾಕೃಷ್ಣನ್ ಅವರನ್ನು ಪ್ರಶಂಸಿಸಿದವರು -ಜವಾಹರಲಾಲ್ ನೆಹರು

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಜಶ್ತ್ವ ಸಂಧಿಯ ಸೂತ್ರ ವೇನು ?

ಉ: ಪೂರ್ವಪದದ ಕೊನೆಯಲ್ಲಿರುವ ವರ್ಗ ಪ್ರಥಮಾಕ್ಷರಕ್ಕೆ ಅಂದರೆ ಕ್ ಚ್ ಟ್ ತ್ ಪ್ ಗಳಿಗೆ ಅದೇ ವರ್ಗದ ತೃತೀಯಾಕ್ಷರಗಳು ಅಂದರೆ ಗ್ ಜ್ ಡ್ ದ್ ಬ್ ಗಳು ಬಂದರೆ ಜಶ್ ಅಕ್ಷರಗಳು ಆದೇಶವಾಗಿ ಬಂದರೆ ಅದೇ ಜಶ್ತ್ವ ಸಂಧಿ

ಉದಾ : ವಾಗ್ದೇವಿ ,ಅಜಂತ ಇತ್ಯಾದಿ

೨. ಶ್ಚುತ್ವ ಸಂಧಿಯನ್ನು ನಿದರ್ಶನದೊಂದಿಗೆ ವಿವರಿಸಿ.

ಉ: ಸ ಕಾರ ತ ವರ್ಗಗಳಿಗೆ ಶ ಕಾರ ಚ ವರ್ಗಗಳು ಅಂದರೆ ಶ್ಚು ಅಕ್ಷರಗಳು ಆದೇಶವಾಗಿ ಬಂದರೆ ಅಂತಹ ಸಂಧಿಗಳೆ ಶ್ಚುತ್ವ ಸಂಧಿ

ಉದಾ : ಪಯಶ್ಶಯನ ಜಗಜ್ಜ್ಯೋತಿ

೩. ಕೊಟ್ಟಿರುವ ಪದಗಳ ಸಮಾಸ ಹೆಸರಿಸಿ.

ಮುಕ್ಕಣ್ಣ =ಮೂರು +ಕಣ್ಣುಳ್ಳವನು ಯಾರೋ ಅವನು (ಶಿವ) ಬಹುವ್ರೀಹಿ ಸಮಾಸ

ಹಣೆಯಲ್ಲಿ +ಕಣ್ಣುಳ್ಳವನು ಯಾರೋ ಅವನು (ಶಿವ) ಬಹುವ್ರೀಹಿಸಮಾಸ

೪. ಕೊಟ್ಟಿರುವ ಪದಗಳ ಸಂಧಿ ಹೆಸರಿಸಿ

ವಾಗ್ದೇವಿ -ವಾಕ್ +ದೇವಿ =ಜಶ್ತ್ವ ಸಂಧಿ

ಚಿದಾನಂದ - ಚಿತ್ +ಆನಂದ = ಜಶ್ತ್ವಸಂಧಿ

## ಗದ್ಯಪಾಠ –೫ ಪ್ರಜಾ ನಿಷ್ಠೆ – ಸಾ.ಶಿ. ಮರುಳಯ್ಯ

### ಕೃತಿಕಾರರ ಪರಿಚಯ



ಶ್ರೀ ಸಾಸಲು ಶಿವರುದ್ರಯ್ಯ ಮರುಳಯ್ಯ ಇವರು ಕ್ರಿ.ಶ. ೧೯೩೧ರಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಾಸಲು ಗ್ರಾಮದಲ್ಲಿ ಜನಿಸಿದರು. ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ ಕುರಿತ ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಪದವಿಯನ್ನು ಪಡೆದರು. ಇವರು ಶಿವತಾಂಡವ ,ಕೆಂಗನಕಲ್ಲು ,ವಚನ ವೈಭವ ,ನೆಲದ ಸೊಗಡು,ನಾಟ್ಯ ಮಯೂರಿ, ವಿಜಯ ವಾತಾಪಿ ಮೊದಲಾದ ೯೦ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ,ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ದೇವರಾಜ್ ಬಹದ್ದೂರ್ ಪ್ರಶಸ್ತಿಗಳು ದೊರೆತಿವೆ. ಇವರು ೫/೨/೨೦೧೬ ರಲ್ಲಿ ವಿಧಿವಶರಾದರು.

ಪ್ರಸ್ತುತ ಗದ್ಯಭಾಗವನ್ನು ಇವರ ನಾಟ್ಯಮಯೂರಿ ಎಂಬ ಕೃತಿಯಿಂದ ಆರಿಸಲಾಗಿದೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ.**

೧. ಚೋಳರು ಮತ್ತು ಹೊಯ್ಸಳರ ನಡುವೆ ಎಲ್ಲಿ ಯುದ್ಧ ನಡೆಯಿತು ?

ಉ: ಚೋಳರು ಮತ್ತು ಹೊಯ್ಸಳರ ನಡುವೆ ಮಳವಳ್ಳಿ,ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆಯಿತು.

೨. ಸಾಮ್ರಾಟನು ರಾಜಧಾನಿಯಲ್ಲಿ ಇಲ್ಲದಿದ್ದಾಗ ರಾಜ್ಯದ ಸಂರಕ್ಷಕನಾಗಿ ನಿಂತಿದ್ದವರು ಯಾರು ?

ಉ: ಸಾಮ್ರಾಟನು ರಾಜಧಾನಿಯಲ್ಲಿ ಇಲ್ಲದಿದ್ದಾಗ ರಾಜ್ಯದ ಸಂರಕ್ಷಕರಾಗಿ ನಿಂತಿದ್ದವರು ಮಹಾರಾಣಿ ಶಾಂತಲಾದೇವಿ.

೩. ಬನದಮ್ಮನ ಹಳ್ಳಿಯ ಜನರು ಎಲ್ಲಿ ಪಂಚಾಯತಿ ಸೇರಿದ್ದರು ?

ಉ: ಬನಶಂಕರಿಯ ದೇವಾಲಯದ ಮುಂಭಾಗದ ಕಟ್ಟೆಯ ಮೇಲೆ ಬನದಮ್ಮನಹಳ್ಳಿಯ ಜನರು ಪಂಚಾಯತಿ ಸೇರಿದ್ದರು.

೪. ಬನದಮ್ಮನಹಳ್ಳಿಯ ಪಂಚಾಯತಿಯಲ್ಲಿ ಯಾರ್ಯಾರ ನಡುವಿನ ನ್ಯಾಯ ತೀರ್ಮಾನವಾಗುತ್ತಿತ್ತು ?

ಬನದಮ್ಮನಹಳ್ಳಿಯ ಪಂಚಾಯತಿಯಲ್ಲಿ ಬೀರಣ್ಣ ಮತ್ತು ಈರಣ್ಣನ ನಡುವೆ ನ್ಯಾಯ ತೀರ್ಮಾನವಾಗುತ್ತಿತ್ತು.

**ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಹಲವರು ತಲಕಾಡನ್ನು ಲೂಟಿ ಮಾಡಬೇಕೆಂದು ಹೇಳಿದಾಗ ದೊರೆ ವಿಷ್ಣುವರ್ಧನನು ಏನೆಂದು ಹೇಳಿದನು ?

ಹೊಯ್ಸಳರು ಚೋಳಸೇನೆಯ ಮೇಲೆ ವಿಜಯ ಸಾಧಿಸಿದಾಗ ಹೊಯ್ಸಳರಲ್ಲಿ ಹಲವರು ತಲಕಾಡನ್ನು ಲೂಟಿಮಾಡಬೇಕೆಂದು ಇಚ್ಛಿಸಿದರು. ಆಗ ವಿಷ್ಣುವರ್ಧನನು ಕೆಚ್ಚೆದೆಯ ಕಟ್ಟಾಳುಗಳೇ ,ಇದು ನಮ್ಮ ವಿಜಯದ ದಿನವೆಂದು ತಿಳಿದು ಮೈಮರೆಯಬಾರದು . ಇದು ನಮ್ಮ ಸತ್ತ್ವಪರೀಕ್ಷೆಯ ಸಮಯವೂ ಹೌದು .ಆದ್ದರಿಂದ ಎಷ್ಟೇ ಸ್ಥಾನಮಾನ ಪದವಿ ಪ್ರಶಸ್ತಿ ಗಳು ಲಭಿಸಲಿ, ಮಾನವ ತನ್ನ ಮಾನವೀಯ ಗುಣಗಳನ್ನು ಮಾತ್ರ ಗಾಳಿಯಲ್ಲಿ ತೂರಿಬಿಡಬಾರದು . ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಇಲ್ಲ; ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮವಲ್ಲ. ಆ ಕಾರಣ ನೀವೆಲ್ಲರೂ ತಲಕಾಡವರನ್ನು ತಮ್ಮವರೆಂದೇ ತಿಳಿದು ನಡೆಸಿಕೊಳ್ಳಿ, ಅವರ ಮನೋಭೀತಿಯನ್ನು ದೂರ ಮಾಡಿ ಶಾಂತಿ ಸ್ಥಾಪನೆ ಮಾಡಿ,ನಾಲ್ಕು ದಿನಗಳಾದ ಮೇಲೆ ರಾಜಧಾನಿಗೆ ಹಿಂದಿರುಗೋಣ ." ಎಂದು ಹೇಳಿದನು.

೨. ತಲಕಾಡಿನ ಲೂಟಿಯ ವಿಚಾರದಲ್ಲಿ ವಿಷ್ಣುವರ್ಧನನ ನಿಲುವೇನು ?

ಉ: ಎಷ್ಟೇ ಸ್ಥಾನಮಾನ ಪದವಿ ಪ್ರಶಸ್ತಿಗಳು ಲಭಿಸಲಿ, ಮಾನವ ತನ್ನ ಮಾನವೀಯ ಗುಣಗಳನ್ನು ಮಾತ್ರ ಗಾಳಿಯಲ್ಲಿ ತೂರಿಬಿಡಬಾರದು . ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಇಲ್ಲ; ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮವಲ್ಲ ಎನ್ನುವುದು ತಲಕಾಡಿನ ಲೂಟಿಯ ವಿಚಾರದಲ್ಲಿ ವಿಷ್ಣುವರ್ಧನನ ನಿಲುವಾಗಿತ್ತು. ತಲಕಾಡ ವರನ್ನು ತಮ್ಮವರೆಂದೇ ತಿಳಿದುಕೊಂಡು ಅವರ ಮನೋಭೀತಿಯನ್ನು ದೂರ ಮಾಡಿ ಶಾಂತಿ ಸ್ಥಾಪನೆ ಮಾಡಿ ನಂತರ ರಾಜಧಾನಿ ಗೆ ಹಿಂದಿರುಗಬೇಕೆಂದು ಅವನು ತನ್ನ ಸೈನಿಕರಿಗೆ ಆದೇಶಿಸಿದನು.

೩.ಬನದಮ್ಮನ ಹಳ್ಳಿಯ ದೇವಾಲಯದ ಮುಂದೆ ಯಾವ ವಿಚಾರವಾಗಿ ಚರ್ಚೆ ನಡೆದಿತ್ತು ?

ಉ: ಬನದಮ್ಮನ ಹಳ್ಳಿಯ ದೇವಾಲಯದ ಮುಂದೆ ಭೂಮಿಯಲ್ಲಿ ಸಿಕ್ಕ ಹೊನ್ನಿನ ಕೊಪ್ಪರಿಗೆ ಯಾರಿಗೆ ಸಲ್ಲಬೇಕು ಎಂಬುದರ ಕುರಿತು ಚರ್ಚೆ ನಡೆದಿತ್ತು. ಬೀರಣ್ಣ ಎನ್ನುವವವನು ತನ್ನ ಹೊಲವನ್ನು ಎರಡು ವರ್ಷಗಳ ಹಿಂದೆ ಈರಣ್ಣನಿಗೆ ಮಾರಿದ್ದ. ಈರಣ್ಣ ಹೊಲವನ್ನು ಉಳುವಾಗ ಅವನಿಗೆ ಹೊನ್ನಿನ ಕೊಪ್ಪರಿಗೆ ಸಿಕ್ಕಿತು. ಅದನ್ನು ಅವನು ಬೀರಣ್ಣನ ಪೂರ್ವಿಕರು ಅವನಿಗಾಗಿ ಇಟ್ಟದ್ದೆಂ -ದು ಅದನ್ನು ಅವನಿಗೇ ಹಿಂದಿರುಗಿಸಬೇಕೆಂದು ಯೋಚಿಸಿದಾಗ ಹೊಲವನ್ನು ಮಾರಿದ ತನಗೆ ಅದರ ಮೇಲೆ ಯಾವುದೇ ಹಕ್ಕಿಲ್ಲ , ತನಗೆ ಹೊನ್ನಿನ ಕೊಪ್ಪರಿಗೆ ಬೇಡವೆಂದು ಬೀರಣ್ಣ ನಿರಾಕರಿಸುವನು. ಇದರಿಂದ ಆ ಕೊಪ್ಪರಿಗೆ ಯಾರಿಗೆ ಸೇರಬೇಕೆಂಬ ವಿಚಾರ -ವಾಗಿ ಬನದಮ್ಮನಹಳ್ಳಿಯ ದೇವಾಲಯದ ಮುಂದೆ ಚರ್ಚೆ ನಡೆದಿತ್ತು.

೪. ದೈವದವರ ತೀರ್ಪಿನ ಬಗ್ಗೆ ಶಾಂತಲೆಯ ಅಭಿಪ್ರಾಯವೇನು ?

ಬೀರಣ್ಣನು ಈರಣ್ಣನಿಗೆ ಮಾರಿದ ಹೊಲದಲ್ಲಿ ಸಿಕ್ಕ ಹೊನ್ನಿನ ಕೊಪ್ಪರಿಗೆಯು ತಮ್ಮಿಬ್ಬರಿಗೂ ಬೇಡವೆಂದು ಅವರಿಬ್ಬರೂ ವಾದಿಸು- ತ್ತಿರಲು ವ್ಯಾಜ್ಯ ತೀರ್ಮಾನಕ್ಕಾಗಿ ಸೇರಿದ ದೈವದವರಲ್ಲಿ ಮುಖ್ಯಸ್ಥನಾದ ಕೇತುಮಲ್ಲನು ನಿಮಗಿಬ್ಬರಿಗೂ ಬೇಡವಾದ ಹೊನ್ನು ರಾಜ್ಯ -ದ ಬೊಕ್ಕಸ ಸೇರಲಿ ಎಂದು ತೀರ್ಪು ನೀಡಿದನು. ಮರೆಯಲ್ಲಿ ನಿಂತು ಇದೆಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದ ಗಂಡುಡುಗೆಯಲ್ಲಿದ್ದ ಹೊಯ್ಸಳ ರಾಣಿ ಶಾಂತಲೆಯು ಮುಂದೆ ಬಂದು ಕೂಡದು ಎನ್ನುವಳು. ಅವರು ಕಾರಣವನ್ನು ಕೇಳಿದಾಗ ಬೊಕ್ಕಸಕ್ಕೆ ಸೇರಲು ಇದು ಸಾಮ್ರಾಟರ ದುಡಿಮೆಯಲ್ಲ. ಅವರ ಬೆವರಿನ ಫಲ ಅಲ್ಲ . ಅದು ಪ್ರಜೆಗಳ ಬೆವರಿನ ಫಲ ಎಂದು ಅಭಿಪ್ರಾಯ ಪಡುವಳು.

೫. ಶಾಂತಲೆ ನೀಡಿದ ತೀರ್ಪೇನು ?

ಕೊಪ್ಪರಿಗೆ ಹಣವು ರಾಜ್ಯದ ಬೊಕ್ಕಸಕ್ಕೆ ಸೇರಬೇಕೆಂದು ದೈವದವರಲ್ಲಿ ಮುಖ್ಯಸ್ಥನಾದ ಕೇತುಮಲ್ಲನು ಅಭಿಪ್ರಾಯ ಪಟ್ಟಾಗ ಶಾಂತಲೆ -ಯುಈ ಹೊನ್ನನ್ನು ನೇರವಾಗಿ ರಾಜ್ಯದ ಬೊಕ್ಕಸಕ್ಕೆ ಸೇರಿಸುವುದಿಲ್ಲ. ಇದು ದೈವದ ದುಡ್ಡು , ದೇವ ಕಾರ್ಯಕ್ಕೆವಿನಿಯೋಗ -ವಾಗಬೇಕು . ನಮ್ಮ ಸಂಸ್ಕೃತಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿ ಒಂದು ಕಲಾ ದೇಗುಲವನ್ನುರಾಜಧಾನಿದ್ವಾರಸಮುದ್ರದಲ್ಲಿ ನಿರ್ಮಿಸಬೇಕು ಎಂಬುದು ತನ್ನ ಬಹುದಿನಗಳ ಆಸೆ . ಅವಳ ದೇಗುಲಗಳ ಶಿಲ್ಪಕಲೆ ಹೊಯ್ಸಳರ ಶೈಲಿಗೆ ಮಾದರಿಯಾಗಬೇಕು. ವೇಲಾಪುರಿಯ ಚೆನ್ನಕೇಶವ ದೇವಾಲಯದಲ್ಲಿ ಲಾಲಿತ್ಯವಿದ್ದರೆ ದ್ವಾರಸಮುದ್ರದ ದೇಗುಲದಲ್ಲಿ ಭವ್ಯತೆ ನೆಲೆಗೊಂಡಿರಬೇಕು. ಅಂತಹ ಒಂದು ಕಲಾಪೂರ್ಣ ದೇವಾಲಯಕ್ಕಾಗಿ ಈ ಹೊನ್ನು ವಿನಿಯೋಗವಾಗಲಿ ಎಂದು ತೀರ್ಪು ನೀಡಿದಳು.

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಚೋಳ ದೊರೆ ಕುಲೋತ್ತುಂಗನು ಹೊಯ್ಸಳ ಸಾಮ್ರಾಜ್ಯದ ಮೇಲೆ ಯುದ್ಧ ಸಾರಲು ಇದ್ದ ಕಾರಣ ಹಾಗೂ ಪರಿಣಾಮ ವನ್ನು ವಿವರಿಸಿ.

ಉ: ಹೊಯ್ಸಳ ಸಾಮ್ರಾಜ್ಯದ ಪ್ರಗತಿಯನ್ನು ಕಂಡು ,ದಿನೇ ದಿನೇ ಪ್ರವರ್ಧಮಾನಕ್ಕೆ ಬರುತ್ತಿರುವ ವಿಷ್ಣುವರ್ಧನ ಭೂಪಾಲನನ್ನು ಸದೆಬಡಿಯಬೇಕೆಂದು ಶತ್ರು ರಾಜರುಗಳು ಹವಣಿಸುತ್ತಿದ್ದರು. ಅವರಲ್ಲಿ ಚೋಲಮಂಡಲ ಕುಲೋತ್ತುಂಗನು

ಪ್ರಮುಖನಾಗಿದ್ದು ಅವನು ಅಖಂಡ ಭಾರತದ ಒಡೆತನ ಬೇಕೆಂದು ಬಯಸುತ್ತಿದ್ದುಗಂಗಸಾಮ್ರಾಜ್ಯವನ್ನು ತನ್ನ ವಶಪಡಿಸಿಕೊಳ್ಳಬೇಕೆಂದು ರಾಜಪ್ರತಿನಿಧಿಯಾದ ಆದಿಯಮ ಪ್ರಚೋದಿಸಿ ದ್ವಾರಸಮುದ್ರದ ಮೇಲೆ ಕಳುಹಿಸಿದ .ಇದನ್ನು ಗುಪ್ತಚಾರರಿಂದ ತಿಳಿದ ಹೊಯ್ಸಳೇಶ್ವರನು ಸಕಲ ಸೇನಾ ಸಮೇತನಾಗಿ ಯುದ್ಧಕ್ಕೆ ಸನ್ನದ್ಧನಾಗಲೇಬೇಕಾಯಿತು. ದ್ವಾರಸಮುದ್ರದ ಸೇನೆ ಚೈತ್ರ ಯಾತ್ರೆ ಹೊರಟು ಮಳವಳ್ಳಿ ಮುಡುಕುತೊರೆಗಳ ಬಳಿಯಲ್ಲಿ ಘನಘೋರ ಯುದ್ಧ ನಡೆದು ಹೊಯ್ಸಳರ ಕೈಮೇಲಾಗಿ ಚೋಳ ಸೇನೆ ಕಂಗಾಲಾಯಿತು. ಆದಿಯಮ ಯುದ್ಧದಲ್ಲಿ ಮಡಿದ . ಅವನ ಸತ್ತ ಸುದ್ದಿ ತಿಳಿಯುತ್ತಲೇ ಚೋಳ ಸೇನೆ ದಿಕ್ಕುಪಾಲಾಗಿ ಓಡಿತು. ತಲಕಾಡ ಕೋಟೆ ಸುಲಭವಾಗಿ ವಿಷ್ಣುವರ್ಧನ ಭೂಪಾಲನ ಕೈ ವಶವಾಯಿತು. ಸಮಸ್ತ ಸೇನೆಯು ತಲಕಾಡುಗೊಂಡನಿಗೆ ಜಯವಾಗಲಿ ಎಂದು ಜೈಕಾರ ಹಾಕಿತು.

೨. ಬನದಮ್ಮನ ಹಳ್ಳಿಯ ಪಂಚಾಯತಿಯಲ್ಲಿ ನಡೆದ ನ್ಯಾಯ ಹಾಗೂ ಅದರ ತೀರ್ಪಿನ ಬಗ್ಗೆ ವಿವರಿಸಿ.

ಉ:ಹೊಯ್ಸಳ ದೊರೆ ವಿಷ್ಣುವರ್ಧನನು ಚೋಳರೊಂದಿಗೆ ಯುದ್ಧದಲ್ಲಿ ನಿರತನಾಗಿದ್ದ ಸಂದರ್ಭದಲ್ಲಿ ವಿಷ್ಣುವರ್ಧನನ ರಾಣಿ ಶಾಂತಲೆಯು ರಾಜ್ಯದ ರಕ್ಷಣೆಗೆ ನಿಂತಳು. ಪ್ರಜಾನುರಾಗಿಯಾಗಿದ್ದ ರಾಣಿಯು ಮಾರು ವೇಷ ಧರಿಸಿ ರಾಜ್ಯದ ವಿಧ್ಯಮಾನಗಳನ್ನು ತಿಳಿಯಲು ಸಂಚರಿಸುತ್ತಿದ್ದ ಸಂದರ್ಭದಲ್ಲಿ ಬನದಮ್ಮನಳ್ಳಿಯ ಬನಶಂಕರಿ ದೇವಾಲುದ ಬಳಿ ಭೂಮಿಯಲ್ಲಿ ಸಿಕ್ಕ ಹೊನ್ನಿನ ಕೊಪ್ಪರಿಗೆ ಯಾರಿಗೆ ಸಿಗಬೇಕೆಂಬ ಕುರಿತು ವ್ಯಾಜ್ಯ ತೀರ್ಮಾನ ನಡೆಯುತ್ತಿತ್ತು . ಬೀರಣ್ಣನೆನ್ನುವವನು ಈರಣ್ಣನಿಗೆ ಮಾರಿದ ಹೊಲದಲ್ಲಿ ಹೊನ್ನಿನ ಕೊಪ್ಪರಿಗೆ ಸಿಕ್ಕಾಗ ಈರಣ್ಣನು ಅದನ್ನು ಬೀರಣ್ಣನಿಗೇ ಸಲ್ಲಬೇಕೆಂದು ಹೇಳಲು ಬೀರಣ್ಣನು ಹೊಲವನ್ನು ಮಾರಿದ ಮೇಲೆ ಅದರ ಮೇಲೆ ತನಗೆ ಯಾವುದೇ ಹಕ್ಕು ಇಲ್ಲವೆಂದು ಇಬ್ಬರೂ ತಮಗೆ ಹೊನ್ನು ಬೇಡವೆಂದು ಹೇಳಿದಾಗ ನ್ಯಾಯ ತೀರ್ಮಾನ ನೀಡಲು ಬಂದ ದೈವದವರು ಹಾಗಾದರೆ ಬಂಗಾರದ ಕೊಪ್ಪರಿಗೆಯು ರಾಜ್ಯದ ಬೊಕ್ಕಸಕ್ಕೆ ಸೇರಲಿ ಎಂದು ತೀರ್ಪು ಕೊಟ್ಟರು. ಗಂಡುಡುಗೆಯಲ್ಲಿದ್ದ ಶಾಂತಲೆಯು ಅದು ಪ್ರಜೆಗಳ ಬೆವರಿನ ಫಲ ಅವರಿಗೇ ಸೇರಬೇಕು ,ರಾಜ್ಯದ ಬೊಕ್ಕಸಕ್ಕೆ ಸೇರಕೂಡದು ಎಂದಳು. ಆದರೆ ಅವರು ಪ್ರಜೆಗಳೆಲ್ಲರೂ ಹೊಯ್ಸಳೇಶ್ವರನ ಮಕ್ಕಳಾದುದರಿಂದ ರಾಜ್ಯದ ಬೊಕ್ಕಸಕ್ಕೇ ಸೇರಲಿ ಎಂದು ವಾದಿಸಿದರು. ತನ್ನ ಪ್ರಜೆಗಳ ಪ್ರಾಮಾಣಿಕತೆಯನ್ನು ನಿಷ್ಠೆಯನ್ನು ಮೆಚ್ಚಿದ ರಾಣಿ ಶಾಂತಲೆಯು ಕೊನೆಗೆ ಆ ಹಣವನ್ನು ನೇರವಾಗಿ ರಾಜ್ಯದ ಬೊಕ್ಕಸಕ್ಕೆ ಸೇರಿಸದೇ ನಮ್ಮ ಸಂಸ್ಕೃತಿಯ ಶ್ರೀಮಂತಿಕೆಗೆ ಸಾಕ್ಷಿಯಾಗಿ ಒಂದು ಕಲಾ ದೇಗುಲವನ್ನು ರಾಜಧಾನಿ ದ್ವಾರಸಮುದ್ರದಲ್ಲಿ ನಿರ್ಮಿಸಲು ಆ ಹೊನ್ನು ವಿನಿಯೋಗವಾಗಲೆಂದು ತೀರ್ಪು ನೀಡಿದಳು.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. “ ತಲಕಾಡುಗೊಂಡನಿಗೆ ಜಯವಾಗಲಿ "

ಉ : ಈ ಮೇಲಿನ ವಾಕ್ಯವನ್ನು ಸಾ.ಶಿ.ಮರುಳಯ್ಯನವರು ಬರೆದ ನಾಟ್ಯಮಯೂರಿ ಎಂಬ ಕೃತಿಯಿಂದ ಆರಿಸಲಾದ ಪ್ರಜಾನಿಷ್ಠೆ ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಹೊಯ್ಸಳ ದೊರೆ ವಿಷ್ಣುವರ್ಧನನು ಪ್ರವರ್ಧಮಾನಕ್ಕೆ ಬರುತ್ತಿದ್ದುದನ್ನು ನೋಡಿದ ಶತ್ರುರಾಜರುಗಳೇನಕರು ಅವನನ್ನು ಸದೆಬಡಿಯಲು ಹವಣಿಸುತ್ತಿದ್ದರು. ಅವರಲ್ಲಿ ಪ್ರಮುಖನಾದ ಚೋಳ ದೊರೆ ಕುಲೋತ್ತುಂಗನು ಆದಿಯಮ ಎಂಬ ರಾಜಪ್ರತಿನಿಧಿಯನ್ನು ಪ್ರಚೋದಿಸಿ ದ್ವಾರಸಮುದ್ರದ ಮೇಲೆ ದಾಳಿ ಮಾಡಲು ಕಳಿಸಿದಾಗ ಹೊಯ್ಸಳೇಶ್ವರ ವಿಷ್ಣುವರ್ಧನನೂ ಸಹ ಅನಿವಾರ್ಯವಾಗಿ ಯುದ್ಧದ ಸಿದ್ಧತೆ ಮಾಡಿಕೊಂಡು ತನ್ನ ಸೈನ್ಯದೊಂದಿಗೆ ತಲಕಾಡಿನ ಕಡೆ ಹೊರಟನು. ಮಳವಳ್ಳಿ ,ಮುಡುಕುತೊರೆಗಳ ಬಳಿಯಲ್ಲಿ ಘನ ಘೋರ ಯುದ್ಧ ನಡೆದು ಹೊಯ್ಸಳರ ಕೈ ಮೇಲಾಗಿ ಆದಿಯಮ ಯುದ್ಧದಲ್ಲಿ ಮಡಿದು ಚೋಳರ ಸೇನೆ ದಿಕ್ಕುಪಾಲಾಗಿ ತಲಕಾಡು ಕೋಟೆ ಸುಲಭವಾಗಿ ವಿಷ್ಣುವರ್ಧನನ ಕೈ ವಶವಾದಾಗ ಅವನ ಸಮಸ್ತ ಸೇನೆಯು ಮೇಲಿನಂತೆ ಜೈಕಾರ ಹಾಕಿತು.

ಸ್ವಾರಸ್ಯ : ಹೊಯ್ಸಳೇಶ್ವರ ವಿಷ್ಣುವರ್ಧನನ ಗೆಲುವನ್ನು ಕಂಡು ಅವನ ಸೇನೆ ಹರ್ಷಿಸಿದ ಸಂಭ್ರಮದ ಸಂದರ್ಭ ಇದಾಗಿದೆ.

೨. " ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮವಲ್ಲ "

ಉ : ಈ ಮೇಲಿನ ವಾಕ್ಯವನ್ನು ಸಾ.ಶಿ.ಮರುಳಯ್ಯನವರು ಬರೆದ ನಾಟ್ಯಮಯೂರಿ ಎಂಬ ಕೃತಿಯಿಂದ ಆರಿಸಲಾದ ಪ್ರಜಾನಿಷ್ಠೆ ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಹೊಯ್ಸಳ ದೊರೆ ವಿಷ್ಣುವರ್ಧನನು ಹೇಳಿದ್ದಾನೆ.

ಸಂದರ್ಭ : ಹೊಯ್ಸಳರು ಚೋಳಸೇನೆಯ ಮೇಲೆ ವಿಜಯ ಸಾಧಿಸಿದಾಗ ಹೊಯ್ಸಳರಲ್ಲಿ ಹಲವರು ತಲಕಾಡನ್ನು ಲೂಟಿಮಾಡಬೇಕೆಂದು ಇಚ್ಛಿಸಿದರು. ಆಗ ವಿಷ್ಣುವರ್ಧನನು ಕೆಚ್ಚೆದೆಯ ಕಟ್ಟಾಳುಗಳೇ ,ಇದು ನಮ್ಮ ವಿಜಯದ ದಿನವೆಂದು ತಿಳಿದು ಮೈಮರೆಯಬಾರದು.ಇದು ನಮ್ಮ ಸತ್ವಪರೀಕ್ಷೆಯ ಸಮಯವೂ ಹೌದು .ಆದ್ದರಿಂದ ಎಷ್ಟೇ ಸ್ಥಾನಮಾನ ಪದವಿ ಪ್ರಶಸ್ತಿಗಳು ಲಭಿಸಲಿ ,ಮಾನವ ತನ್ನ ಮಾನವೀಯ ಗುಣಗಳನ್ನು ಮಾತ್ರ ಗಾಳಿಯಲ್ಲಿ ತೂರಿಬಿಡಬಾರದು. ಸೆರೆಸಿಕ್ಕ ಸೈನಿಕರ ಮೇಲೆ ದೌರ್ಜನ್ಯ ನಡೆಸುವುದು ಯೋಧ ಧರ್ಮ ಅಲ್ಲ. ಸೋತ ಸಾಮ್ರಾಜ್ಯವನ್ನು ಲೂಟಿ ಮಾಡುವುದು ಯುದ್ಧ ಧರ್ಮವಲ್ಲ ಎಂದು ಹೇಳಿದನು.

ಸ್ವಾರಸ್ಯ : ಯುದ್ಧದಲ್ಲಿ ಗೆಲುವು ಪ್ರಧಾನವಾದುದು ನಿಜವೇ ಆದರೂ ಮಾನವೀಯ ಗುಣಗಳು ಅತೀ ಅಗತ್ಯ . ಅಸಹಾಯ ಸ್ಥಿತಿಯಲ್ಲಿರುವ ಸೆರೆಯಾದ ಶತ್ರು ಸೈನಿಕರ ಮೇಲೆ ದೌರ್ಜನ್ಯ ನಡೆಸಬಾರದೆಂಬ ಹೊಯ್ಸಳೇಶ್ವರನ ಮಾನವೀಯ ಮೌಲ್ಯವನ್ನು ಇಲ್ಲಿ ನೋಡಬಹುದಾಗಿದೆ.

೩. " ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ "

ಉ : ಈ ಮೇಲಿನ ವಾಕ್ಯವನ್ನು ಸಾ.ಶಿ.ಮರುಳಯ್ಯನವರು ಬರೆದ ನಾಟ್ಯಮಯೂರಿ ಎಂಬ ಕೃತಿಯಿಂದ ಆರಿಸಲಾದ ಪ್ರಜಾನಿಷ್ಠೆ ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಹೊಯ್ಸಳೇಶ್ವರ ವಿಷ್ಣುವರ್ಧನನು ದಂಡಯಾತ್ರೆ ಕೈಗೊಂಡ ಸಂದರ್ಭದಲ್ಲಿ ರಾಜ್ಯದ ರಕ್ಷಕಳಾಗಿನಿಂತಿದ್ದ ರಾಣಿ ಶಾಂತಲೆಯು ತನ್ನ ರಾಜ್ಯದಲ್ಲಿ ನಡೆಯುವ ವಿದ್ಯಮಾನ ತಿಳಿಯುವ ಸಂದರ್ಭದಲ್ಲಿ ಮಾರುವೇಷ ಧರಿಸಿ ಓಡಾಡುತ್ತಿದ್ದಾಗ ಆ ರಾಜ್ಯಕ್ಕೆ ಸೇರಿದ್ದ ಬನದಮ್ಮನಳ್ಳಿಯ ಬನಶಂಕರಿ ದೇವಾಲಯದಲ್ಲಿ ಭೂಮಿಯಲ್ಲಿ ಸಿಕ್ಕಿದ ಹೊನ್ನು ಯಾರಿಗೆ ಸಲ್ಲಬೇಕು ಎಂಬ ವ್ಯಾಜ್ಯದ ಕುರಿತು ದೈವದವರು ಚರ್ಚೆ ನಡೆಸಿದ್ದರು. ಬೀರಣ್ಣನೆನ್ನುವವನು ಈರಣ್ಣನಿಗೆ ಮಾರಿದ ಹೊಲದಲ್ಲಿ ಸಿಕ್ಕ ಹೊನ್ನಿನ ಕೊಪ್ಪರಿಗೆಯನ್ನು ಅವನು ಬೀರಣ್ಣನಿಗೆ ಮರಳಿಸಲು ಸಿದ್ಧನಾದಾಗ ಬೀರಣ್ಣನು ಹೊಲ ಮಾರಿದ ಮೇಲೆ ತನಗೆ ಅದರ ಮೇಲೆ ಯಾವುದೇ ಹಕ್ಕಿಲ್ಲ. ಆ ಹೊನ್ನಿನ ಕೊಪ್ಪರಿಗೆ ಏನಿದ್ದರೂ ಈರಣ್ಣನದೇ ಎನ್ನುವನು. ಆದರೆ ಈರಣ್ಣನು ತಾನು ಹಣ ಕೊಟ್ಟಿದ್ದು ,
ಮಣ್ಣಿಗೇ ಹೊರತೂ ಹೊನ್ನಿಗಲ್ಲ .ಇದು ಬೀರಣ್ಣನಿಗೇ ಸೇರಬೇಕು ಎಂದಾಗ ಬೀರಣ್ಣನು ಮೇಲಿನಂತೆ ಹೇಳುವನು.

ಸ್ವಾರಸ್ಯ : ಹೊಯ್ಸಳ ಸಾಮ್ರಾಜ್ಯದ ಪ್ರಜೆಗಳ ಪ್ರಾಮಾಣಿಕತೆ ಇಲ್ಲಿ ವ್ಯಕ್ತವಾಗಿದೆ.

ಅ. ಬಿಟ್ಟ ಸ್ಥಳದಲ್ಲಿ ಸೂಕ್ತಪದವನ್ನು ತುಂಬಿರಿ.

೧. ದ್ವಾರಸಮುದ್ರದ ಸೇನೆ ---- ಕಡೆಗೆ ಚೈತ್ರಯಾತ್ರೆ ಹೊರಟಿತು. (ತಲಕಾಡಿನ )

೨. ಮಾನವ ತನ್ನ --- ಗುಣಗಳನ್ನು ಗಾಳಿಯಲ್ಲಿ ತೂರಿಬಿಡಬಾರದು .(ಮಾನವೀಯ )

೩. ನಿಮ್ಮ ಊರಿನ ಹಣ ನಮ್ಮೂರಿನ --- ಯೇ ವಿನಿಯೋಗವಾಗಲಿ. (ಏಳಿಗೆಗಾಗಿ )

೪. ಬನದಮ್ಮನ ಹಳ್ಳಿಯ ಜನರಿಗೆ --- ಒಂದೇ ಮೆಟ್ಟಿಲಲ್ಲಿ ಉಳಿಯಿತು. (ಸ್ವರ್ಗ )

**ಭಾಷಾ ಚಟುವಟಿಕೆ**

ಅ) ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ .

೧. ಅನುನಾಸಿಕ ಸಂಧಿ ಎಂದರೇನು ? ಉದಾಹರಣೆ ಕೊಡಿ .

ಉ: ವರ್ಗದ ಪ್ರಥಮಾಕ್ಷರಗಳಿಗೆ ಯಾವುದೇ ಅನುನಾಸಿಕ ಅಕ್ಷರಗಳು ಪರವಾದರೂ ಅವುಗಳಿಗೆ ಅಂದರೆ ವರ್ಗದ ಪ್ರಥಮಾಕ್ಷರಗಳಿಗೆ ಅದೇ ವರ್ಗದ ಅನುನಾಸಿಕ ಅಕ್ಷರಗಳು ಆದೇಶವಾಗಿ ಬಂದರೆ ಅದು ಅನುನಾಸಿಕ ಸಂಧಿ . ಉದಾ : ವಾಙ್ಮಯ =ವಾಕ್ +ಮಯ

ಷಣ್ಮುಖ = ಷಟ್ + ಮುಖ – ಇತ್ಯಾದಿ

೨. ಕ್ರಿಯಾ ಸಮಾಸ ಎಂದರೇನು ? ಉದಾಹರಣೆ ಕೊಡಿ .

ಉ : ಪೂರ್ವಪದವು ದ್ವಿತೀಯಾ ವಿಭಕ್ತ್ಯಂತ ನಾಮಪದವಾಗಿದ್ದು ಪರಪದವು ಕ್ರಿಯಾ ರೂಪದಿಂದ ಕೂಡಿರುವ ಸಮಾಸವೇ ಕ್ರಿಯಾಸಮಾಸ .ಈ ಸಮಾಸಕ್ಕೆ ಅರಿಸಮಾಸ ದೋಷವಿಲ್ಲ.

ಉದಾ – ಮೈಯನ್ನು +ತಡವಿ =ಮೈದಡವಿ     ಕೈಯಂ +ಪಿಡಿದು =ಕೈಪಿಡಿದು

ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದವನ್ನು ಬರೆಯಿರಿ.

೧. ಯ್,ರ್,ಲ್,ವ್ : ಅವರ್ಗೀಯ ವ್ಯಂಜನಗಳು : : ಙ್,ಞ್, ಣ್,ನ್,ಮ್ : ____ (ಅನುನಾಸಿಕಗಳು )

೨. ಷಡಂಗ : ಜಶ್ತ್ವಸಂಧಿ : : ಷಣ್ಮಾಸ :_______ ( ಅನುನಾಸಿಕ ಸಂಧಿ )

೩. ಈ ಹೊನ್ನು : ಗಮಕ ಸಮಾಸ : : ಸ್ಥಾಪನೆ ಮಾಡು : ____ (ಕ್ರಿಯಾ ಸಮಾಸ )

೪. ವಾಗ್ದೇವಿ : ಜಶ್ತ್ವಸಂಧಿ : : ಜಗಜ್ಜ್ಯೋತಿ : ---- (ಶ್ಚುತ್ವಸಂಧಿ )

## ಗದ್ಯಪಾಠ – ೬ ಜನಪದ ಕಲೆಗಳ ವೈಭವ

ಪ್ರಕೃತ ಜನಪದ ಕಲೆಗಳ ವೈಭವ –ಜಾನಪದ ಗದ್ಯ ಭಾಗವನ್ನು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿರುವ ಜಾನಪದ ವಿಷಯ ವಿಶ್ವಕೋಶ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಹೊರತಂದಿರುವ ವಿಷಯ ಸಂಪದೀಕರಣ ಸಂಪನ್ಮೂಲ ಸಾಹಿತ್ಯ –ಕನ್ನಡ ಭಾಷೆ ' ಕೃತಿಗಳಲ್ಲಿರುವ ಸಂಪನ್ಮೂಲದ ಆಧಾರದಿಂದ ಈ ಗದ್ಯಭಾಗವನ್ನು ನಿಗದಿಪಡಿಸಿದೆ.

### ಒಂದು ವಾಕ್ಯದಲ್ಲಿ ಉತ್ತರಿಸಿ.

೧. ವೀರಗಾಸೆಯಲ್ಲಿ ಬಳಸುವ ವಾದ್ಯಗಳು ಯಾವುವು ?

ಉ: ಪಂಚವಾದ್ಯಗಳಾದ ತಾಳ,ಶ್ರುತಿ,ಚಮಾಳ,ಓಲಗ,ಕರಡೆ ಇವು ವೀರಗಾಸೆಯಲ್ಲಿ ಬಳಸುವ ವಾದ್ಯಗಳು .

೨ . ' ಕಂಸಾಳೆ' ಎಂಬ ಹೆಸರು ಹೇಗೆ ಬಂದಿತು ?

ಉ: ಕಾಂಸತಾಲ್ಯ ಎಂಬ ಪದದಿಂದ ಕಂಸಾಳೆ ಎಂಬ ಪದ ಬಂದಿದೆ.

೩ . ಡೊಳ್ಳು ಕುಣಿತ ಯಾವ ಸಂಪ್ರದಾಯಕ್ಕೆ ಸೇರಿದ ಕುಣಿತವಾಗಿದೆ ?

ಉ: ಡೊಳ್ಳುಕುಣಿತ ಬೀರೇಶ್ವರ ಸಂಪ್ರದಾಯಕ್ಕೆ ಸೇರಿದ ಕುಣಿತವಾಗಿದೆ.

೪. . ಭರಮ ದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ಯಾವಾಗ ನಡೆಯುತ್ತದೆ ?

ಉ: ಭರಮ ದೇವರ ಬ್ರಹ್ಮ ಪಲ್ಲಕ್ಕಿ ಉತ್ಸವ ಕಾಲಕ್ಕೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ನಡೆಯುತ್ತದೆ.

೫. ಯಕ್ಷಗಾನದ ಮೂರು ಶೈಲಿಗಳು ಯಾವುವು ?

ಉ: ಯಕ್ಷಗಾನದ ಮೂರು ಶೈಲಿಗಳು ತೆಂಕುತಿಟ್ಟು, ಬಡಗುತಿಟ್ಟು ಮತ್ತು ಬಡಬಡಗುತಿಟ್ಟು.

### ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .

೧. ವೀರಗಾಸೆ ಕುಣಿತದ ವೇಷಭೂಷಣಗಳು ಹೇಗಿರುತ್ತವೆ ? ವಿವರಿಸಿ .

ಉ : ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತದೆ. ಬಿಳಿಯ ಪಂಚೆಯ ವೀರಗಚ್ಚೆ ,ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ ರುಮಾಲು ,ಕಾವಿ ಬಣ್ಣದ ಕಸೆಯಂಗಿ , ಕೊರಳಲ್ಲಿ ರುದ್ರಾಕ್ಷಿ ಸರ ,ಹಣೆಗೆ ವಿಭೂತಿ,ಕರ್ಣಕುಂಡಲ ,ಸೊಂಟ ಪಟ್ಟಿ,ಬಿಚ್ಚುಗತ್ತಿ,ಕಾಲ್ಗೆಜ್ಜೆ ಧರಿಸುತ್ತಾರೆ.

೨. ದೇವರ ಗುಡ್ಡರಿಗೆ ಕಂಸಾಳೆಯ ಬಗ್ಗೆ ಇರುವ ಗೌರವ ಭಾವನೆ ಹೇಗೆ ವ್ಯಕ್ತಗೊಂಡಿದೆ ? ವಿವರಿಸಿ.

ಉ: ಕಂಸಾಳೆಯ ಮಹಿಮೆ ಅಪಾರ ಎಂದು ಭಾವಿಸುವ ಗುಡ್ಡರು ಇದನ್ನು ಪೂಜಿಸುತ್ತಾರೆ. ಕೈಗೆತ್ತಿಕೊಳ್ಳುವ ಮೊದಲು ಏಳ್ಮಲೆ ಹೆತ್ತಯ್ಯ ನಮ್ಮಪ್ಪಾಜಿ ಮಾಯ್ಕಾರ ಮಾದೇವ ನಿನ್ನ ಪಾದವೇ ಕಣಪ್ಪ ಶರಣು ಶರಣಾರ್ಥಿ ಎಂದು ನಮಸ್ಕರಿಸಿ ಕಣ್ಣಿಗೊತ್ತಿಕೊಂಡು ಅನಂತರ ಬಾರಿಸಲು ಪ್ರಾರಂಭಿಸುವರು.

೩. ಭರಮ ದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ಹೇಗೆ ನಡೆಯುತ್ತದೆ ?

ಉ : ಶ್ರಾವಣ ಸೋಮವಾರ ಅಮವಾಸ್ಯೆಯ ದಿನ ಮತ್ತು ಯುಗಾದಿಯಂದು ಪಲ್ಲಕ್ಕಿ ಉತ್ಸವದ ತರುವಾಯ ಪೂರ್ವ ರಾತ್ರಿಯಲ್ಲಿ ಭರಮದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ನಡೆಯುತ್ತದೆ. ಅದರಂತೆ ಭಕ್ತರು ದೇವರ ಮುಮ್ಮೇಳದವರಾಗಿ ಒಬ್ಬರು ಡೊಳ್ಳು ಬಾರಿಸುತ್ತ ಹಾಡು ಹೇಳುತ್ತಾರೆ. ಹಿಮ್ಮೇಳದಲ್ಲಿ ಹಲವರು ತಾಳ ಮತ್ತು ಕೊಳಲು ಬಾರಿಸುತ್ತ ಮುಮ್ಮೇಳದವರು ಹೇಳಿಕೊಟ್ಟ ಹಾಡಿನ ಭಾಗವನ್ನು ಹೇಳುತ್ತಾರೆ. ಸಾಮಾನ್ಯವಾಗಿ ಹಾಡಿನ ವಿಷಯ ದೈವ ಮಹಿಮೆ ಅಥವಾ ದೈವ ಭಕ್ತರ ಕಥೆಯಾಗಿರುತ್ತದೆ.

೪.ಯಕ್ಷಗಾನದಲ್ಲಿ ತೆಂಕುತಿಟ್ಟು ಮತ್ತು ಬಡಗುತಿಟ್ಟುಗಳ ವೈಶಿಷ್ಟ್ಯವೇನು ? ವಿವರಿಸಿ .
ಉ : ಯಕ್ಷಗಾನದಲ್ಲಿ ಬಳಸುವ ವೇಷಭೂಷಣಗಳು ತಿಟ್ಟು ಮತ್ತು ಪಾತ್ರಕ್ಕನುಗುಣವಾಗಿ ವೈವಿಧ್ಯಮಯವಾಗಿರುತ್ತವೆ. ತೆಂಕಿನಲ್ಲಿ ಅರ್ಥಗಾರಿಕೆಗೆ ಪ್ರಾಧಾನ್ಯತೆ ಇದ್ದು ದೊಡ್ಡ ದೊಡ್ಡ ಹೆಜ್ಜೆ ಹಾಕಿ ಗಿರಕಿ ಹೊಡೆಯುವುದು. ಇದರ ವೈಶಿಷ್ಟ್ಯ.ಬಡಗಿನಲ್ಲಿ ಕುಣಿತ ಹಾಗೂ ಅಭಿನಯಕ್ಕೆ ಪ್ರಾಧಾನ್ಯತೆ ಇದ್ದು ಚಕ್ರಮಂಡಿ ಕುಣಿತವಿರುತ್ತದೆ

೫. ಚೌಕಿಯಲ್ಲಿ ನಡೆಯುವ ವಿಶೇಷಗಳೇನು ? ವಿವರಿಸಿ.
ಉ: ರಂಗಸ್ಥಳ ಸಮೀಪವಿರುವ ನೇಪಥ್ಯವೇ ಚೌಕಿ ಅಥವಾ ಬಣ್ಣದ ಮನೆ.ಭಾಗವತರು ಹಿಮ್ಮೇಳ ಅಥವಾ ಪಾತ್ರಧಾರಿಗಳೊಂದಿಗೆ ಇಲ್ಲಿಗೆ ಆಗಮಿಸುತ್ತಾರೆ. ಪಾತ್ರಧಾರಿಗಳು ತಮ್ಮ ಬಣ್ಣಗಳನ್ನು ತಾವೇ ಹಚ್ಚಿಕೊಳ್ಳುತ್ತಾರೆ. ಮೊದಲು ಚೌಕಿಯಲ್ಲಿ ಗಣಪತಿ ಪೂಜೆ ನಡೆಯುತ್ತದೆ. ತದನಂತರ ಕೋಡಂಗಿಗಳು ರಂಗ ಪ್ರವೇಶಿಸುವರು.

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.
೧. ವೀರಗಾಸೆ ನರ್ತಕನ ಒಡಪಿನೊಂದಿಗಿನ ಕುಣಿತ ಹೇಗಿರುತ್ತದೆ ? ವಿವರಿಸಿ .
ಉ: “ಅಹಹಾ ರುದ್ರಾ ಅಹಹಾ ದೇವಾ" ಎಂದು .ವೀರಗಾಸೆಯ ನರ್ತಕ ಹೇಳುವ ಒಡಪಿನೊಂದಿಗೆ ಕುಣಿತ ಪ್ರಾರಂಭವಾಗುತ್ತದೆ. ಈ ಕುಣಿತದಲ್ಲಿ ವೀರಭದ್ರ ಹುಟ್ಟಿದ ಸಂದರ್ಭದ ವರ್ಣನೆ ಹೀಗಿದೆ. “ವೀರಭದ್ರ ಹುಟ್ಟಿದ ರೂಪ ಎಂತು ಎಂದೊಡೆ ಹುಟ್ಟಿದಾಗಲೆ ಹೂವಿನಗಾಸೆ ,ಮಂಜುಳಗಾಸೆ ,ಬ್ರಹ್ಮಗಾಸೆ ,ವಿಷ್ಣುಗಾಸೆ ,ರುದ್ರಗಾಸೆ ,ಮೆಟ್ಟಿದ ಹೊನ್ನಾವಿಗೆ ,ಸಾವಿರ ಶಿರ ,ಮೂರುಸಾವಿರ ನಯನ ,ಎರಡುಸಾವಿರ ಭುಜ ,ಕೆಕ್ಕರಿಸಿದ ಕಣ್ಣು ,ಜುಂಜುಮಂಡೆ ಇಂತಪ್ಪ ಶ್ರೀ ವೀರಭದ್ರದೇವರು ಹೋಮದ ಕುಂಡದ ಒಳಗೆ ಹೇಗೆ ಬರುತ್ತಾರೆಂದರೆ .. ಹೀಗೆ ಮುಂದುವರೆಯುತ್ತದೆ. ನಾಲ್ಕೈದು ಗತಿಗಳಿರುವ ವೀರಗಾಶಸೆಯ ಕುಣಿತದಲ್ಲಿ ಒಂದೊಂದು ಗತಿಯ ಕುಣಿತದ ಆನಂತರ ಮತ್ತೊಬ್ಬ ನರ್ತಕ ಒಡಪು ಹೇಳುತ್ತಾನೆ. ಗತಿಯಿಂದ ಗತಿಗೆ ,ಕುಣಿತ ಬಡಿತಗಳ ವೇಗ ಹೆಚ್ಚುತ್ತಾ ಹೋಗುತ್ತದೆ .

೨. ಬೀಸು ಕಂಸಾಳೆಯ ವೈಶಿಷ್ಟ್ಯತೆಯನ್ನು ಕುರಿತು ವಿವರಿಸಿ.
ಉ: ಬೀಸುಕಂಸಾಳೆ ದೇವರಗುಡ್ಡರ ವಿಶಿಷ್ಟ ನೃತ್ಯ .ಕರ್ನಾಟಕದ ಜನಪದ ನೃತ್ಯಗಳಲ್ಲಿ ಅಪೂರ್ವವಾದುದು. ಇದರಲ್ಲಿ ತಾರ್ ಬಟ್ಲು ,ತಟ್ ಬಟ್ಲು ,ಮುಂತಾದ ಬಗೆಗಳಿವೆ. ನಾಲ್ಕು ಮಂದಿ ಗುಡ್ಡರು ಒಂದು ಕಡೆ ನಿಂತು ಲಿಂಗ ಬಾ ,ಮುದ್ದುಲಿಂಗ ಬಾ ,ನಮ್ಮ ಮುದ್ದು ಮಾದಯ್ಯನ ಲಿಂಗ ಬಾ ಎಂದು ಹಾಡುತ್ತಾರೆ. ಕಂಸಾಳೆ ಹಿಡಿದ ಗುಡ್ಡತಾಳಕ್ಕೆ ತಕ್ಕಂತೆ ವಿವಿಧ ವಿನ್ಯಾಸದಲ್ಲಿ ಬಾರಿಸುತ್ತ ಕುಣಿಯುತ್ತಾನೆ. ತಲೆಯ ಮೇಲೆ ,ಬೆನ್ನ ಹಿಂದೆ ,ಕಾಲ ಕೆಳಗೆ ,ಕುಳಿತು, ನಿಂತು, ಬಾಗಿ ,ಬಳುಕಿ ತೀವ್ರಗತಿಯಲ್ಲಿ ನರ್ತಿಸುವ ಭಂಗಿ ಆಶ್ಚರ್ಯಕರ ಹಾಗೂ ಅದ್ಭುತ .ಒಮ್ಮೊಮ್ಮೆ ಇಬ್ಬರು ಗುಡ್ಡರು ಕಲೆತು ನರ್ತಿಸುವುದುಂಟು .ಒಬ್ಬರ ಕಂಸಾಳೆಗೆ ಮತ್ತೊಬ್ಬರು ಕುಟ್ಟುತ್ತಾ ಕುಣಿಯುವ ವೈಖರಿ ಆಕರ್ಷಕವಾಗಿರುತ್ತದೆ.

೩. ಡೊಳ್ಳು ಬಾರಿಸುವ ಕಲಾವಿದರ ವೇಷಭೂಷಣಗಳನ್ನು ಕುರಿತು ವಿವರಿಸಿ.

ಉ: ಡೊಳ್ಳುಕುಣಿತ ಜನಪದ ಕಲೆಗಳಲ್ಲಿ ವಿಶಿಷ್ಟವಾದುದು. ಸಾಮಾನ್ಯವಾಗಿ ಡೊಳ್ಳುಬಾರಿಸುವವರು ದೇಹದ ಮೇಲುಭಾಗಕ್ಕೆ ಕರಿಯ ಕಂಬಳಿಯನ್ನೂ ಸೊಂಟದ ಭಾಗಕ್ಕೆ ಮೊಳಕಾಲು ಮೇಲೆ ಬರುವಂತೆ ಕಚ್ಚೆಪಂಚೆಯನ್ನೂ ಉಡುತ್ತಾರೆ. ಕೆಲವೊಮ್ಮೆ ಹುಲಿಯ ಚರ್ಮದ ರೀತಿಯ ಉಡುಪನ್ನೂ ಧರಿಸುತ್ತಾರೆ. ಕುಣಿತದ ಕಾಲಕ್ಕೆ ವಾದ್ಯಗಾರರು ಹಸಿರು ಇಲ್ಲವೇ ಕೆಂಪು ಬಣ್ಣದ ಗಗ್ಗರಿ ಅಂಗಿ ಟೊಪ್ಪಿಗೆ ತೊಡುವರು. ಎರಡೂ ಕೈಗಳಲ್ಲೂ ಅದೇ ಬಣ್ಣದ ಕರವಸ್ತ್ರ ಹಿಡಿದಿರುತ್ತಾರೆ. ಕುಣಿತಕ್ಕೆ ಹಿನ್ನೆಲೆಯಾಗಿ ಡೊಳ್ಳು ,ತಾಳ ಮತ್ತು ಕೊಳಲು ಇರುತ್ತವೆ.

೪. ಯಕ್ಷಗಾನದ ವೈಶಿಷ್ಟ್ಯ ಹಾಗೂ ಪೂರ್ವರಂಗದ ಉದ್ದೇಶವನ್ನು ಕುರಿತು ವಿವರಿಸಿ.

ಪುರುಷರೇ ಸ್ತ್ರೀ ವೇಷಹಾಕುವುದು ಯಕ್ಷಗಾನದ ವೈಶಿಷ್ಟ್ಯ . ಯಕ್ಷಗಾನದ ಪೂರ್ವರಂಗ ಎಂದು ಕರೆಯಲಾಗುವ ಬಾಲಗೋಪಾಲ ,ಸ್ತ್ರೀ ವೇಷಗಳ ಮುಂದಿನ ಉದ್ದೇಶ ಕಥಾಪ್ರಸಂಗಕ್ಕೆ ಪ್ರೇಕ್ಷಕರನ್ನು ಮಾನಸಿಕವಾಗಿ ಅಣಿಗೊಳಿಸುವುದೇ ಆಗಿದೆ. ಪುನಃ ದೇವತಾ ಸ್ತುತಿ ಆದನಂತರ ಅಂದಿನ ಪ್ರಸಂಗಕ್ಕೆ ಸಂಬಂಧಿಸಿದಂತೆ ಒಡ್ಡೋಲಗ ಪ್ರಾರಂಭವಾಗುತ್ತದೆ. ಪಾತ್ರಧಾರಿಗಳು ಭಾಗವತರಿಗೆ ಅನಂತರ ರಂಗಸ್ಥಳಕ್ಕೆ ವಂದಿಸಿ ಕುಣಿದು ತಮ್ಮ ಸಾಮರ್ಥ್ಯ ಪ್ರದರ್ಶಿಸುವರು.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ

೧. " ಅಹಹ ರುದ್ರಾ ಅಹಹ ದೇವಾ "

ಈ ಮೇಲಿನ ವಾಕ್ಯವನ್ನು ಜನಪದ ಕಲೆಗಳ ವೈಭವ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ವೀರಗಾಸೆಯ ಬಗ್ಗೆ ವಿವರಿಸುವಾಗ ಈ ಮಾತು ಬಂದಿದೆ.

ಸಂದರ್ಭ : ವೀರಗಾಸೆ ಶೈವ ಸಂಪ್ರದಾಯದ ಧಾರ್ಮಿಕ ವೀರ ನೃತ್ಯ .ಸಾಮೂಹಿಕ ನೃತ್ಯವನ್ನೊಳಗೊಂಡ ಕರ್ನಾಟಕ ಜನಪದ ಕಲೆ .ವೀರಗಾಸೆಯ ಕುಣಿತ ವೀರಗಾಸೆಯ ನರ್ತಕ ಹೇಳುವ ಮೇಲೆ ಹೇಳುವ ಒಡಪಿನೊಂದಿಗೆ ಪ್ರಾರಂಭವಾಗುತ್ತದೆ ಎನ್ನುವಾಗ ಈ ಮಾತು ಬಂದಿದೆ.

ಸ್ವಾರಸ್ಯ : ವೀರಗಾಸೆಯ ನರ್ತನ ಮಾಡುವಾಗ ಪ್ರಾರಂಭದಲ್ಲಿ ಹೇಳುವ ಒಡಪು ವಿಶೇಷವಾದುದು. ಅದು ವೀರಗಾಸೆ ನರ್ತನಕ್ಕೆ ಆಕರ್ಷಣೆಯನ್ನು ತರುವಂತದು ಎನ್ನುವುದು ವಾಕ್ಯದ ಸ್ವಾರಸ್ಯವಾಗಿದೆ.

೨. “ ಭಲರೇವೀರ ,ಅಹಹಾ ವೀರ ”

ಉ: ಈ ಮೇಲಿನ ವಾಕ್ಯವನ್ನು ಜನಪದ ಕಲೆಗಳ ವೈಭವ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ವೀರ ಶೈವ ಸಂಪ್ರದಾಯದವರು ವಂಶಪಾರಂಪರ್ಯವಾಗಿ ವೀರಭದ್ರ ಕುಣಿತ ವೃತ್ತಿಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ವೀರಭದ್ರ ವೇಷಧಾರಿ ದಕ್ಷ ಯಾಗ,ವೀರಭದ್ರನ ಜನನ ಮತ್ತು ವೀರಭದ್ರ ವಿಜಯ ಮುಂತಾದವನ್ನು ಹೇಳುತ್ತಾನೆ. ಮತ್ತೊಬ್ಬ ವ್ಯಕ್ತಿ ಭಲರೇ ವೀರ,ಅಹಹಾ ವೀರ,ಎಂದು ಕಾಕು ಹೇಳುತ್ತ ಜಾಗಟೆ ಬಡಿಯುತ್ತ ನಿಧಾನವಾಗಿ ವೀರಭದ್ರನ ಸುತ್ತ ತಿರುಗುತ್ತಾನೆ ಎಂದು ವಿವರಿಸುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ವೀರಭದ್ರ ವೇಷಧಾರಿಯ ಕುಣಿತದ ಗಾಂಭೀರ್ಯವನ್ನು ವಿವರಿಸುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೩. " ಏಳ್ಮಲೆ ಹೆತ್ತಯ್ಯ ನಮ್ಮಪ್ಪಾಜಿ ಮಾಯ್ಕಾರ ಮಾದೇವ ಮಾದೇವ ನಿನ್ನ ಪಾದವೇ ಗತಿಕಣಪ್ಪ ಶರಣು ಶರಣಾರ್ಥಿ '"

ಉ: ಈ ಮೇಲಿನ ವಾಕ್ಯವನ್ನು ಜನಪದ ಕಲೆಗಳ ವೈಭವ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಕಂಸಾಳೆಯ ಬಗ್ಗೆ ವಿವರಿಸುವಾಗ ಈ ಮಾತು ಬಂದಿದೆ.

ಸಂದರ್ಭ : ವೃತ್ತಿಗಾಯಕರು ಬಳಸುವ ವಾದ್ಯಗಳಲ್ಲೆಲ್ಲ ಕಾಣಿಕೆ ಪಡೆಯುವ ಪಾತ್ರೆಯಾಗಿಯೂ ಬಳಕೆಯಾಗುವ ಏಕಮಾತ್ರ ಸಾಧನ ಕಂಸಾಳೆ.ಕಂಸಾಳೆಯ ಮಹಿಮೆ ಅಪಾರ ಎಂದು ಭಾವಿಸುವ ಗುಡ್ಡರು ಅದನ್ನು ಪೂಜಿಸುತ್ತಾರೆ. ಕಂಸಾಳೆಯನ್ನು ಕೈಗೆತ್ತಿಕೊಳ್ಳುವ ಮೊದಲು ಈ ಮೇಲಿನಂತೆ ಹೇಳುತ್ತ ಅದನ್ನು ನಮಸ್ಕರಿಸಿ ಕಣ್ಣಿಗೊತ್ತಿಕೊಂಡು ಅನಂತರ ಅದನ್ನು ಬಾರಿಸಲು ಪ್ರಾರಂಭಿಸುವರು ಎನ್ನುವಾಗ ಮೇಲಿನ ಮಾತು ಬಂದಿದೆ.
ಸ್ವಾರಸ್ಯ: ಮಾದೇವನ ಮೇಲಿನ ಭಕ್ತಿ ವ್ಯಕ್ತವಾಗಿದೆ.

೪." ಸ್ವಾಮಿ ನಮ್ಮಯ ದೇವರು ಬಂದಾನ ಬನ್ನಿರೇ "
ಉ: ಈ ಮೇಲಿನ ವಾಕ್ಯವನ್ನು ಜನಪದ ಕಲೆಗಳ ವೈಭವ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಸಂದರ್ಭ : ಸಾಮಾನ್ಯವಾಗಿ ಡೊಳ್ಳು ಕುಣಿತದ ಹಾಡಿನ ವಿಷಯ ದೈವ ಮಹಿಮೆ.ಅಥವಾ ದೈವ ಭಕ್ತರ ಕಥೆಯಾಗಿರುತ್ತದೆ. ಈ ಕಥನ ಕವನಕ್ಕೆ ರಗಳೆಯೇ ತಕ್ಕ ಧಾಟಿ . ಡೊಳ್ಳಿನ ಹಾಡು ಮೇಲಿನಂತೆ ಪ್ರಾರಂಭವಾಗುವುದು ಎಂದು ಡೊಳ್ಳು ಕುಣಿತದ ಕುರಿತು ಹೇಳುವಾಗ ಈ ಮೇಲಿನ ಮಾತು ಬಂದಿದೆ.
ಸ್ವಾರಸ್ಯ : ಸಾಮಾನ್ಯವಾಗಿ ಜನಪದ ನೃತ್ಯಗಳು ದೇವರ ಸ್ತುತಿಯೊಂದಿಗೆ ಪ್ರಾರಂಭವಾಗುವುದೆಂದು ಸೂಚಿಸುವುದು.

೫ " ದುಷ್ಟ ನಿಗ್ರಹ ,ಶಿಷ್ಟ ಪರಿಪಾಲನೆ "
ಉ: ಈ ಮೇಲಿನ ವಾಕ್ಯವನ್ನು ಜನಪದ ಕಲೆಗಳ ವೈಭವ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಯಕ್ಷಗಾನದ ಬಗ್ಗೆ ವಿವರಿಸುವಾಗ ಮೇಲಿನ ಮಾತು ಬಂದಿದೆ.
ಸಂದರ್ಭ : ಯಕ್ಷಗಾನ ಜನರಲ್ಲಿ (ಸಹೃದಯರಲ್ಲಿ ) ಧಾರ್ಮಿಕ ಮತ್ತು ನೀತಿ ಪ್ರಜ್ಞೆಗಳನ್ನು ಬೆಳೆಸಲು ಸಹಕಾರಿಯಾಗಿದೆ.ಯಕ್ಷಗಾನ ಪ್ರಸಂಗಗಳನ್ನು ರಚಿಸಿದವರು ದುಷ್ಟ ನಿಗ್ರಹ ಶಿಷ್ಟ ಪರಿಪಾಲನಾ ತತ್ವಗಳನ್ನು ಅಳವಡಿಸಿರುತ್ತಾರೆ ಎಂದು ವಿವರಿಸುವಾಗ ಮೇಲಿನ ಮಾತು ಬಂದಿದೆ.
ಸ್ವಾರಸ್ಯ : ಯಕ್ಷಗಾನದ ಪ್ರಸ್ತುತ ಪಡಿಸುವಿಕೆಯ ಉದ್ದೇಶಗಳಲ್ಲಿ ನೀತಿಯನ್ನು ಪ್ರೇಕ್ಷಕರಲ್ಲಿ ತುಂಬುವುದು ಒಂದು ಉದ್ದೇಶವಾಗಿದೆ ಎಂಬುದನ್ನು ಸೂಚಿಸುತ್ತದೆ.

**ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಸಂಭಾವ್ಯ ಉತ್ತರಗಳನ್ನು ನೀಡಿದೆ , ಅವುಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.**

೧. ವೀರಗಾಸೆ ----- ಸಂಪ್ರದಾಯಕ್ಕೆ ಸೇರಿದ ನೃತ್ಯ .--- ಶೈವ
(ಶೈವ ,ವೈಷ್ಣವ ,ಬೀರೇಶ್ವರ ,ಶ್ರೀವೈಷ್ಣವ )
೨. ಕಂಸಾಳೆಗುಡ್ಡರು ಕಂಸಾಳೆಯನ್ನು ಕೈಗೆತ್ತಿಕೊಳ್ಳುವ ಮೊದಲು --- ದೇವರನ್ನು ಸ್ಮರಿಸುತ್ತಾರೆ. --ಮಹದೇಶ್ವರ
(ಭೈರವೇಶ್ವರ ,ಮಹದೇಶ್ವರ ,ನಂಜುಂಡೇಶ್ವರ ,ವೈದ್ಯೇಶ್ವರ )
೩. ಡೊಳ್ಳು ಕುಣಿತದ ಕಲಾವಿದರು ಹಾಡುವ ಬೀರೇಶ್ವರ ದೇವರ ಹಾಡು --- ಗೆ ಉದಾಹರಣೆ .---ಕಾವ್ಯಗೀತೆ
(ಭಕ್ತಿಗೀತೆ , ಭಾವಗೀತೆ ,ಕಾವ್ಯಗೀತೆ ,ಜನಪದಗೀತೆ )
೪. ಯಕ್ಷಗಾನದಲ್ಲಿ ರಂಗಸ್ಥಳದ ಸಮೀಪವಿರುವ ನೇಪಥ್ಯವನ್ನು -- ಎಂದು ಕರೆಯುತ್ತಾರೆ. --- ಚೌಕಿ
(ವೇದಿಕೆ ,ತೆರೆ ,ಸಭಾಮಂಟಪ ,ಚೌಕಿ )

ಹೊಂದಿಸಿ ಬರೆಯಿರಿ

೧. ವೀರಭದ್ರ ಕಾಂಸತಾಳ್ಯ

೨. ಕಂಸಾಳೆ ಚರ್ಮವಾದ್ಯ

೩. ಡೊಳ್ಳು ಮಹಾಕಾವ್ಯ

೪. ಯಕ್ಷಗಾನ ಒಡಪು

೫. ಮಹದೇಶ್ವರ ವೇಷಭೂಷಣ

ಭಾಗವತ

ಏಳ್ಮಲೆ ಹೆತ್ತಯ್ಯ

ದೀವಟಿಗೆ

ಉತ್ತರ : ವೀರಭದ್ರ –ಒಡಪು ಕಂಸಾಳೆ –ಕಾಂಸತಾಳ್ಯ ಡೊಳ್ಳು –ಚರ್ಮವಾದ್ಯ

ಯಕ್ಷಗಾನ –ಭಾಗವತ ಮಹದೇಶ್ವರ–ಏಳ್ಮಲೆ ಹೆತ್ತಯ್ಯ

ಭಾಷಾ ಚಟುವಟಿಕೆ

೧. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಕ್ರಿಯಾಪದ ಎಂದರೇನು ?

ಉ: ಕ್ರಿಯೆ ಪೂರ್ಣಗೊಂಡಿದೆ ಎಂಬ ಅರ್ಥವನ್ನು ಸೂಚಿಸಬಲ್ಲ ಪದವೇ ಕ್ರಿಯಾಪದ

೨. ಕ್ರಿಯಾಪ್ರಕೃತಿ ಎಂದರೇನು ? ಉದಾಹರಣೆ ಕೊಡಿ .

ಉ: ಕ್ರಿಯಾರ್ಥವನ್ನು ಸೂಚಿಸುವ ಪ್ರತ್ಯಯವನ್ನು ಹೊಂದದಿರುವ ಪದವೇ ಕ್ರಿಯಾಪ್ರಕೃತಿ (ಧಾತು )

೩. ಸಕರ್ಮಕ ಧಾತುವನ್ನು ಉದಾಹರಣೆ ಸಹಿತ ವಿವರಿಸಿ.

ಉ : ಕರ್ಮಪದವನ್ನು ಬಯಸುವ ಧಾತುಗಳು ಸಕರ್ಮಕಧಾತು . ಉದಾ ನೆಡು ,ಕಟ್ಟು ,ಓದು .

೪. ಅಕರ್ಮಕ ಧಾತುಗಳಿಗೆ ಐದು ನಿದರ್ಶನ ಕೊಡಿ .

ಉ: ಕರ್ಮಪದವನ್ನು ಬಯಸದೇ ಇರುವ ಧಾತುಗಳು ಅಕರ್ಮಕ ಧಾತುಗಳು . ಉದಾ ಮಲಗು , ಬದುಕು , ಹೊಳೆ ,ಬೀಸು , ಓಡು ಇತ್ಯಾದಿ

ಆ . ಕೊಟ್ಟಿರುವ ವಾಕ್ಯಗಳಲ್ಲಿ ಸಕರ್ಮಕ ಮತ್ತು ಅಕರ್ಮಕ ಧಾತುಗಳನ್ನು ಗುರುತಿಸಿ ಬರೆಯಿರಿ.

೧. ವಿದ್ಯಾರ್ಥಿನಿಯರು ಆಟವನ್ನು ಆಡಿದರು. ಆಡು –ಸಕರ್ಮಕ

೨. ಗಾಳಿಯು ಬೀಸುತ್ತಿದೆ. ಬೀಸು –ಅಕರ್ಮಕ

೩. ಹಕ್ಕಿಗಳು ಚಿಲಿಪಿಲಿಗುಟ್ಟಿದವು . ಚಿಲಿಪಿಲಿಗುಡು –ಅಕರ್ಮಕ

೪. ರೈತನು ಹೊಲವನ್ನು ಉಳುತ್ತಾನೆ . ಉಳು –ಸಕರ್ಮಕ

# ಗದ್ಯಪಾಠ -೭ ಊರುಭಂಗ - ಭಾಸ

## ಕೃತಿಕಾರರ ಪರಿಚಯ

ಭಾಸನು ಸಂಸ್ಕೃತದ ಪ್ರಸಿದ್ಧ ನಾಟಕಕಾರ .ಇವನ ಕಾಲ ಕ್ರಿಸ್ತಪೂರ್ವ ಸುಮಾರು ೩೦೦ .ಈತ ದಕ್ಷಿಣ ಭಾರತದವನು .ಇವನು ೨೫ ರಿಂದ ೩೦ ನಾಟಕಗಳನ್ನು ಬರೆದಿರುವನೆಂದು ತಿಳಿದು ಬಂದಿದೆ. ಪ್ರತಿಜ್ಞಾ ಯೌಗಂಧರಾಯಣ ,ಸ್ವಪ್ನವಾಸವದತ್ತ ,ಚಾರುದತ್ತ ಇವು ಬೃಹತ್ಕಥೆ ಆಧಾರಿತವಾದವು.ಪ್ರತಿಮಾ ನಾಟಕ ,ಅಭಿಷೇಕ ,ಯಜ್ಞಫಲ ಇವು ರಾಮಾಯಣಕ್ಕೆ ಸಂಬಂಧಿಸಿದವು. ಪಂಚರಾತ್ರಾ ಮಧ್ಯಮ ವ್ಯಾಯೋಗ , ದೂತವಾಕ್ಯ ,ದೂತ ಘಟೋತ್ಕಚ ,ಕರ್ಣಭಾರ ,ಊರುಭಂಗ ಮಹಾಭಾರತ ಆಧಾರಿತ ನಾಟಕಗಳು.

**ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ದುರ್ಯೋಧನನು ನೆಲಕ್ಕುರುಳಿದ ಭೀಮನನ್ನು ಏನೆಂದು ಮೂದಲಿಸುತ್ತಾನೆ ?

ಉ: ದುರ್ಯೋಧನನು ನೆಲಕ್ಕುರುಳಿದ ಭೀಮನನ್ನು ಕಂಡು " ಹೆದರಬೇಡ ಭೀಮ ,ನೆಲಕ್ಕೆ ಬಿದ್ದ ಶತ್ರುವನ್ನು ಯಾವ ವೀರನೂ ಘಾತಿಸುವುದಿಲ್ಲ " ಎಂದು ಮೂದಲಿಸುತ್ತಾನೆ .

೨. ತೊಡೆ ಮುರಿದು ಬಿದ್ದಿದ್ದ ದುರ್ಯೋಧನನ್ನು ನೋಡಲು ಯಾರು ,ಯಾರು ಬಂದರು ?

ಉ: ತೊಡೆ ಮುರಿದು ಬಿದ್ದಿದ್ದ ದುರ್ಯೋಧನನ್ನು ನೋಡಲು ಧೃತರಾಷ್ಟ್ರ ,ಗಾಂಧಾರಿ ಮತ್ತು ದುರ್ಜಯರು ಬಂದರು.

೩. ದುರ್ಯೋಧನನು ದುರ್ಜಯನಿಗೆ ಏನೆಂದು ಬುದ್ಧಿವಾದವನ್ನು ಹೇಳುತ್ತಾನೆ ?

ಉ: ತನಗೆ ವಿಧೇಯನಾಗಿರುವಂತೆ ಪಾಂಡವರಿಗೂ ವಿಧೇಯನಾಗಿದ್ದು ಅಜ್ಜಿ ಕುಂತಿಯ ಆಜ್ಞೆಯ ಪ್ರಕಾರ ನಡೆದು ಅಭಿಮನ್ಯುವಿನ ತಾಯಿ ಮತ್ತು ದ್ರೌಪದಿಯಿಬ್ಬರನ್ನೂ ತಾಯಿಯಂತೆಯೇ ಪೂಜಿಸು ಎಂದು ದುರ್ಯೋಧನನು ದುರ್ಜಯನಿಗೆ ಬುದ್ಧಿ ಹೇಳಿದನು.

೪. ಅಶ್ವತ್ಥಾಮನು ದುರ್ಯೋಧನನಿಗೆ " ತಾನು ಏನು ಮಾಡಲು ಸಿದ್ಧನಾಗಿದ್ದೇನೆ ಎಂದು ಹೇಳುತ್ತಾನೆ ?

ಉ: ಅಶ್ವತ್ಥಾಮನು ದುರ್ಯೋಧನನಿಗೆ ತಾನೀಗ ಧರ್ಮದ ಮೂಲವನ್ನೇ ಉತ್ಪಾಟನೆ ಮಾಡಿಬಿಡುತ್ತೇನೆ ಎಂದು ಹೇಳುತ್ತಾನೆ.

೫. ಅಶ್ವತ್ಥಾಮನು ನಿನ್ನ ದರ್ಪವೆಲ್ಲವೂ ಮುರಿದುಬಿತ್ತೇ ಎಂದಾಗ ದುರ್ಯೋಧನನು ಏನು ಹೇಳುತ್ತಾನೆ ?

ಉ: ರಾಜನಿಗೆ ಅಭಿಮಾನವೇ ಶರೀರ ,ಈ ಅಭಿಮಾನಕ್ಕಾಗಿಯೇ ಯುದ್ಧವನ್ನು ಕೈಗೊಂಡದ್ದು . ದ್ರೌಪದಿಯ ಮುಂದಲೆವಿಡಿದೆಳೆದಾಡಿದೆವು. ಪಗಡೆ ಆಟದ ನೆಪದಲ್ಲಿ ಸೋತ ಪಾಂಡವರನ್ನು ಕಾಡಿನಲ್ಲಿ ತಿರ್ರನೆ ತಿರುಗಾಡಿಸಿದೆವು. ಇವುಗಳ ಮುಂದೆ ಪಾಂಡವರು ನನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪವಲ್ಲವೇ ಆಲೋಚಿಸಿ ನೋಡು ಎಂದು ದುರ್ಯೋಧನನು ಅಶ್ವತ್ಥಾಮನಿಗೆ ಹೇಳುತ್ತಾನೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಅಶ್ವತ್ಥಾಮನು ಕೃಷ್ಣನನ್ನು ಚಿಮ್ಮಿಬಿಡುತ್ತೇನೆ ಎಂದಾಗ ದುರ್ಯೋಧನನು ಏನು ಹೇಳಿದನು ?

ಉ: ಅಶ್ವತ್ಥಾಮನು ಕೃಷ್ಣನನ್ನು ಚಿಮ್ಮಿಬಿಡುತ್ತೇನೆ ಎಂದಾಗ ದುರ್ಯೋಧನನು ಅಯ್ಯ್ಯಾಬೇಡ ಹಾಗೆನ್ನಬೇಡ ,ಅಭಿಷಿಕ್ತ ರಾಜರೆಲ್ಲರೂ ಭೂಮಿ ತಾಯಿಯ ಮಡಿಲಲ್ಲಿ ಮಲಗಿಬಿಟ್ಟರು. ಕರ್ಣನು ಸ್ವರ್ಗಸ್ಥನಾದನು. ಭೀಷ್ಮಾಚಾರ್ಯರ

ದೇಹಪಾತವಾಯಿತು. ನನ್ನ ತಮ್ಮಂದಿರೂ ಗತಿಸಿ ಹೋದರು. ನನ್ನ ಗತಿಯೂ ಹೀಗಾಯಿತು. ಗುರುಪುತ್ರ ಇನ್ನು ಬಿಲ್ಲನ್ನು ಬಿಸಾಡು ಎಂದು ಹೇಳಿದನು.

೨. ಅಶ್ವತ್ಥಾಮನು ಧನುಷ್ಠಂಕಾರ ಕೇಳಿದ ಬಲರಾಮನು ಅಹ! ವೈರವು ಪಶ್ಚಾತ್ತಾಪವಾಗಿ ಪರಿಣಮಿಸಿತಲ್ಲಾ ! ಇದೆಲ್ಲಿಯದು ಶಬ್ದ ? ರಣದುಂದುಭಿಗಳ ಮೊಳಗು ನಿಂತು ಮೂಕವಾದ. ಬಾಣ -ಕವಚ -ಚಾಮರ -ಛತ್ರಗಳು ಚೆಲ್ಲಿರುವ ,ಯೋಧರೂ ಸೂತರೂ ಸತ್ತು ಬಿದ್ದಿರುವ ಈ ರಣರಂಗದಲ್ಲಿ ತನ್ನ ಧನುಷ್ಠಂಕಾರದಿಂದ ಕಾಗೆಗಳ ಗುಂಪನ್ನು ಹೆದರಿಸಿ ,ಆಕಾಶದ ತುಂಬ ಚದುರುವಂತೆ ಮಾಡಿದವರು ಯಾರು ? ಎಂದು ಹೇಳಿದನು .

೩. ದುರ್ಜಯನು ತನ್ನ ಬಳಿ ಬರುತ್ತಿರುವುದನ್ನು ಕಂಡು ದುರ್ಯೋಧನನು ಏನೆಂದುಕೊಳ್ಳುತ್ತಿದ್ದಾನೆ ?
ಉ: ಅಹ! ಈ ಚಿಣ್ಣನೂ ಬಂದ ! ಹೃದಯದಲ್ಲಿ ಸದಾ ಸನ್ನಿಹಿತವಾಗಿರುವ ಪುತ್ರ ಸ್ನೇಹವು ನನ್ನನ್ನೀಗ ದಹಿಸುತ್ತಿದೆ ತನ್ನ ತೊಡೆಯ ಮೇಲೆ ಮಲಗಲು ಯೋಗ್ಯನಾದ ಈ ಹಸುಳೆ ದುರ್ಜಯನು ದುಃಖ ಎಂದರೇನೆಂಬುದನ್ನೇ ಅರಿಯ .ಸೋತುಬಿದ್ದು ಈ ದುರವಸ್ಥೆಯಲ್ಲಿರುವ ನನ್ನನ್ನು ಕಂಡು ಏನೆಂದಾನೋ ಎಂದು ದುರ್ಜಯನು ತನ್ನ ಬಳಿ ಬರುತ್ತಿರುವುದನ್ನು ನೋಡಿ ದುರ್ಯೋಧನನು ಅಂದುಕೊಳ್ಳುವನು.

೪. ಪಾಂಡವರು ತನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪ ಎಂಬುದನ್ನು ದುರ್ಯೋಧನನು ಹೇಗೆ ಸಮರ್ಥಿಸಿದ್ದಾನೆ ?
ಉ: ರಾಜನಿಗೆ ಅಭಿಮಾನವೇ ಶರೀರ . ಈ ಅಭಿಮಾನಕ್ಕಾಗಿಯೇ ಯುದ್ಧವನ್ನು ಕೈಗೊಂಡಿದ್ದು.ದ್ರೌಪದಿಯ ಮುಂದಲೆವಿಡಿದೆಳೆದಾಡಿದೆವು. ಪಗಡೆ ಆಟದ ನೆಪದಲ್ಲಿ ಸೋತ ಪಾಂಡವರನ್ನು ಕಾಡಿನಲ್ಲಿ ತಿರ್ರನೆ ತಿರುಗಾಡಿಸಿದೆವು. ಇವುಗಳ ಮುಂದೆ ಪಾಂಡವರು ನನ್ನ ದರ್ಪವನ್ನು ಮುರಿದರೆಂಬ ಮಾತು ಅತ್ಯಲ್ಪವಲ್ಲವೇ ಆಲೋಚಿಸಿ ನೋಡು ಎಂದು ದುರ್ಯೋಧನನು ಸಮರ್ಥಿಸಿದ್ದಾನೆ.

**ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ದುರ್ಯೋಧನನು ತಂದೆ ತಾಯಿಗಳಿಗೆ ಅಭಿವಂದಿಸುವ ಸಂದರ್ಭದಲ್ಲಿ ಧೃತರಾಷ್ಟ್ರ -ದುರ್ಯೋಧನರ ನಡುವೆ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.
ಉ : ಭೀಮನ ಗದಾ ಪ್ರಹಾರದಿಂದ ತೊಡೆ ಮುರಿದು ಬಿದ್ದಿದ್ದ ದುರ್ಯೋಧನನ್ನು ನೋಡಲು ಧೃತರಾಷ್ಟ್ರ ಗಾಂಧಾರಿಯರು ಬರುತ್ತಾರೆ. ಧೃತರಾಷ್ಟ್ರನು ಬಂಗಾರದ ಕುಂಭದಂತೆ ಧೀರೋದಾತ್ತನಾಗಿದ್ದ ತನ್ನ ಮಗನು ಮುರಿದುಬಿದ್ದ ಮಹಾದ್ವಾರದ ಲಾಳಮುಂಡಿಗೆಯಂತೆ ನೆಲದಲ್ಲಿ ಬಿದ್ದಿದ್ದಾನೆಂದು ಶೋಕಿಸುತ್ತಾನೆ. ದುಃಖಿಸುವುದರಿಂದ ಏನೂ ಪ್ರಯೋಜನವಿಲ್ಲವೆಂದು ದುರ್ಯೋಧನ ಹೇಳಿದಾಗ ಧೃತರಾಷ್ಟ್ರ ವೀರ್ಯ ಬಲೋತ್ಸಿಕರಾಗಿ ಯುದ್ಧ ಯಜ್ಞ ದೀಕ್ಷಿತರಾದ ನಿನ್ನ ತಮ್ಮಂದಿರು ನೂರೂ ಜನರೂ ಹತರಾಗಿದ್ದಾರೆ. ನೀನೊಬ್ಬನೂ ಗತಿಸಿದರೆ ಸರ್ವನಾಶ ಎನ್ನುತ್ತಾನೆ.ಯುದ್ಧದಲ್ಲಿ ಹಿಮ್ಮೆಟ್ಟದೆ ಹುಮ್ಮಸ್ಸಿನಿಂದ ಹೋರಾಡಿ ಹತನಾದನೆಂದು ಸಮಾಧಾನ ಪಡಿಸಿ ,ನನ್ನನ್ನೂ ಅನುಗ್ರಹಿಸಿ ಯಾವ ಘನತೆಯಿಂದ ಹುಟ್ಟಿದೆನೋ ಅದೇ ಘನತೆಯಿಂದ ಸ್ವರ್ಗಕ್ಕೆ ಹೋಗುತ್ತೇನೆ ಎನ್ನುತ್ತಾನೆ ದುರ್ಯೋಧನ .ಹುಟ್ಟುಕುರುಡನೂ ,ವೃದ್ಧನೂ ಆದ ನನಗೆ ಬಾಳಿನ ಆಶೆ ಇಂಗಿ ಹೋಗಿದೆ. ಪ್ರಾಪ್ತವಾಗಿರುವ ಈ ಪುತ್ರಶೋಕವು ನನ್ನೆಲ್ಲ ಸಂಯುಮವನ್ನೂ ಸಡಿಲಗೊಳಿಸಿ ನನ್ನಾತ್ಮವನ್ನಾಕ್ರಮಿಸಿ ಬಿಟ್ಟಿದೆ ಎಂದು ಧರತರಾಷ್ಟ್ರನು ದುಃಖಿಸುತ್ತಾನೆ.

೨. ದುರ್ಯೋಧನ ಮತ್ತು ದುರ್ಜಯರ ನಡುವೆ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

ಉ: ಭೀಮನ ಹೊಡೆತದಿಂದ ನೆಲದ ಮೇಲೆ ಒರಗಿದ್ದ ದುರ್ಯೋಧನನನ್ನು ನೋಡಲು ಬಂದ ಧೃತರಾಷ್ಟ್ರ ಗಾಂಧಾರಿಯರ ಜೊತೆ ಬಂದ ದುರ್ಯೋಧನನ ಮಗ ದುರ್ಜಯನು ನಮ್ಮಪ್ಪಾಜಿ ಯಾಕೆ ನೆಲದ ಮೇಲೆ ಬಿದ್ದಿರುವರೆನ್ನುತ್ತಾನೆ .ಯಾಕೆ ಬಂದೆ ಎಂದು ದುರ್ಯೋಧನನು ವಿಚಾರಿಸಿದಾಗ ನೀವು ತಡಮಾಡಿದಿರಿ ಹೊತ್ತಾಯಿತು ಎಂದು ಬಂದೆ ಎನ್ನುತ್ತಾನೆ ದುರ್ಜಯ. ನಿಮ್ಮ ತೊಡೆಯ ಮೇಲೆ ಕುಳಿತುಕೊಳ್ಳುತ್ತೇನೆ ಎಂದು ದುರ್ಜಯನು ಹೇಳಿದಾಗ ದುರ್ಯೋಧನನು ತಡೆಯುವನು .ಏಕೆ ತಡೆಯುವಿರಿ ಎಂದು ದುರ್ಜಯನು ಪ್ರಶ್ನಿಸಲಾಗಿ ಇದುವರೆಗೂ ನೀನು ಕುಳಿತು ಆಡಿ ಮಲಗಿ ನಿನಗೆ ಚಿರಪರಿಚಿತವಾದ ಈ ತೊಡೆಯು ನಿನ್ನ ಭಾಗಕ್ಕಿಲ್ಲಪ್ಪ ಎನ್ನುತ್ತಾನೆ ದುರ್ಯೋಧನ . ಅಪ್ಪಾಜಿ ನೀವೆಲ್ಲಿಗೆ ಹೋಗುತ್ತೀರಿ ಎಂದು ದುರ್ಜಯನು ಮರುಪ್ರಶ್ನಿಸಿದಾಗ ನನ್ನ ತಮ್ಮಂದಿರು ಇರುವಲ್ಲಿಗೆ ಎಂದು ದುರ್ಯೋಧನನು ಹೇಳುತ್ತಾನೆ. ನನ್ನನ್ನೂ ಕರೆದುಕೊಂಡು ಹೋಗಿ ಎಂದು ದುರ್ಜಯನು ಕೇಳಿದಾಗ ವೃಕೋದರನನ್ನು ಕೇಳು ಎನ್ನುತ್ತಾನೆ. ಬನ್ನಿ ಹೋಗೋಣ ಎಂದು ತಂದೆಯನ್ನು ಕರೆಯುತ್ತಾನೆ. ನಾನು ತಡೆಯಲಾರೆನು ಎಂದು ದುರ್ಯೋಧನನು ಹೇಳಿದಾಗ ನಾನು ನಿಮ್ಮನ್ನು ಎತ್ತಿಕೊಳ್ಳುತ್ತೇನೆ ಎನ್ನುತ್ತಾನೆ .ತನಗೆ ವಿಧೇಯನಾಗಿರುವಂತೆ ಪಾಂಡವರಿಗೂ ವಿಧೇಯನಾಗಿದ್ದು ಅಜ್ಜಿ ಕುಂತಿಯ ಆಜ್ಞೆಯ ಪ್ರಕಾರ ನಡೆದು ಅಭಿಮನ್ಯುವಿನ ತಾಯಿ ಮತ್ತು ದ್ರೌಪದಿಯರಿಬ್ಬರನ್ನೂ ತಾಯಿಯಂತೆಯೇ ಪೂಜಿಸು .ನಿನ್ನ ತಂದೆಯಾದ ದುರ್ಯೋಧನನು ಶ್ಲಾಘ್ಯನೂ ,ಅಭಿಮಾನ ದೀಪ್ತ ಹೃದಯನೂ ಆಗಿ ಸಮಬಲನಾದ ಶತ್ರುವನ್ನು ಯುದ್ಧದಲ್ಲಿ ಎದುರಿಸಿ ಹತನಾದನೆಂದು ನೆನೆದು ಶೋಕವನ್ನು ತ್ಯಜಿಸು .ರೇಷ್ಮೆ ಧರಿಸಿದ ಧರ್ಮರಾಯನ ನಿಡಿದಾದ ಬಲದೋಳನ್ನು ಹಿಡಿದು ಮಿಕ್ಕ ಪಾಂಡವರೊಡಗೂಡಿ ನನ್ನ ಹೆಸರು ಹೇಳಿ ನನಗೆ ತರ್ಪಣ ಕೊಡು ಎಂದು ದುರ್ಯೋಧನನು ದುರ್ಜಯನಿಗೆ ಹೇಳಿದನು.

೩. ಅಶ್ವತ್ಥಾಮನು ದುರ್ಯೋಧನನ ಬಳಿ ಸಾರುವಾಗ ಆಡಿದ ಮಾತುಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

ಉ: ರಕ್ಕಿಗೊಳಗಾಗಿ ತೊಡೆ ಮುರಿದುಕೊಂಡ ಕೌರವನು ನಾನಲ್ಲ. ಶಿಥಿಲವೂ ವಿಫಲವೂ ಆದ ಅಸ್ತ್ರಗಳನ್ನು ಪಡೆದ ಸೂತಪುತ್ರ ನಾನಲ್ಲ. ರಣಾಂಗಣದಲ್ಲಿ ಏಕಾಂಗಿಯಾಗಿ ನಿಂತಿದ್ದೇನೆ. ನಾನು ದ್ರೋಣಪುತ್ರ. ನಾನು ನಮ್ಮ ತಂದೆಗೆ ಉತ್ತರಕ್ರಿಯೆ ಮಾಡಿ ಬರುವಷ್ಟರಲ್ಲಿ ಕುರುಕುಲತಿಲಕ ಪ್ರಿಯನಾದ ದುರ್ಯೋಧನನು ಪಾಂಡವರಿಂದ ಮೋಸಕ್ಕೆ ಒಳಗಾದನು. ಅವನೊಂದಿಗೆ ಹನ್ನೊಂದು ಅಕ್ಷೋಹಿಣಿ ಸೇನೆಯ ರಾಜರಿದ್ದರು. ಪರಶುರಾಮನ ಹರಿತ ಬಾಣಗಳಿಂದ ಭೇದಿಸಲಾರದ ಕವಚವನ್ನು ತೊಟ್ಟ ಭೀಷ್ಮಾಚಾರ್ಯರಿದ್ದರು. ಮಹಾ ಯೋಧಾಗ್ರಣಿಯಾದ ನಮ್ಮ ತಂದೆ ದ್ರೋಣರಿದ್ದರು. ರಣದ ಮಂಚೂಣಿಯಲ್ಲಿ ಇಂಥವರಿದ್ದೂ ಸ್ವಯಂ ಅತಿರಥನಾದ ದುರ್ಯೋಧನನಿಗೆ ಕಾಲಮಹಿಮೆಯಿಂದ ಸೋಲಾಯಿತು. ರಣಾರ್ಣವ ಪಾರಂಗತನಾದ ಪಾರಂಗತನಾದ ಕುರುರಾಜನು ಇಳೆಗುರುಳಿದ ಗಜ-ತುರಗ-ನರ-ರಥಗಳ ಪ್ರಾಕಾರದ ಮಧ್ಯದಲ್ಲಿದ್ದಾನೆ. ಇಟ್ಟ ಕೀರೀಟ ಕೆಳಗುರುಳಿ ,ಕೆಂಗೂದಲೆಲ್ಲ ಕೆದರಿ ,ಗದೆಯ ಪೆಟ್ಟಿಂದಾದ ಹುಣ್ಣುಗಳಿಂದ ರಕ್ತ ಸುರಿದು ಮೈಯೆಲ್ಲ ಕೆಂಪಾಗಿ ಮೃತ್ಯುಶಯ್ಯೆಯ ಮೇಲಿರುವ ದುರ್ಯೋಧನನು ಪಡುವಣ ಪರ್ವತವನ್ನೇರಿ ಅಸ್ತಂಗತನಾಗುವ ಸಂಧ್ಯಾವಗಢ ಸೂರ್ಯನಂತಿರುವನು ಎಂದು ದುರ್ಯೋಧನನ ಬಳಿ ಸಾರುವ ಮೊದಲು ಅಶ್ವತ್ಥಾಮನು ಹೇಳಿದನು.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. " ನನ್ನ ಹಲಾಯುಧದಿಂದ ಭೀಮನೆದೆಯನ್ನು ಉತ್ತು ಬರುತ್ತೇನೆ. "

ಉ: ಈ ಮೇಲಿನ ವಾಕ್ಯವನ್ನು ಭಾಸನು ಸಂಸ್ಕೃತದಲ್ಲಿ ರಚಿಸಿದ ಡಾ. ಎಲ್ ಬಸವರಾಜು ಅವರು ಕನ್ನಡಕ್ಕೆ ಭಾಷಾಂತರಿಸಿರುವ ನಾಟಕ ಸಂಪುಟ ಕೃತಿಯಿಂದ ಆರಿಸಲಾದ ಊರುಭಂಗ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಗದಾಯುದ್ಧದಲ್ಲಿ ತೊಡೆಯ ಭಾಗಕ್ಕೆ ಹೊಡೆಯಲು ಅವಕಾಶವಿಲ್ಲದಿದ್ದರೂ ಮಹಾಭಾರತ ಯುದ್ಧದ ಕಡೆಯ ದಿನ ಭೀಮ ದುರ್ಯೋಧನರ ನಡುವಿನ ಗದಾಯುದ್ಧದಲ್ಲಿ ಕೃಷ್ಣನ ರಹಸ್ಯ ಸನ್ನೆಯರಿತ ಭೀಮನು ದುರ್ಯೋಧನನ ತೊಡೆಗೆ

ಹೊಡೆದನು. ದುರ್ಯೋಧನನು ಊರುಭಂಗವಾಗಿ ನೆಲಕ್ಕೊರಗಿ ಏಕಾಂಗಿಯಾಗಿ ಯುದ್ಧರಂಗದಲ್ಲಿ ನರಳುತ್ತಿದ್ದಾಗ ಅಲ್ಲಿಗೆ ಬಂದ ಬಲರಾಮನು ಶತ್ರುಬಲಕ್ಕೆ ಮೃತ್ಯುಸ್ವರೂಪವಾದ ನನ್ನ ಹಲಾಯುಧವನ್ನೂ ಗಮನಿಸದೇ ,ಯುದ್ಧ ನಿಯಮವನ್ನೂ ನನ್ನನ್ನೂ ನಿರ್ಲಕ್ಷಿಸಿ ತೊಡೆಗಳಿಗೆ ಹೊಡೆದು ದುರ್ಯೋಧನನನ್ನು ಭೀಮನು ನೆಲಕ್ಕುರುಳಿಸಿದ .ದುರ್ಯೋಧನ ಒಂದು ನಿಮಿಷ ಪ್ರಾಣ ಬಿಗಿಹಿಡಿದುಕೋ ,ನನ್ನ ಹಲಾಯುಧದಿಂದ ಭೀಮನೆದೆಯನ್ನು ಉತ್ತು ಬರುತ್ತೇನೆ ಎಂದನು.

ಸ್ವಾರಸ್ಯ : ಭೀಮನು ಯುದ್ಧ ನಿಯಮವನ್ನು ಮೀರಿದ ಕುರಿತು ಕೋಪ ಮತ್ತು ದುರ್ಯೋಧನನ ದುರವಸ್ಥೆಯ ಬಗ್ಗೆ ಆಕ್ರೋಶ ಬಲರಾಮನ ಮಾತುಗಳಲ್ಲಿ ವ್ಯಕ್ತವಾಗಿದೆ .

೨. “ ಅಂತಹವನೂ ಇಂದು ನನ್ನನ್ನು ಮೋಸದಿಂದ ಗೆದ್ದನೆಂದರೆ ನಾನು ಸೋತಂತಾಗಲಿಲ್ಲ .”

ಉ: ಈ ಮೇಲಿನ ವಾಕ್ಯವನ್ನು ಭಾಸನು ಸಂಸ್ಕೃತದಲ್ಲಿ ರಚಿಸಿದ ಡಾ. ಎಲ್ ಬಸವರಾಜು ಅವರು ಕನ್ನಡಕ್ಕೆ ಭಾಷಾಂತರಿಸಿರುವ ನಾಟಕ ಸಂಪುಟ ಕೃತಿಯಿಂದ ಆರಿಸಲಾದ ಊರುಭಂಗ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಯುದ್ಧ ನಿಯಮವನ್ನು ಮೀರಿದ ಭೀಮನನ್ನು ,ಪಾಂಡವರನ್ನು ಹಲಾಯುಧದಿಂದ ಮುಗಿಸುತ್ತೇನೆ ಎಂದು ಬಲರಾಮನು ರೋಷದಿಂದ ಹೇಳಿದಾಗ ನಾನಿಂದು ನನ್ನ ಪ್ರಾಣಕ್ಕೆ ಮೌಲ್ಯವನ್ನು ಪಡೆದಂತಾಯಿತು. ಅರಗಿನ ಮನೆಯಿಂದ ಚತುರತೆಯಿಂದ ಪಾರಾದವನು , ಕುಬೇರನ ಮನೆಯಲ್ಲಾದ ಯುದ್ಧದಲ್ಲಿ ತನ್ನೆಡೆಗೆ ಬೀಸಿದ ದೊಡ್ಡದೊಡ್ಡ ಬಂಡೆಗಳನ್ನು ಸ್ವಶಕ್ತಿಯಿಂದ ಹಿಮ್ಮೆಟ್ಟಿಸಿದವನು ,ಹಿಡಿಂಬನೆಂಬ ರಾಕ್ಷಸನನ್ನು ಕೊಂದವನು ಇಂದು ನನ್ನನ್ನು ಮೋಸದಿಂದ ಗೆದ್ದನೆಂದರೆ ನಾನು ಸೋತಂತಾಗಲಿಲ್ಲ ಎಂದು ಹೇಳುವನು .

ಸ್ವಾರಸ್ಯ: ಭೀಮನು ಯುದ್ಧ ನಿಯಮ ಮೀರಿ ತೊಡೆಗೆ ಹೊಡೆದುದರಿಂದ ಈ ಅವಸ್ಥೆ ಒದಗಿತು. ಯುದ್ಧ ನಿಯಮದಂತೆ ನಡೆದಿದ್ದರೆ  ತನ್ನನ್ನು ಸೋಲಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ತನ್ನ ಪರಾಕ್ರಮದ ಬಗೆಗಿನ ದುರ್ಯೋಧನನ ಅಭಿಮಾನ ವ್ಯಕ್ತವಾಗಿದೆ.

೩. “ ನಿನಗೆ ಚಿರಪರಿಚಿತವಾಗಿದ್ದ ಈ ತೊಡೆಯಿನ್ನು ನಿನ್ನ ಭಾಗಕ್ಕಿಲ್ಲವಪ್ಪ !”

ಉ:ಈ ಮೇಲಿನ ವಾಕ್ಯವನ್ನು ಭಾಸನು ಸಂಸ್ಕೃತದಲ್ಲಿ ರಚಿಸಿದ ಡಾ. ಎಲ್ ಬಸವರಾಜು ಅವರು ಕನ್ನಡಕ್ಕೆ ಭಾಷಾಂತರಿಸಿರುವ ನಾಟಕ ಸಂಪುಟ ಕೃತಿಯಿಂದ ಆರಿಸಲಾದ ಊರುಭಂಗ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಗದಾಯುದ್ಧದಲ್ಲಿ ಊರುಭಂಗವಾಗಿ ನೆಲಕ್ಕುರುಳಿದ ದುರ್ಯೋಧನನನ್ನು ನೋಡಲು ಧೃತರಾಷ್ಟ್ರ ಗಾಂಧಾರಿಯರು ಬರಲಾಗಿ ಅವರೊಂದಿಗೆ ದುರ್ಯೋಧನನ ಮಗ ದುರ್ಜಯನೂ ಬಂದನು. ತನ್ನ ತಂದೆಯ ನೆಲದಲ್ಲಿ ಮಲಗಿರುವುದನ್ನು ನೋಡಿದ ದುರ್ಜಯನು ತನ್ನ ತಂದೆಯ ತೊಡೆಯ ಮೇಲೆ ಕೂರಲು ಬಯಸಿದಾಗ ದುರ್ಯೋಧನನು ತಡೆಯುವನು. ಯಾಕೆ ತಡೆಯುತ್ತೀರೆಂದು ದುರ್ಜಯನು ಪ್ರಶ್ನಿಸಲು ದುರ್ಯೋಧನನು ಮೇಲಿನಂತೆ ಉತ್ತರಿಸುವನು.

ಸ್ವಾರಸ್ಯ : ತೊಡೆಮುರಿದು ಬಿದ್ದ ದುರ್ಯೋಧನನು ಮಗನನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಳ್ಳಲಾಗದ ಅಸಹಾಯಕತೆ ,ದುಃಖವನ್ನು ವ್ಯಕ್ತಪಡಿಸಿರುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. “ ಹೋಗು ಮಗನೇ ,ಹಾಗೆಂದು ವೃಕೋದರನನ್ನು ಕೇಳು ಹೋಗು .”

ಉ: ಈ ಮೇಲಿನ ವಾಕ್ಯವನ್ನು ಭಾಸನು ಸಂಸ್ಕೃತದಲ್ಲಿ ರಚಿಸಿದ ಡಾ. ಎಲ್ ಬಸವರಾಜು ಅವರು ಕನ್ನಡಕ್ಕೆ ಭಾಷಾಂತರಿಸಿರುವ ನಾಟಕ ಸಂಪುಟ ಕೃತಿಯಿಂದ ಆರಿಸಲಾದ ಊರುಭಂಗ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಭೀಮನ ಗದೆಯ ಹೊಡೆತದಿಂದ ನೆಲಕ್ಕುರುಳಿದ ದುರ್ಯೋಧನನ ಬಳಿ ಬಂದ ಅವನ ಮಗ ದುರ್ಜಯನು ತನ್ನ ತಂದೆಯ ತೊಡೆಯ ಮೇಲೆ ಕೂರಲು ಬಯಸಿದಾಗ ನೀನು ಕುಳಿತು ,ಆಡಿ ,ಮಲಗಿ ,ನಿನಗೆ ಚಿರಪರಿಚಿತವಾಗಿದ್ದ ಈ ತೊಡೆ ನಿನ್ನ ಭಾಗಕ್ಕಿಲ್ಲವಪ್ಪ ಎಂದು ಹೇಳುವನು. ಆಗ ದುರ್ಜಯನು ಯಾಕೆ ? ನೀವಿಲ್ಲಿಗೆ ಹೋಗುತ್ತಿದ್ದೀರಿ ಎಂದು ಕೇಳುವನು. ತನ್ನ ತಮ್ಮಂದಿರು ಇರುವಲ್ಲಿಗೆ ಎಂದು ದುರ್ಯೋಧನನು ಉತ್ತರಿಸಿದಾಗ ನನ್ನನ್ನೂ ಕರೆದುಕೊಂಡು ಹೋಗಿ ಎಂದು ದುರ್ಜಯನು ಹೇಳುವನು. ಆಗ ದುರ್ಯೋಧನನು ಮೇಲಿನಮತೆ ಹೇಳುವನು.

ಸ್ವಾರಸ್ಯ : ತನ್ನ ಅವಸ್ಥೆಗೆ ಕಾರಣ ಭೀಮನೇ ಆಗಿದ್ದರಿಂದ ಅವನನ್ನೇ ಪ್ರಶ್ನಿಸಬೇಕೆಂಬ ದುರ್ಯೋಧನನ ಭಾವನೆ ಇಲ್ಲಿ ವ್ಯಕ್ತವಾಗಿದೆ.

ಬಿಟ್ಟ ಸ್ಥಳದಲ್ಲಿ ಸೂಕ್ತ ಪದವನ್ನು ತುಂಬಿರಿ.

೧. ಕುರುಕುಲದ ಪಿತೃಗಳಿಗೆ ----- ಕೊಡಲು ಪಾಂಡವ ಮೇಘಗಳು ಜೀವಿಸಿರಲಿ. (ಜಲಾಂಜಲಿ)

೨. ಎರಡು ತೊಡೆಗಳನ್ನಷ್ಟೇ ಅಲ್ಲ ,ತಂದೆ ತಾಯಿಗಳಿಗೆ ----- ನನ್ನ ಭಾಗ್ಯವನ್ನೂ ಅಪಹರಿಸಿಬಿಟ್ಟ .(ಅಭಿವಂದಿಸುವ )

೩. ಹೃದಯದಲ್ಲಿ ಸದಾ ಸನ್ನಿಹಿತವಾಗಿರುವ ---- ನನ್ನನ್ನೀಗ ದಹಿಸುತ್ತಿದೆ. (ಪುತ್ರಸ್ನೇಹವು )

೪. ಅಪ್ಪಾಜಿ ,ನಾನು ನಿಮ್ಮ --- ಮೇಲೆ ಕುಳಿತುಕೊಳ್ಳುತ್ತೇನೆ. (ತೊಡೆಯ )

೫. ಮೃತ್ಯುಶಯ್ಯೆಯ ಮೇಲಿರುವ ---- ಪಡುವಣ ಪರ್ವತವನ್ನೇರಿ ಅಸ್ತಂಗತನಾಗುವ ಸಂಧ್ಯಾವಗಡ ಸೂರ್ಯನಂತಿರುವನು. (ದುರ್ಯೋಧನನು )

ಭಾಷಾ ಚಟುವಟಿಕೆ .

೧. ಕ್ರಿಯಾಪದ ಎಂದರೇನು ?

ಉ : ವಾಕ್ಯದಲ್ಲಿ ಕ್ರಿಯೆಯು ಪೂರ್ಣಗೊಂಡಿದೆ ಎಂಬುದನ್ನು ಸೂಚಿಸುವ ಪದವು ಕ್ರಿಯಾಪದ .

೨. ಕ್ರಿಯಾಪ್ರಕೃತಿ ಎಂದರೇನು ? ಉದಾಹರಣೆ ಕೊಡಿ .

ಉ: ಕ್ರಿಯೆಯ ಮೂಲರೂಪ ಪದಗಳೇ ಧಾತು ಅಥವಾ ಕ್ರಿಯಾ ಪ್ರಕೃತಿ

೩. ಸಕರ್ಮಕ ಧಾತುಗಳನ್ನು ಉದಾಹರಣೆ ಸಹಿತ ವಿವರಿಸಿ.

ಉ : ಕರ್ಮಪದವನ್ನು ಬಯಸುವ ಧಾತುಗಳು ಸಕರ್ಮಕ ಧಾತುಗಳು. ಉದಾ : ರಾಮನು ಗಿಡವನ್ನು ನೆಟ್ಟನು.ಕ್ರಿಯಾಪದದ ಮೂಲ ರೂಪ ನೆಡು .ನೆಟ್ಟನು ಎಂಬ ಕ್ರಿಯಾಪದಕ್ಕೆ ಏನನ್ನು ನೆಟ್ಟನು ಎಂಬ ಪ್ರಶ್ನೆಯು ಉದ್ಭವವಾಗಿ ಗಿಡವನ್ನು ಎಂಬ ಉತ್ತರ ಬರುತ್ತದೆ. ಗಿಡವನ್ನು ಎನ್ನುವುದು ಇಲ್ಲಿ ಕರ್ಮಪದವಾಗಿದೆ. ಅಂದರೆ ಕ್ರಿಯಾಪದವು ಕರ್ಮಪದವನ್ನು ಅಪೇಕ್ಷಿಸುತ್ತದೆ

೪. ಅಕರ್ಮಕ ಧಾತುಗಳಿಗೆ ಐದು ನಿದರ್ಶನ ಕೊಡಿ .

ಉ: ಕರ್ಮಪದವನ್ನು ಅಪೇಕ್ಷಿಸದ ಧಾತುಗಳು ಅಕರ್ಮಕ ಧಾತುಗಳು. ಉದಾ : ಕೂಸು ಮಲಗಿತು ಎನ್ನುವಲ್ಲಿ ಮಲಗು ಎನ್ನುವುದು ಧಾತು .ಆದರೆ ಮಲಗಿತು ಎನ್ನುವ ಕ್ರಿಯಾಪದವು ಏನನ್ನು ಎಂಬ ಕರ್ಮಪದವನ್ನು ಅಪೇಕ್ಷಿಸುವುದಿಲ್ಲ .ಹಾಗಾಗಿ ಮಲಗು ಎನ್ನವುದು ಅಕರ್ಮಕ ಧಾತು. ಅದರಂತೆಯೇ ಬದುಕು ,ಹೊಳೆ ,ಬೀಸು ,ಓಡು ,ಬೀಳು ಇತ್ಯಾದಿ .

೫. ಕಾಲಪಲ್ಲಟ ಎಂದರೇನು ?

ಉ : ಒಂದು ಕಾಲದ ಕ್ರಿಯೆಯನ್ನು ಇನ್ನೊಂದು ಕಾಲದ ಕ್ರಿಯಾರೂಪದಿಂದ ಹೇಳುವುದೇ ಕಾಲಪಲ್ಲಟ ಹೀಗೆ ಕಾಲಪಲ್ಲಟವಾಗುವಾಗ ಭವಿಷ್ಯತ್ ಕಾಲದ ಕ್ರಿಯಾಪದಗಳು ವರ್ತಮಾನದಲ್ಲೂ ,ವರ್ತಮಾನಕಾಲದ ಕ್ರಿಯಾಪದಗಳು ಭವಿಷ್ಯತ್ ಕಾಲದಲ್ಲೂ ಪ್ರಯೋಗವಾಗುವುವು.

ಉದಾ : ವರ್ತಮಾನಕಾಲವು ಭವಿಷ್ಯತ್ ಕಾಲದಲ್ಲಿ -ಅವನು ಒಳಗೆ ಊಟ ಮಾಡುವನು. (ಮಾಡುತ್ತೇನೆ ಎಂದಾಗಬೇಕು )

ಭವಿಷ್ಯತ್ ಕಾಲವು ವರ್ತಮಾನಕಾಲದಲ್ಲಿ -ಅವನು ನಾಳೆ ಹೋಗುತ್ತಾನೆ . (ಹೋಗುವನು ಎಂದಾಗಬೇಕು )

ಕೊಟ್ಟಿರುವ ಧಾತುಗಳಲ್ಲಿ ಸಕರ್ಮಕ ಮತ್ತು ಅಕರ್ಮಕ ಧಾತುಗಳನ್ನು ಗುರುತಿಸಿ ಬರೆಯಿರಿ.

೧. ವಿದ್ಯಾರ್ಥಿನಿಯರು ಆಟವನ್ನು ಆಡಿದರು - ಆಡು -ಸಕರ್ಮಕ ದಾತು ೨. ಗಾಳಿಯು ಬೀಸುತ್ತಿದೆ. ಬೀಸು -ಅಕರ್ಮದಾತು ೩. ಹಕ್ಕಿಗಳು ಚಿಲಿಪಿಲಿಗುಟ್ಟಿದವು. ಚಿಲಿಪಿಲಿಗುಡು -ಅಕರ್ಮಕ ಧಾತು ೪. ರೈತನು ಹೊಲವನ್ನು ಉಳುತ್ತಾನೆ . ಉಳು -ಸಕರ್ಮಕ ಧಾತು

## ಗದ್ಯಪಾಠ -೮ ಹರಲೀಲೆ -ಹರಿಹರ

### ಕೃತಿಕಾರರ ಪರಿಚಯ




ಹರಿಹರನ ಕಾಲ ಸುಮಾರು ಕ್ರಿ.ಶ. ೧೨೦೦ . ಇವನು ಬಳ್ಳಾರಿ ಜಿಲ್ಲೆಯ ಹಂಪಿಯವನು. ಇವನ ಆರಾಧ್ಯ ದೈವ ಹಂಪೆಯ ವಿರೂಪಾಕ್ಷ .ಇವನು ದೇವರ ದಾಸಿಮಯ್ಯ ,ಬಸವಣ್ಣ ,ಅಕ್ಕಮಹಾದೇವಿ, ಗುಂಡಯ್ಯ , ಮಾದಾರ ಚೆನ್ನಯ್ಯ ಕುರಿತಾದ ಕೃತಿಗಳನ್ನು ,ನಂಬಿಯಣ್ಣನ ರಗಳೆ , ಬಸವರಾಜ ದೇವರ ರಗಳೆ ಮೊದಲಾದ ಕೃತಿಗಳನ್ನು ಬರೆದಿದ್ದಾನೆ.

ಪ್ರಸ್ತುತ ಗದ್ಯಭಾಗವನ್ನು ಹರಿಹರ ಕವಿ ರಚಿಸಿದ ನಂಬಿಯಣ್ಣನ ರಗಳೆಯಿಂದ ಆರಿಸಿಕೊಳ್ಳಲಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ನಂಬಿಯಣ್ಣನ ಪೂರ್ವ ಜನ್ಮದ ಹೆಸರೇನು ?

ಉ: ನಂಬಿಯಣ್ಣನ ಪೂರ್ವಜನ್ಮದ ಹೆಸರು ಪುಷ್ಪದತ್ತ.

೨. ಹರಲೀಲೆ ಕಾವ್ಯ ಭಾಗದ ಮೂಲ ಕೃತಿ ಯಾವುದು?

ಉ: ಹರಲೀಲೆ ಕಾವ್ಯ ಭಾಗದ ಮೂಲ ಕೃತಿ ನಂಬಿಯಣ್ಣನ ರಗಳೆ .

೩. ಹರಲೀಲೆ ಕಾವ್ಯಭಾಗದ ಕವಿಯ ಹೆಸರೇನು ?

ಉ: ಹರಲೀಲೆ ಕಾವ್ಯಭಾಗದ ಕವಿ ಹರಿಹರ .

೪. ಗಿರಿಜೆ ಎಲ್ಲಿ ಇರಬೇಕೆಂದು ಶಿವನು ತಿಳಿಸಿದನು ?

ಉ: ಮಣಮಂದಪುತ್ತೂರಿನ ದೇವಸ್ಥಾನದಲ್ಲಿರು ಎಂದು ಶಿವನು ಗಿರಿಜೆಗೆ ತಿಳಿಸಿದನು.

೫. ಹರಿಹರನು ಬರೆದಿರುವ ಎರಡು ಕೃತಿಗಳನ್ನು ಹೆಸರಿಸಿ.

ಹರಿಹರನು ಬರೆದಿರುವ ಎರಡು ಕೃತಿಗಳು ನಂಬಿಯಣ್ಣನ ರಗಳೆ, ಬಸವರಾಜ ದೇವರ ರಗಳೆ.

**ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ವಿರೂಪಾಕ್ಷನು ಗಿರಿಜೆಗೆ ಏನೆಂದು ಹೇಳಿದನು ?

ಉ: ವಿವಾಹಕ್ಕೆ ಸಿದ್ಧನಾದ ನಂಬಿಯಣ್ಣನು ಉದ್ಯಾನವನದಲ್ಲಿ ಸಂತಸದಲ್ಲಿದ್ದಾಗ ಶಿವನು ಕೈಲಾಸದಲ್ಲಿ ಗಿರಿಜೆಗೆ ಹೀಗೆ ಹೇಳಿದನು. ನಮ್ಮ ಮಗನಾದ ಪುಷ್ಪದತ್ತನು ನಂಬಿಯೆನ್ನುವ ನಾಮಾಂಕಿತನಾಗಿ ಮನುಷ್ಯ ಲೋಕದಲ್ಲಿ ಜನಿಸಿದ್ದಾನೆ . ಅವನು ಸಂಸಾರಿಗನಾಗಲು ಸಿದ್ಧನಾಗಿದ್ದಾನೆ. ಅವನ ಹಾಗೆಯೇ ನಮ್ಮ ಶಾಪವನ್ನು ಪಡೆದ ರುದ್ರಕನ್ನಿಕೆಯರು ಪರವೆ ಸಂಕಿಲೆಯರಾಗಿ ಜನಿಸಿದ್ದಾರೆ. ಅವರನ್ನು ನಂಬಿಯಣ್ಣನ ಜೊತೆ ಸೇರಿಸಿ ಅವರಿಂದ ಪೂಜೆಯನ್ನು ಪಡೆದು ಬರುತ್ತೇನೆ ಎಂದು ಹೇಳಿದನು.

೨. ಚೋಳದೇಶದಲ್ಲಿದ್ದ ಮೂರು ಗ್ರಾಮಗಳನ್ನು ಹೆಸರಿಸಿ.

ಉ: ಚೋಳ ದೇಶದಲ್ಲಿದ್ದ ಮೂರು ಗ್ರಾಮಗಳು ಮಣಮಂದಪುತ್ತೂರು, ತಿರುವಾರೂರು ,ತಿರುವತ್ತಿಯೂರು

೩. ವೃದ್ಧ ಮಾಹೇಶ್ವರನು ಶಿವಮಂತ್ರವನ್ನು ಹೇಳುತ್ತಿದ್ದ ರೀತಿಯನ್ನು ತಿಳಿಸಿ

ಉ: ಕೈಯಲ್ಲಿ ಕೊಡೆ ಹಿಡಿದು ಮೈ ಮುಪ್ಪಿನಿಂದ ಕೂಡಿ , ಜೋತಾಡುವ ಹುಬ್ಬಿನಿಂದ , ನೇತಾಡುವ ತೋಳುಗಳಿಂದ , ಮೈಗೆಲ್ಲ ವಿಭೂತಿಯನ್ನು ಲೇಪಿಸಿ , ಕೈಯಲ್ಲಿ ಊರುಗೋಲನ್ನು ಹಿಡಿದು , ನರೆತ ತಲೆ , ಸರ್ವಾಂಗವೂ ಸಡಿಲವಾಗಿ , ಪುಣ್ಯವೇ ಹಣ್ಣಾದ ಹಾಗೆ ಒಮ್ಮೊಮ್ಮೆ ಕೆಮ್ಮುತ್ತ , ಒಮ್ಮೊಮ್ಮೆ ಗೊಹೆಗೊಹೆ ಎನ್ನುತ್ತ ಶಿಥಿಲವಾದ ನಡುಗುವ ಧ್ವನಿಯಿಂದ ನಮಃಶಿವಾಯ ,ನಮಃಶಿವಾಯ ಎನ್ನುತ್ತ ವೃದ್ಧಮಾಹೇಶ್ವರನು ಶಿವಮಂತ್ರವನ್ನು ಜಪಿಸುತ್ತಿದ್ದನು.

೪. ಕೆಳಗೆ ಬಿದ್ದ ವೃದ್ಧನನ್ನು ನೋಡಿ ನೆರೆದಿದ್ದ ಜನ ಏನೆಂದು ಮಾತನಾಡಿಕೊಂಡರು ?

ಉ: ಈ ವೃದ್ಧ ಬ್ರಾಹ್ಮಣನನ್ನು ,ಮುಪ್ಪಿನ ಮರುಳನನ್ನು ,ಬಡಕಲಾದ ಹಸುವಿನಂತಿರುವ ,ಬ್ರಹ್ಮರಾಕ್ಷಸನ ಹಾಗಿರುವ ಈ ವೃದ್ಧನನ್ನು ಮದುವೆಯ ಚಪ್ಪರದ ಒಳಗೆ ಸೇರಿಸಿದವರು ಯಾರು ? ಯಾರು ಕರೆತಂದರು ?ಎಂದು ಬಿದ್ದ ವೃದ್ಧನನ್ನು ನೋಡಿ ನಂಬಿಯಣ್ಣನ ಮದುವೆಗೆ ನೆರೆದಿದ್ದ ಜನ ಮಾತನಾಡಿಕೊಂಡರು.

## ನಾಲ್ಕು / ಐದು ವಾಕ್ಯಗಳಲ್ಲಿ ಉತ್ತರಿಸಿ.

೧. ಶಿವನು ವೃದ್ಧ ಮಾಹೇಶ್ವರನಾಗಿ ವೇಷಧರಿಸಲು ಕಾರಣವೇನು ?

ಉ: ಶಿವನ ಗಣಗಳಲ್ಲಿ ಒಬ್ಬನಾದ ಪುಷ್ಪದತ್ತ ಮತ್ತು ರುದ್ರ ಕನ್ನಿಕೆಯರು ಪರಸ್ಪರ ಅನುರಾಗಕ್ಕೆ ಒಳಗಾಗಲು ಶಿವನು ಭೂಲೋಕದಲ್ಲಿ ಜನಿಸುವಂತೆ ಅವರಿಗೆ ಶಾಪವನ್ನು ನೀಡಿದನು. ಅವರು ಚೋಳ ದೇಶದ ಬೇರೆ ಬೇರೆ ಊರುಗಳಲ್ಲಿ ನಂಬಿಯಣ್ಣ ಮತ್ತು ಪರವೆ ಸಂಕಿಲೆಯರಾಗಿ ಜನಿಸಿದರು.ಹೀಗಿರಲು ನಂಬಿಯಣ್ಣನ ವಿವಾಹವು ಬೇರೊಬ್ಬ ಕನ್ಯೆಯೊಂದಿಗೆ ನಿಶ್ಚಯವಾಗಲು ಅದನ್ನು ನಿಲ್ಲಿಸಿ ನಂಬಿಯಣ್ಣ ಮತ್ತು ಪರವೆ ಸಂಕಿಲೆಯರನ್ನು ಒಂದು ಮಾಡಿ ಅವರಿಂದ ಪೂಜೆ ಕೈಗೊಳ್ಳಬೇಕೆಂದು ಶಿವನು ವೃದ್ಧ ಮಾಹೇಶ್ವರನಾಗಿ ಬಂದನು.

೨. ವೃದ್ಧ ಮಾಹೇಶ್ವರನನ್ನು ಕವಿ ಹೇಗೆ ವರ್ಣಿಸಿದ್ದಾನೆ ?

ಉ: ವೃದ್ಧ ಮಾಹೇಶ್ವರನು ತಲೆಯಿಂದ ಕಾಲಿನವರೆಗೆ ವಿಭೂತಿ ಲೇಪಿಸಿಕೊಂಡಿದ್ದನು. ತಲೆ ,ಮೈ ನರೆತು ಮುಪ್ಪು ಆವರಿಸಿತ್ತು.ಜಟೆಯ ಮೇಲಿನ ಚಂದ್ರ ಕಳೆ ಕೊಡೆಯಾಗಿಸಿಕೊಂಡಿದ್ದನು.ಕೈಯಲ್ಲಿನ ತ್ರಿಶೂಲವನ್ನು ಕೊಡೆಯ ಹಿಡಿಕೆಯಾಗಿ ಮಾಡಿಕೊಂಡಿದ್ದನು. ತನ್ನ ಗದೆಯನ್ನು ಊರುಗೋಲಾಗಿಸಿ ,ಸರ್ಪವನ್ನು ಆಭರಣವಾಗಿಸಿ ,ಬ್ರಹ್ಮನ ಶಿರವನ್ನು ಕಮಂಡಲುವಾಗಿಸಿ ,ಹುಲಿಯ ಚರ್ಮ ಮತ್ತು ಗಜಚರ್ಮವನ್ನು ಹೊದೆದ ಪಂಚೆಯಾಗಿ ಮಾಡಿಕೊಂಡಿದ್ದನು. ನಾಗಾಸುರನನ್ನು ಪಾದರಕ್ಷೆಯಾಗಿ ಮಾಡಿಕೊಂಡು ಶಿರಗಳ ಮಾಲೆಯನ್ನು ಜಪಮಾಲೆಯಾಗಿ ಮಾಡಿಕೊಂಡ ಶಿವನು ಮಹಾವೃದ್ಧನಾಗಿ ಕಾಣಿಸುತ್ತಿದ್ದನು .

೩. ಮದುವೆ ಮಂಟಪದಲ್ಲಿ ವೃದ್ಧನು ಮಾಡಿದ ಅವಾಂತರಗಳಾವುವು ?

ಉ: ವಿವಾಹ ಮಂಟಪದೊಳಗೆ ಹೋಗುತ್ತಿರುವ ತನ್ನನ್ನು ಯಾರೂ ಅರಿಯದೆ, ನೋಡದೆ, ಲೆಕ್ಕಿಸದೆ(ಗಣನೆಗೆ ತೆಗೆದುಕೊಳ್ಳದೆ) ಇರುವುದನ್ನು ಕಂಡು ವೃದ್ಧನು (ಶಿವನು ) ಮೆಲ್ಲಮೆಲ್ಲನೆ ನೋಡುತ್ತಾ, ಮನದೊಳಗೆ ನಗುತ್ತಾ, ಕೋಲನೂರಿಕೊಂಡು ಕೆಮ್ಮುತ್ತಾ ವಿವಾಹ ಮಂಟಪದ ಬಳಿ ಸಾಲಾಗಿ ಜೋಡಿಸಲಾಗಿದ್ದ ತುಪ್ಪದ ಕೊಡಗಳ ಮೇಲೆ ನಾಲ್ಕೆರಡನ್ನು ಎಡವಿ 'ನಮಃಶಿವಾಯ' ಎಂಬ ವೃದ್ಧಧ್ವನಿ ಅವನ ಬಾಯಿಂದ ಬರುತ್ತಿದ್ದಂತೆ ಕೊಡಗಳಮೇಲೆ ಬಿದ್ದು ಅಲ್ಲಿ ಕುಳಿತಿದ್ದವರ ಮುಖಕ್ಕೆ, ಕಣ್ಣುಗಳಿಗೆ, ಮೈಯ ಮೇಲೆ ತುಪ್ಪ ಚೆಲ್ಲಿದಾಗ ಎಲ್ಲರೂ ಗಾಬರಿಯಿಂದ ಎದ್ದು ಗುಂಪುಗೂಡಿ ದಢ್ಢನೆ ಬಿದ್ದ ವೃದ್ಧಮಾಹೇಶ್ವರನ ಸುತ್ತ ಸೇರಿಕೊಂಡು ಅವನನ್ನು ಮೆಲ್ಲಮೆಲ್ಲನೆ ಎತ್ತಿ ನಿಲ್ಲಿಸಿದಾಗ ಅವನು ಒಂದಡಿಯಿಟ್ಟು ತಡವರಿಸಿ ಅಲ್ಲಿ ನೆರೆದಿದ್ದ ಜನರೆಲ್ಲರೂ "ಅಯ್ಯೋ ವೃದ್ಧಬಿದ್ದನು ಎಂದು ಕೂಗಿಕೊಳ್ಳುವಷ್ಟರಲ್ಲಿ ಆತನು ನಿಲ್ಲಲಾರದೆ ತಟ್ಟನೆ ಘಳಿಗೆಬಟ್ಟಲಿನ ಮೇಲೆ ಬಿದ್ದನು. ಆಗ

ಅಲ್ಲಿದ್ದ ಕಳಶ ಒಡೆದು, ಘಳಿಗೆಬಟ್ಟಲು ಮುರಿದು ಹೋಗಿ, ಅಕ್ಕಿಯೆಲ್ಲಾ ಚೆಲ್ಲಿಹೋಗಿ, ಅಲ್ಲಿದ್ದ ಜೋಯಿಸರು ಚದುರಿ ಅತ್ತಿತ್ತ ಓಡಿಹೋದರು.

ಸಂದರ್ಭ ಸಹಿತ ವಿವರಿಸಿ.

೧. ಸಕಲ ಸುಖಮಂ ಪೂಜೆಯಾಗಿ ಕೈಗೊಂಡು ಬರ್ಪೆನ್

ಉ: ಈ ಮೇಲಿನ ವಾಕ್ಯವನ್ನು ಹರಿಹರನು ಬರೆದ 'ಹರಲೀಲೆ ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಶಿವನು ಹೇಳಿದ್ದಾನೆ.

ಸಂದರ್ಭ : ಕೈಲಾಸದ ಶಿವಗಣದಲ್ಲಿ ಒಬ್ಬನಾದ ಪುಷ್ಪದತ್ತನು ರುದ್ರಕನ್ನಿಕೆಯರಲ್ಲಿ ಅನುರಕ್ತನಾಗಿ ,ಶಿವನಿಂದ ಶಾಪ ಪಡೆದು ಭೂಲೋಕದಲ್ಲಿ ನಂಬಿಯಣ್ಣನಾಗಿ ಜನಿಸಿದನು ಮತ್ತು ರುದ್ರಕನ್ನಿಕೆಯರು ಪರವೆ ಸಂಕಿಲೆಯರಾಗಿ ಜನಿಸಿದರು. ಅವರನ್ನು ಒಂದು ಮಾಡಿ ಅವರಿಂದ ಪೂಜೆಯನ್ನು ಕೈಗೊಂಡು ಬರುವೆನು ಎಂದು ಶಿವನು ಈ ಮೇಲಿನ ಮಾತನ್ನು ಪಾರ್ವತಿಗೆ ಹೇಳಿದನು.

ಸ್ವಾರಸ್ಯ : ನಂಬಿಯಣ್ಣನ ಮೇಲಿನ ಶಿವನ ಪ್ರೀತಿ ಇಲ್ಲಿ ವ್ಯಕ್ತವಾಗಿದೆ.

೨. ನೀನತ್ಯಂತ ಕರುಣಿ .

ಉ: ಈ ಮೇಲಿನ ವಾಕ್ಯವನ್ನು ಹರಿಹರನು ಬರೆದ 'ಹರಲೀಲೆ ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಶಿವನು ಹೇಳಿದ್ದಾನೆ.

ಸಂದರ್ಭ : ಶಿವನಿಂದ ಶಾಪಗ್ರಸ್ಥನಾದ ಪುಷ್ಪದತ್ತ ಮತ್ತು ರುದ್ರಕನ್ನಿಕೆಯರು ನಂಬಿ ಮತ್ತು ಪರವೆ ಸಂಕಿಲೆಯರಾಗಿ ಚೋಳ ದೇಶದಲ್ಲಿ ಜನಿಸಿದರು. ನಂಬಿಗೆ ಬೇರೆ ಹುಡುಗಿಯ ಜೊತೆ ವಿವಾಹ ನಿಶ್ಚಯವಾಗಿತ್ತು. ಆ ವಿವಾಹವನ್ನು ನಿಲ್ಲಿಸಿ ನಂಬಿಯಣ್ಣ ಮತ್ತು ಪರವೆ ಸಂಕಿಲೆಯರನ್ನು ಒಂದು ಮಾಡಲು ಶಿವ ಭೂಲೋಕಕ್ಕೆ ಹೊರಡುವೆನೆಂದಾಗ ಪಾರ್ವತಿಯು ಅವನೊಡನೆ ತಾನೂ ಬರುವೆನೆಂದಳು. ಆಗ ಶಿವನು ಈ ಮೇಲಿನಂತೆ ಹೇಳಿದನು.

ಸ್ವಾರಸ್ಯ : ತಾನು ಭಕ್ತನಿಗೆ ಒಡ್ಡುವ ನಿಷ್ಠುರ ಪರೀಕ್ಷೆಯಲ್ಲಿ ಅತ್ಯಂತ ಕರುಣೆಯಾದ ಪಾರ್ವತಿಯಿಂದ ಅಡ್ಡಿ ಎದುರಾಗಬಾರದು ಎಂಬ ಶಿವನ ಭಾವನೆ ಇಲ್ಲಿ ವ್ಯಕ್ತವಾಗಿದೆ.

೩. ಪುಣ್ಯಂ ಪಣ್ಣಾದಂತೆ

ಉ: ಈ ಮೇಲಿನ ವಾಕ್ಯವನ್ನು ಹರಿಹರನು ಬರೆದ 'ಹರಲೀಲೆ ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಲೇಖಕರು (ಹರಿಹರ ) ಹೇಳಿದ್ದಾನೆ.

ನಂಬಿಯಣ್ಣ ಮತ್ತು ಪರವೆ ಸಂಕಿಲೆಯರನ್ನು ಒಂದು ಮಾಡಲು ಶಿವನು ವೃದ್ಧವೇಷಧಾರಿಯಾಗಿ ಭೂಲೋಕಕ್ಕೆ ಬಂದನು. ಅವನ ದೇಹ ಮತ್ತು ತಲೆಗಳೆರಡೂ ನರೆತಿತ್ತು. ಸರ್ವಾಂಗವೂ ಸಡಿಲವಾಗಿತ್ತು. ವಿಭೂತಿಯನ್ನು ಲೇಪಿಸಿ ,ಕೈಯಲ್ಲಿ ಕೊಡೆ ಹಿಡಿದಿದ್ದ ತನ್ನ ಆಯುಧವನ್ನು ಊರುಗೋಲಾಗಿಸಿದ ಶಿವನು ಪುಣ್ಯವೇ ಹಣ್ಣಾದ ಹಾಗೆ ಕಾಣುತ್ತಿದ್ದನು.

ಸ್ವಾರಸ್ಯ : ಶಿವನು ಭೂಮಿಗೆ ವೃದ್ಧನಾಗಿ ಅವತರಿಸಿದ ಸನ್ನಿವೇಶದ ವರ್ಣನೆ ಇದಾಗಿದೆ.

೪. ಈ ವೃದ್ಧಂ ಕಿರುಕುಳನಲ್ಲ.

ಈ ಮೇಲಿನ ವಾಕ್ಯವನ್ನು ಹರಿಹರನು ಬರೆದ 'ಹರಲೀಲೆ ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ನಂಬಿಯಣ್ಣನ ವಿವಾಹ ಸಂಭ್ರಮದಲ್ಲಿ ಸೇರಿದ್ದ ಜನರು ಹೇಳಿದ್ದಾರೆ.

ಸಂದರ್ಭ : ವೃದ್ಧ ವೇಷಧಾರಿಯಾಗಿ ಭೂಲೋಕಕ್ಕೆ ಬಂದ ಶಿವನು ನಿಶ್ಚಯವಾಗಿದ್ದ ನಂಬಿಯಣ್ಣನ ವಿವಾಹವನ್ನು ನಿಲ್ಲಿಸಲೆಂದು ವಿವಾಹ ಸ್ಥಳದಲ್ಲಿ ಸಾಕಷ್ಟು ವಿಘ್ನಗಳನ್ನು ತಂದೊಡ್ಡಿದನು. ಅದರಿಂದಾಗಿ ಅಲ್ಲಿ ಸೇರಿದ್ದ ಜನರು ಅವನು ಮತ್ತೆ ಪ್ರವೇಶಿಸಲಾಗದಂತೆ ಹೊರಗೆ ಹಾಕಿ ಕದವನ್ನು ಹಾಕಿದರು. ಆಗ ಅವರು ಪುನಃ ಒಳಗೆ ಬರುವುದಕ್ಕಿಂತ ಮುಂಚೆಯೇ ವೃದ್ಧ ಮಾಹೇಶ್ವರನು ಒಳಗಿದ್ದುದನ್ನು ನೋಡಿ ಆಶ್ಚರ್ಯ ಚಕಿತರಾದ ಜನರು ಈ ವೃದ್ಧನು ಕಿರುಕುಳನಲ್ಲ ಅಸಾಧಾರಣ ಪುರುಷನು ಎಂದು ಮಾತನಾಡಿಕೊಂಡರು .

ಸ್ವಾರಸ್ಯ : ಶಿವನ ಮಹಿಮೆ ಇಲ್ಲಿ ವ್ಯಕ್ತವಾಗಿದೆ.

**ಬಿಟ್ಟಸ್ಥಳ ತುಂಬಿರಿ.**

೧. ಹರಿಹರನ ಕಾಲ —-- (ಕ್ರಿ.ಶ. ೧೨೦೦ .)

೨. ವೃದ್ಧ ಮಾಹೇಶ್ವರ--- ಕೊಡದ ಮೇಲೆ ಬಿದ್ದನು. (ತುಪ್ಪದ)

೩. ಹರಲೀಲೆ ಕಾವ್ಯ ಭಾಗವನ್ನು ---ರಗಳೆಯಿಂದ ಆಯ್ದುಕೊಳ್ಳಲಾಗಿದೆ.(ನಂಬಿಯಣ್ಣನ ರಗಳೆ )

೪. ವೃದ್ಧ ಮಾಹೇಶ್ವರನು ಕೈಲಾಸದಿಂದ --- ಗೆ ಬಂದನು (ಮಣಮಂದಪುತ್ತೂರು )

**ಹೊಂದಿಸಿ ಬರೆಯಿರಿ.**

| | |
|---|---|
| ಪುಷ್ಪದತ್ತ | ನಂಬಿಯಣ್ಣ |
| ರುದ್ರಕನ್ನಿಕೆಯರು | ಪರವೆ ಸಂಕಿಲೆ |
| ಚೋಳ ದೇಶ | ಮಣಮಂದಪುತ್ತೂರು |
| ಕದ | ಬಾಗಿಲು |
| ಗಿರಿಜೆ | ಪಾರ್ವತಿ |

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಕರ್ತರಿ ಪ್ರಯೋಗವಾಕ್ಯದ ವಿಶೇಷತೆಯನ್ನು ತಿಳಿಸಿ.

ಉ: ಕ್ರಿಯಾಪದಕ್ಕೆ ಕರ್ತರಿ ಪ್ರಯೋಗದಲ್ಲಿ ಕರ್ತೃವಿನ ಲಿಂಗ ವಚನ ಬಂದರೆ ಕರ್ತರಿ ಪ್ರಯೋಗವಾಕ್ಯದ ವಿಶೇಷತೆ.

೨. ವಿಧ್ಯರ್ಥಕ ಕ್ರಿಯಾಪದ ಎಂದರೇನು ?ಎರಡು ಉದಾಹರಣೆ ಕೊಡಿ

ಉ: ಆಶೀರ್ವಾದ ,ಅಪ್ಪಣೆ , ಆಜ್ಞೆ ,ಹಾರೈಕೆ ,ಸಮ್ಮತಿ ಇತ್ಯಾದಿ ವಿಧಗಳನ್ನು ಹೊಂದಿರುವ ಕ್ರಿಯಾಪದಗಳೇ ವಿಧ್ಯರ್ಥಕ ಕ್ರಿಯಾಪದಗಳು. ಉದಾ : ದೇವರು ನಿಮಗೆ ಒಳ್ಳೆಯದನ್ನು ಮಾಡಲಿ.

ಅವರು ಪಾಠವನ್ನು ಓದಲಿ .

೩. ಸಂಭಾವನಾರ್ಥಕ ಕ್ರಿಯಾಪದವನ್ನು ಸೂತ್ರ ಸಹಿತ ವಿವರಿಸಿ

ಉ: ಕ್ರಿಯೆ ನಡೆಯುವ ಬಗ್ಗೆ ಸಂಶಯ ಅಥವಾ ಊಹೆಯನ್ನು ವ್ಯಕ್ತಪಡಿಸುವಂತಹ ಪದಗಳೇ ಸಂಭಾವನಾರ್ಥಕ ಕ್ರಿಯಾಪದಗಳು. ಉದಾ : ಅವರು ನಾಳೆ ಬಂದಾರು . ಚೆಂಡು ಮೇಲಕ್ಕೆ ಹೋದೀತು .

ಆ . ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧. ' ದೇವರು ಎಲ್ಲರಿಗೂ ಒಳ್ಳೆಯದನ್ನೇ ಉಂಟುಮಾಡಲಿ ' ಈ ವಾಕ್ಯದಲ್ಲಿರುವ ಕ್ರಿಯಾಪದ --- (ಉಂಟುಮಾಡಲಿ )

ಅ)ದೇವರು ಆ)ಎಲ್ಲರಿಗೂ ಇ) ಒಳ್ಳೆಯದನ್ನೇ ಈ)ಉಂಟುಮಾಡಲಿ

೨. ಈ ಪದವು ನಿಷೇಧಾರ್ಥಕ ಕ್ರಿಯಾಪದಕ್ಕೆ ಉದಾಹರಣೆ ---- (ತಿನ್ನನು )

ಅ) ತಿನ್ನನು ಆ)ತಿನ್ನಲಿ ಇ) ತಿಂದಾನು ಈ) ತಿನ್ನುತ್ತಾನೆ

೩. ಇದು ಈ ಗುಂಪಿಗೆ ಸೇರದ ಪದವಾಗಿದೆ. – (ಉಪಮಾ )

ಅ) ಉತ್ಸಾಹ ಆ )ಉಪಮಾ ಇ)ಮಂದಾನಿಲ ಈ)ಲಲಿತ

೪. 'ಎಳಸಿರ್ಪ' ಈ ಪದದ ಅರ್ಥ – (ಸುತ್ತುವರಿದಿರುವ )

ಅ) ಎಳೆಯದಾಗಿರುವ ಆ)ಮಿತಿಯಿಲ್ಲದ ಇ)ರುಚಿಯಾದ ಈ)ಸುತ್ತುವರಿದಿರುವ

ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣವಿಭಾಗಿಸಿ ಛಂದಸ್ಸಿನ ಹೆಸರು ಬರೆದು ಲಕ್ಷಣ ಬರೆಯಿರಿ.


UUU_| UUUUU| - U UU | UUU_
ರಸಫಳಂ| ಗಳನರಸು| ತಿರ್ಪ ಶುಕ| ನಿಕರಮಂ

U U _ U | UU_U |U U U_ | UUU_
ಪೊಸ ಪೂವ|ನೆಳಸಿರ್ಪ| ಮಧುಕರ| ಪ್ರಕರಮಂ

ಲಲಿತ ರಗಳೆ -ಲಕ್ಷಣ : ಪ್ರತಿ ಪಾದದಲ್ಲೂ ಐದೈದು ಮಾತ್ರೆಗಳ ನಾಲ್ಕು ಗಣಗಳಿದ್ದು ಎರಡೆರಡು ಸಾಲುಗಳಲ್ಲಿ ಪ್ರಾಸಗಳಿರುವಂತೆ ರಚಿಸಲ್ಪಟ್ಟ ರಗಳೆಯೇ ಲಲಿತ ರಗಳೆ .

# ಪದ್ಯ ಪಾಠ -೧ ಹೊಸಹಾಡು -ಕಯ್ಯಾರ ಕಿಞ್ಞಣ್ಣ ರೈ

## ಕೃತಿಕಾರರ ಪರಿಚಯ



ಕಯ್ಯಾರ ಕಿಞ್ಞಣ್ಣ ರೈಯವರ ಕಾಲ ೧೯೧೫ .ಇವರು ಕಾಸರಗೋಡಿನ ಕಯ್ಯಾರ ಗ್ರಾಮದವರು. ಇವರು ಶ್ರೀಮುಖ, ಐಕ್ಯಗಾನ,ಪುರ್ನವಚೇತನ ಮತ್ತು ಕೊರಗ ಹಾಗೂ ಗಂಧವತಿ ಮೊದಲಾದ ಕವನ ಸಂಕಲನಗಳನ್ನು ಬರೆದಿದ್ದಾರೆ.ವಿರಾಗಿಣಿ ಎನ್ನುವ ನಾಟಕವನ್ನೂ ಸಹ ರಚಿಸಿದ್ದಾರೆ. ಇವರ ಆತ್ಮಕಥೆಯ ಹೆಸರು ದುಡಿತವೇ ನನ್ನ ದೇವರು. ಇವರಿಗೆ ೧೯೬೯ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ,೨೦೦೫ ರಲ್ಲಿ ಆಳ್ವಾಸ್ ನುಡಿಸಿರಿ ಪ್ರಶಸ್ತಿ, ೨೦೦೬ ರಲ್ಲಿ ನಾಡೋಜ ಪ್ರಶಸ್ತಿ ಇವೇ ಮೊದಲಾದ ಪ್ರಶಸ್ತಿಗಳು ದೊರೆತಿವೆ.

ಪ್ರಸ್ತುತ ಪದ್ಯವನ್ನು ಇವರ ಶತಮಾನದ ಗಾನ ಕೃತಿಯಿಂದ ಆರಿಸಲಾಗಿದೆ.

### ಒಂದು ವಾಕ್ಯದಲ್ಲಿ ಉತ್ತರಿಸಿ .

೧.ಕವಿ ಎಂತಹ ಹಾಡು ಹಾಡಬೇಕೆಂದು ಬಯಸುವರು ?

ಉ: ನವಭಾವ ,ನವಜೀವ,ನವಶಕ್ತಿ ತುಂಬಿಸುವ ಹಾಡನ್ನು ಒಮ್ಮೆ ಹಾಡಬೇಕೆಂದು ಕವಿ ಬಯಸಿದ್ದಾರೆ.

೨. ವೀರಧ್ವನಿ ಹೇಗೆ ಏರಬೇಕು ?

ಉ: ತೀವ್ರತರ ಗಂಭೀರ ಭಾವನೆಯ ತೆರೆಗಳು ಹರಡುವಂತೆ ವೀರಧ್ವನಿ ಇರಬೇಕು.

೩. ಕಡಿದೊಗೆಯಬೇಕಾದ ಪಾಶಗಳು ಯಾವುವು ?

ಜಾತಿ,ಕುಲ,ಮತಧರ್ಮ ಇವೇ ಮೊದಲಾದವು ಕಡಿದೊಗೆಯಬೇಕಾದ ಪಾಶಗಳು .

೪.ಹಾಡು ನುಡಿಗುಂಡುಗಳು ಯಾವುದರ ಬೆನ್ನಟ್ಟಬೇಕು ?

ಹಾಡು ನುಡಿ ಗುಂಡುಗಳು ಭಯದ ಬೆನ್ನಟ್ಟಬೇಕು.

೫. ಬಾನು ಬುವಿ ಯಾವುದರಿಂದ ಬೆಳಗಬೇಕು ?

ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ ಬಾನುಬುವಿ ಬೆಳಗಬೇಕು.

### ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಕವಿ ಎಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಬಯಸುತ್ತಾರೆ ?

ಉ: ನವಭಾವ ,ನವಜೀವನ , ನವಶಕ್ತಿ ತುಂಬಿಸುವ ಹಾಡನ್ನು ಹಾಡಬೇಕು. ತೀವ್ರತರವಾದ ಗಂಭೀರವಾದ ಭಾವನೆಗಳನ್ನು ಹೊಮ್ಮಿಸುವ ಅದರ ಅಲೆ ಎಲ್ಲ ಕಡೆ ಹರಡುವಂತಹ ಹಾಡು ಅದಾಗಿರಬೇಕು. ಹಾಡು ಬದುಕಿನ ಗತಿಯಲ್ಲಿ ಹೊಸ ಪ್ರಗತಿಪರ ಬದಲಾವಣೆ ತರುವಂತದ್ದಾಗಿರಬೇಕು.ಹೊಸ ಚೇತನ ತುಂಬಬೇಕು. ಅಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಕವಿ ಬಯಸಿದ್ದಾರೆ.

೨. ಕವಿ ಎಂತಹ ಹಾಡು ಗುಡುಗಬೇಕು ಎಂದು ಆಶಿಸುತ್ತಾನೆ ?

ಉ: ಜಾತಿ ಕುಲ ಧರ್ಮಗಳ ಪಾಶವನ್ನು ಕಡಿದೊಗೆದು ಸಂತೋಷದಿಂದ ಹಾಡನ್ನು ಹಾಡಬೇಕು. ಆ ಹಾಡು ಯಾವುದೇ ಮಿತಿಗೆ ಒಳಪಡಬಾರದು. ಯುಗಯುಗಗಳಾಚೆ, ಎಲ್ಲ ಲೋಕಗಳಲ್ಲಿ ಜಾತಿ ಧರ್ಮದ ಎಲ್ಲೆಯನ್ನು ಮೀರಿದ ಹಾಡು ಗುಡುಗಬೇಕು.ಎಂದು ಕವಿ ಹೇಳಿದ್ದಾರೆ.

೩. ಈ ಹಾಡು ಹೊಸತು ಎಂದು ಕವಿ ಹೇಳಲು ಕಾರಣವೇನು?

ಉ: ಹಳೆಯ ಪಾಡನ್ನು ಮರೆಸುವಂತಹ ,ಕೊನೆಗೊಳಿಸುವಂತಹ ಹಾಡು ಇದಾಗಿದ್ದು ಇದು ಜನತೆಗೆ ಭರವಸೆಯನ್ನು ,ಗೌರವವನ್ನು ತರುವ ಹಾಡು ಇದಾಗಿದೆ ಆದ್ದರಿಂದ ಇದು ಹೊಸ ಹಾಡು ಎಂದು ಕವಿ ಹೇಳಿದ್ದಾರೆ.

**ಕೊಟ್ಟಿರುವ ಪ್ರಶ್ನೆಗೆ ಎಂಟು -ಹತ್ತು ವಾಕ್ಯದಲ್ಲಿ ಉತ್ತರಿಸಿ .**

೧. ಹೊಸಹಾಡು ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉ: ಬದುಕಿಗೆ ಹೊಸ ಹುರುಪನ್ನು ನೀಡಬಲ್ಲ ,ಹೊಸ ಆಶಯವನ್ನು ,ಜೀವನದ ಗತಿಯನ್ನು ಬದಲಿಸಿ ಹೊಸ ಹುರುಪನ್ನು ತುಂಬಬಲ್ಲ ,ಹಳೆಯ ಮೌಢ್ಯವನ್ನು ಕಡಿದೊಗೆದು ಹೊಸ ಭಾವನೆಗಳನ್ನು ಸೃಜಿಸಬಲ್ಲ ಹೊಸ ಹಾಡನ್ನು ಹಾಡಬೇಕು. ಆ ಹಾಡು ಎಲ್ಲರಲ್ಲು ಕ್ರಾಂತಿಯನ್ನುಂಟು ಮಾಡಬೇಕು. ಅದರ ಮಾರ್ದನಿಗಳು ಭೂಮಿ ಆಕಾಶದಲ್ಲಿ ತುಂಬಬೇಕು. ಎಲ್ಲ ಕೀಳಿರಿಮೆಗಳನ್ನು ಕಡಿದೊಗೆದು ,ಹೊಸ ಹುರುಪನ್ನು ತುಂಬುವ ಹಾಡು ಇದಾಗಿದೆ. ನವಭಾವ ,ನವಜೀವನ , ನವಶಕ್ತಿ ತುಂಬಿಸುವ ಹಾಡನ್ನು ಹಾಡಬೇಕು. ತೀವ್ರತರವಾದ ಗಂಭೀರವಾದ ಭಾವನೆಗಳನ್ನು ಹೊಮ್ಮಿಸುವ ಅದರ ಅಲೆ ಎಲ್ಲ ಕಡೆ ಹರಡುವಂತಹ ಹಾಡು ಅದಾಗಿರಬೇಕು. ಹಾಡು ಬದುಕಿನ ಗತಿಯಲ್ಲಿ ಹೊಸ ಪ್ರಗತಿಪರ ಬದಲಾವಣೆ ತರುವಂತದ್ದಾಗಿರಬೇಕು.ಹೊಸ ಚೇತನ ತುಂಬಬೇಕು. ಅಂತಹ ಹಾಡನ್ನು ಹಾಡಿದಾಗ ವೀರಧ್ವನಿಯೇರಬೇಕು ಎಂದು ಕವಿ ಬಯಸಿದ್ದಾರೆ.ಜಾತಿ ಕುಲ ಧರ್ಮಗಳ ಪಾಶವನ್ನು ಕಡಿದೊಗೆದು ಸಂತೋಷದಿಂದ ಹಾಡನ್ನು ಹಾಡಬೇಕು. ಆ ಹಾಡು ಯಾವುದೇ ಮಿತಿಗೆ ಒಳಪಡಬಾರದು. ಯುಗಯುಗಗಳಾಚೆ, ಎಲ್ಲ ಲೋಕಗಳಲ್ಲಿ ಜಾತಿ ಧರ್ಮದ ಎಲ್ಲೆಯನ್ನು ಮೀರಿದ ಹಾಡು ಗುಡುಗಬೇಕು.ಹಾಡು ಹೇಗಿರಬೇಕೆಂದರೆ ಸೋಮಾರಿತನದ ನಿದ್ರೆಯನ್ನು ಅದು ಹೊಡೆದೋಡಿಸಬೇಕು. ವೀರತೆಯ ಅಟ್ಟಹಾಸದಿಂದ ಬಾನು ಬುವಿಗಳಲ್ಲಿ ಜಾಗೃತಿಯನ್ನು ಮೂಡಿಸುವಂತಹ ಹಾಡು ಅದಾಗಿರಬೇಕು.ನಮ್ಮ ನಡೆ ನುಡಿಗಳಲ್ಲಿ ಜಾಗೃತಿ ಮೂಡಿಸುವ ,ಹೆಜ್ಜೆ ಹೆಜ್ಜೆಗೂ ಎಚ್ಚರಿಸುವ ಕ್ರಾಂತಿಯನ್ನು ಉಂಟುಮಾಡುವಂತಹ ಹಾಡು ಮೂಡಬೇಕು ಎಂದು ಕವಿ ಹೇಳಿದ್ದಾರೆ.ಈ ರೀತಿ ಹಾಡು ಮೊದಲೂ ಇಲ್ಲ. ಇದೇ ಹೊಸತು ಇದೇ ಮೊದಲು .ಹಳೆಯ ವ್ಯಥೆಯಲ್ಲವೂ ಕರಗುವಂತೆ ಹೊಸತಾದ ಹೊಸ ಹಾಡು ಇದಾಗಿದೆ ಎಂದು ಕವಿ ಹೇಳಿದ್ದಾರೆ.

**ಸಂದರ್ಭದೊಂದಿಗೆ ಸ್ವಾರಸ್ಯ ವಿವರಿಸಿ.**

೧. "ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ ವೀರ ಧ್ವನಿಯೇರಬೇಕು."

ಉ: ಈ ಮೇಲಿನ ವಾಕ್ಯವನ್ನು ಕಯ್ಯಾರ ಕಿಞ್ಞಣ್ಣ ರೈಯವರು ಬರೆದ 'ಶತಮಾನದ ಗಾನ' ಕವನಸಂಕಲನದಿಂದ ಆರಿಸಲಾದ ಹೊಸಹಾಡು ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ :ನವಭಾವವನ್ನು ಹೊಮ್ಮಿಸುವ ನವಜೀವನವನ್ನು ನೀಡುವ ನವಚೇತನವನ್ನು ನೀಡುವ ಹಾಡನ್ನು ಹಾಡಬೇಕು. ತೀವ್ರವಾದ ಗಂಭೀರ ಭಾವನೆಯನ್ನು ಅಲೆಗಳ ರೀತಿ ಹರಡಿಸುವಂತೆ ವೀರಧ್ವನಿಯೇರಬೇಕು ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಹಾಡು ಗಂಭೀರವಾದ ವಿಚಾರಗಳನ್ನು ಹೊಹೊಮ್ಮಿಸಿ ಹಾಡಿನ ವಿಚಾರಕ್ಕೆ ಸಹೃದಯರು ಸ್ಪಂದಿಸುವಂತಿರಬೇಕು ಎಂದು ಕವಿ ಅಪೇಕ್ಷಿಸಿದ್ದಾರೆ.

೨. " ಯುಗಯುಗಗಳಾಚೆಯಲಿ ಲೋಕಲೋಕಾಂತದಲಿ ಆ ಹಾಡು ಗುಡುಗಬೇಕು. ”
ಉ: ಈ ಮೇಲಿನ ವಾಕ್ಯವನ್ನು ಕಯ್ಯಾರ ಕಿಞ್ಞಣ್ಣ ರೈಯವರು ಬರೆದ 'ಶತಮಾನದ ಗಾನ' ಕವನಸಂಕಲನದಿಂದ ಆರಿಸಲಾದ ಹೊಸಹಾಡು ಪಧ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.
ಸಂದರ್ಭ : ಹಾಡಿಗೆ ಮಿತಿ ಅಥವಾ ಎಲ್ಲೆ ಇರಬಾರದು. ಜಾತಿ,ಕುಲ ,ಮತ ಧರ್ಮಪಾಶಗಳ ಬಂಧನ ಬಿಗಿದಿರಬಾರದು. ಯುಗಗಳು ಕೊನೆಯಾದರೂ ಎಲ್ಲ ಲೋಕಗಳಲ್ಲೂ ಆ ಹಾಡು ಗುಡುಗಬೇಕು ಎಂದು ಕವಿ ಹೇಳಿದ್ದಾರೆ.
ಸ್ವಾರಸ್ಯ : ಹಾಡಿನ ವಿಚಾರಗಳು ಎಲ್ಲ ಕಡೆಯಲ್ಲೂ ಮಾರ್ಧನಿಸಬೇಕು. ಎಲ್ಲ ಯುಗಗಳಲ್ಲಿ ಎಲ್ಲ ಲೋಕಗಳಲ್ಲಿ ಈ ಹಾಡು ಉಳಿಯುವಂತಿರಬೇಕು ಎಂಬುದು ಕವಿಯ ವಿಚಾರವಾಗಿದೆ.

೩. “ಜಡ ನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ ಬಾನು ಬುವಿ ಬೆಳಗಬೇಕು. ”
ಈ ಮೇಲಿನ ವಾಕ್ಯವನ್ನು ಕಯ್ಯಾರ ಕಿಞ್ಞಣ್ಣ ರೈಯವರು ಬರೆದ 'ಶತಮಾನದ ಗಾನ' ಕವನಸಂಕಲನದಿಂದ ಆರಿಸಲಾದ ಹೊಸಹಾಡು ಪಧ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.
ಸಂದರ್ಭ : ಹಾಡು ಹೇಗಿರಬೇಕೆಂದರೆ ಸೋಮಾರಿತನದ ನಿದ್ರೆಯನ್ನು ಅದು ಹೊಡೆದೋಡಿಸಬೇಕು. ವೀರತೆಯ ಅಟ್ಟಹಾಸದಿಂದ ಬಾನು ಬುವಿಗಳಲ್ಲಿ ಜಾಗೃತಿಯನ್ನು ಮೂಡಿಸುವಂತಹ ಹಾಡು ಅದಾಗಿರಬೇಕು ಎಂದು ಕವಿ ಹೇಳಿದ್ದಾರೆ.
ಸ್ವಾರಸ್ಯ: ಜಗತ್ತಿನ ಜನರ ಅಜ್ಞಾನವನ್ನು ಹೋಗಲಾಡಿಸಿ ಎಚ್ಚರಿಕೆ ಮೂಡಿಸುವ ಹಾಡು ಹೊಮ್ಮಲಿ ಎಂದು ಕವಿ ಹೇಳಿದ್ದಾರೆ.

೪. "ನಡೆ ನುಡಿಗಳೆಡೆಯಲ್ಲಿ ವೀರಾಟ್ಟಹಾಸದಲಿ ಬಾನು ಬುವಿ ಬೆಳಗಬೇಕು.”
ಈ ಮೇಲಿನ ವಾಕ್ಯವನ್ನು ಕಯ್ಯಾರ ಕಿಞ್ಞಣ್ಣ ರೈಯವರು ಬರೆದ 'ಶತಮಾನದ ಗಾನ' ಕವನಸಂಕಲನದಿಂದ ಆರಿಸಲಾದ ಹೊಸಹಾಡು ಪಧ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.
ಸಂದರ್ಭ : ನಮ್ಮ ನಡೆ ನುಡಿಗಳಲ್ಲಿ ಜಾಗೃತಿ ಮೂಡಿಸುವ ,ಹೆಜ್ಜೆ ಹೆಜ್ಜೆಗೂ ಎಚ್ಚರಿಸುವ ಕ್ರಾಂತಿಯನ್ನು ಉಂಟುಮಾಡುವಂತಹ ಹಾಡು ಮೂಡಬೇಕು ಎಂದು ಕವಿ ಹೇಳಿದ್ದಾರೆ.
ಸ್ವಾರಸ್ಯ : ಜನರ ನಡೆನುಡಿಯಲ್ಲಿ ಜಾಗೃತಿ ಹುಟ್ಟಿಸುವ ,ಅವರ ವ್ಯಕ್ತಿತ್ವ ವಿಚಾರಗಳಲ್ಲಿ ಬದಲಾವಣೆ ತರುವ ಹಾಡು ಇದಾಗಿರಬೇಕು ಎಂದು ಕವಿ ಹೇಳಿದ್ದಾರೆ.

೫. “ ಇದೋ ಮೊದಲು ಮುನ್ನಿಲ್ಲ -ಮುಗಿದುದಂದಿನ ಪಾಡು ಹೊಸತಿಂದು ಹೊಸತು ಹಾಡು .”
ಈ ಮೇಲಿನ ವಾಕ್ಯವನ್ನು ಕಯ್ಯಾರ ಕಿಞ್ಞಣ್ಣ ರೈಯವರು ಬರೆದ' ಶತಮಾನದ ಗಾನ' ಕವನಸಂಕಲನದಿಂದ ಆರಿಸಲಾದ ಹೊಸಹಾಡು ಪಧ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.
ಸಂದರ್ಭ :ನವ ಭಾವ ನವ ಜೀವ ನವ ಶಕ್ತಿ ತುಂಬಿಸುವ ಹೊಸ ಹಾಡು ಹಾಡಬೇಕು. ಈ ರೀತಿ ಹಾಡು ಮೊದಲೂ ಇಲ್ಲ. ಇದೇ ಹೊಸತು ಇದೇ ಮೊದಲು .ಹಳೆಯ ವ್ಯಥೆಯಲ್ಲವೂ ಕರಗುವಂತೆ ಹೊಸತಾದ ಹೊಸ ಹಾಡು ಎಂದು ಕವಿ ಹೇಳಿದ್ದಾರೆ.
ಸ್ವಾರಸ್ಯ : ಹಾಡಿನ ಭಾವಕ್ಕೆ ಹಳೆಯ ಚಿಂತೆಗಳು ಕೊನೆಗೊಂಡು ಹೊಸ ಶಕ್ತಿಯನ್ನು ಹೊಮ್ಮಿಸುವಂತಿರಬೇಕು ಎಂಬುದು ಕವಿಯ ಆಶಯವಾಗಿದೆ.

ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.
೧. ಧ್ವನಿ :ದನಿ : : ಯುಗ : --- (ಜುಗ )
೨. ಲೋಕಾಂತರ : ಸವರ್ಣದೀರ್ಘ ಸಂಧಿ: : ಉನ್ನತೋನ್ನತ : ಗುಣಸಂಧಿ

೩. ಬಾನು :ಆಕಾಶ : : ಭಾನು : --- (ಸೂರ್ಯ )

**ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

೧. 'ಹೊಸಹಾಡು' ಪದ್ಯದ ಆಕರಗ್ರಂಥ ----- (ಶತಮಾನದ ಗಾನ)

(ಪುನರ್ನವ ,ಚೇತನ, ಕೊರಗ,ಶತಮಾನದ ಗಾನ )

೨. 'ಹೊಸ ಹಾಡು 'ಪದ್ಯದ ಕವಿ---- (ಕಯ್ಯಾರ ಕಿಞ್ಞಣ್ಣ ರೈ )

(ಗೋಪಾಲಕೃಷ್ಣ ಅಡಿಗ ,ಕಯ್ಯಾರ ಕಿಞ್ಞಣ್ಣ ರೈ, ದ.ರಾ.ಬೇಂದ್ರೆ, ಜಿ.ಎಸ್. ಶಿವರುದ್ರಪ್ಪ )

೩.ಉನ್ನತೋನ್ನತ ------- ಶಿಖರವನ್ನೇರಿ ಹಾಡಲ್ಲಿ ಹಾಡಬೇಕು ( ಘನ ಹಿಮಾದ್ರಿ)

(ಹಿಮಾಲಯ ,ಘನ ಹಿಮಾದ್ರಿ, ಸಹ್ಯಾದ್ರಿ ,ವಿಂಧ್ಯಾ)

೪.--------- ಪಾಶಗಳ ಕಡಿದೊಗೆದು ಎದೆ ಹಿಗ್ಗಿ ಹಾಡಬೇಕು . (ಜಾತಿ-ಕುಲ-ಮತ )

(ಜಾತಿ-ಕುಲ-ಮತ , ಮೇಲು ಕೀಳು ,ಬಡವ -ಬಲ್ಲಿದ ,ಹಳ್ಳಿ-ಪಟ್ಟಣ )

**ಭಾಷಾ ಚಟುವಟಿಕೆ**

ಅ. ಅಲಂಕಾರದ ಎರಡು ವಿಧಗಳನ್ನು ಹೆಸರಿಸಿ.

ಉ: ಅಲಂಕಾರದ ಎರಡು ವಿಧಗಳು -ಶಬ್ದಾಲಂಕಾರ ಮತ್ತು ಅರ್ಥಾಲಂಕಾರ

ಆ . ಅಲಂಕಾರ ಹೆಸರಿಸಿ ಲಕ್ಷಣದೊಂದಿಗೆ ಸಮನ್ವಯಿಸಿ

“ಬಾನಿನಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು "

ಉಪಮೇಯ : ಗಾಳಿಪಟಗಳು

ಉಪಮಾನ : ಹಕ್ಕಿಗಳು

ಉಪಮಾವಾಚಕ : ಅಂತೆ

ಸಮಾನಧರ್ಮ : ಹಾರಾಡುವುದು

ಅಲಂಕಾರ : ಉಪಮಾ

ಲಕ್ಷಣ : ಎರಡು ವಸ್ತುಗಳಲ್ಲಿ ಪರಸ್ಪರ ಇರುವ ಹೋಲಿಕೆಯನ್ನು ವರ್ಣಿಸುವುದು ಉಪಮಾಲಂಕಾರವೆನಿಸುವುದು.

ಸಮನ್ವಯ : ಉಪಮೇಯವಾದ ಬಾನಿನಲ್ಲಿ ಗಾಳಿಪಟಗಳ ಹಾರಾಡುವಿಕೆಯನ್ನು ಉಪಮಾನವಾದ ಹಕ್ಕಿಗಳ ಹಾರಾಡುವಿಕೆಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

## ಪದ್ಯ ಪಾಠ -೨ ಪಾರಿವಾಳ -ಸು.ರಂ.ಎಕ್ಕುಂಡಿ

### ಕೃತಿಕಾರರ ಪರಿಚಯ



ಸುಬ್ಬಣ್ಣ ರಂಗನಾಥ ಎಕ್ಕುಂಡಿಯವರು ಜನಿಸಿದ್ದು ೧೯೨೩ ರಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ. ಇವರು ಶ್ರೀ ಆನಂದ ತೀರ್ಥರು,ಸಂತಾನ,ಹಾವಾಡಿಗರ ಹುಡುಗ ,ಮತ್ಸ್ಯಗಂಧಿ,ಬಕುಳದ ಹೂಗಳು ಮೊದಲಾದ ಕವನ ಸಂಕಲನಗಳನ್ನೂ, ನೆರಳು ಎನ್ನುವ ಕಥಾ ಸಂಕಲನವನ್ನೂ ,ಬಿಂಬಗಳು ಎನ್ನುವ ಕಾದಂಬರಿಯನ್ನೂ ಬರೆದಿದ್ದಾರೆ. ಇವರಿಗೆ ಸೋವಿಯತ್ ಲ್ಯಾಂಡ್ ನ ನೆಹರು ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ,ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿವೆ.

ಪ್ರಸ್ತುತ ಪಾರಿವಾಳ ಪದ್ಯವನ್ನು ಇವರ 'ಸಮಗ್ರ ಕಥನ ಕವನಗಳು 'ಎಂಬ ಕೃತಿಯಿಂದ ಆರಿಸಲಾಗಿದೆ.

ಅ. ಒಂದು ವಾಕ್ಯದಲ್ಲಿ ಉತ್ತರಿಸಿ.

೧. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು ?

ಉ: ಮುದ್ದು ಪಾರಿವಾಳಗಳ ಜೋಡಿ ದಟ್ಟ ಕಾಡಿನಲ್ಲಿದ್ದ ಹೆಮ್ಮರದ ಹೊದರಿನಲ್ಲಿ ಸಂಸಾರ ಹೂಡಿದ್ದವು.

೨. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು ?

ಉ: ಜೋಡಿಪಾರಿವಾಳಗಳು ಒಂದನ್ನೊಂದು ಅಗಲದೇ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು.

೩. ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಏನು ಮಾಡಿದವು ?

ಉ: ಬಲೆಯಲ್ಲಿದ್ದ ಮರಿಗಳು ಹೊರಗೆ ಬರಲು ಚೀತ್ಕರಿಸತೊಡಗಿದವು.

೪. ಏನನ್ನು ತೊರೆದು ಬಾಳಬೇಕು ?

ಉ: ವ್ಯಾಮೋಹವನ್ನು ತೊರೆದು ಬಾಳಬೇಕು.

ಆ. ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಪಾರಿವಾಳಗಳ ಆನಂದಕ್ಕೆ ಕಾರಣವೇನು ?

ಉ: ದಟ್ಟ ಕಾಡಿನಲ್ಲಿದ್ದ ಹೆಮ್ಮರದ ಹೊದರಿನಲ್ಲಿ ವಾಸವಾಗಿದ್ದ ಪಾರಿವಾಳಗಳ ಜೋಡಿಗಳು ಒಂದನ್ನೊಂದು ಅಗಲಿರದೆ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು. ಅವುಗಳು ಇಟ್ಟ ಮೊಟ್ಟೆಯಿಂದ ಮರಿಗಳು ಹೊರಬಂದು ಮಧುರವಾಗಿ ಮಾತನಾಡಲು ಪ್ರಾರಂಭಿಸಿದಾಗ ಪಾರಿವಾಳಗಳಿಗೆ ಆನಂದವಾಯಿತು. ಅದೇ ಆನಂದದಲ್ಲಿ ಅವು ದಿನಕಳೆಯುತ್ತಿದ್ದವು.

೨. ಬೇಡ ಏನು ಮಾಡಿದನು ?

ಉ: ಪುಟ್ಟ ಮರಿಗಳೊಂದಿಗೆ ಪಾರಿವಾಳಗಳ ಜೋಡಿಗಳು ಆನಂದದಿಂದ ದಿನ ಕಳೆಯುತ್ತಿದ್ದಾಗ ಅಲ್ಲಿಗೆ ಬಂದ ಬೇಟೆಗಾರನೊಬ್ಬನು ಬಲೆಯ ಹರಡಿದನು. ಪುಟ್ಟ ಮರಿಗಳು ಬಲೆಗೆ ಹಾರಿ ಅದರಲ್ಲಿ ಸಿಲುಕಿದಾಗ ಅವುಗಳನ್ನು ನೋಡಿ ತಾಯಿ ಪಾರಿವಾಳ ಹಾರಿದಾಗ ಹೆಂಡತಿಯನ್ನು ಅಗಲಿರದ ಗಂಡು ಹಕ್ಕಿಯೂ ಬಲೆಗೆ ಹಾರಿತು. ಕುರುಡು ವಾತ್ಸಲ್ಯದಲ್ಲಿ ವಿವೇಕ ಕಳೆದುಕೊಂಡು ಬಲೆಗೆ ಹಾರಿದ ಪಾರಿವಾಳಗಳ ಹಿಂಡನ್ನು ಹಸಿದ ಬೇಡನು ಹೊತ್ತು ನಡೆದನು.

**ಇ. ೮ ರಿಂದ ೧೦ ವಾಕ್ಯಗಳಲ್ಲಿ ಉತ್ತರಿಸಿ.**

**೧. ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು ?**

**(ವಿದ್ಯಾರ್ಥಿಗಳ ವಿವೇಚನೆಗೆ ಬಿಡಲಾಗಿದೆ )**

**೨.ಪಾರಿವಾಳ ಪದ್ಯದ ಕಥೆಯನ್ನು ಬರೆಯಿರಿ.**

**ಉ: ದಟ್ಟ ಕಾಡಿನಲ್ಲಿದ್ದ ಹೆಮ್ಮರದ ಪೊಟರೆಯಲ್ಲಿ ಮುದ್ದಾದ ಬಿಳಿ ಪಾರವಾಳಗಳ ಜೋಡಿ ವಾಸವಾಗಿದ್ದವು. ಅವು ಹಗಲಿರುಳು ಸದಾ ಕಾಲ ಜೊತೆಯಾಗಿಯೇ ಇರುತ್ತಿದ್ದವು. ಅವುಗಳು ಇಟ್ಟ ಮೊಟ್ಟೆಯಿಂದ ಹೊರಬಿದ್ದ ಪುಟ್ಟ ಪಾರಿವಾಳಗಳ ಮಧುರವಾದ ಚಿಲಿಪಿಲಿ ನಾದ ಕೇಳಿ ಆನಂದದಿಂದ ಬಾಳುತ್ತಿದ್ದ ದಿನಗಳಲ್ಲಿ ಒಮ್ಮೆ ಅಲ್ಲಿಗೆ ಬಂದ ಬೇಟೆಗಾರನೊಬ್ಬನು ಬಲೆಯನ್ನು ಹೂಡಿದನು. ಅದರಲ್ಲಿ ಹಾರಿದ ಪುಟ್ಟ ಮರಿಗಳು ಚೀತ್ಕರಿಸತೊಡಗಿದಾಗ ಅವುಗಳ ಪಾಡು ನೋಡಲಾರದ ತಾಯಿ ಪಾರಿವಾಳವು ತಾನೂ ಬಲೆಯಲ್ಲಿ ಧುಮುಕಿತು.ಅದನ್ನು ಅಗಲಿರದ ಗಂಡು ಪಾರಿವಾಳವೂ ಸಹ ಬಲೆಯೊಳಗೆ ಹಾರಿದಾಗ ಬೇಡನು ಬಲೆಯಲ್ಲಿ ಸಿಲುಕಿದ ಪಾರಿವಾಳಗಳ ಹಿಂಡನ್ನು ಹೊತ್ತು ನಡೆದನು. ತಂದೆ ತಾಯಿ ಪಾರಿವಾಳಗಳು ಕುರುಡು ವಾತ್ಸಲ್ಯಕ್ಕೆ ಒಳಗಾಗಿ ಮರಿಗಳೊಂದಿಗೆ ತಾವೂ ಬಲೆಯಲ್ಲಿ ಸಿಲುಕಿದ್ದರಿಂದ ಅವುಗಳಿಗೆ ದುರ್ಗತಿಯೊದಗಿತು. ಜೀವನದಲ್ಲಿ ಬಂದುದನ್ನು ಎದುರಿಸಬೇಕು. ವ್ಯಾಮೋಹವನ್ನು ತೊರೆದು ಬಾಳಬೇಕು. ಮೋಹ ಮುಸುಕಿದ ಬುದ್ಧಿಯಿಂದ ನಾಶವು ಬಂದೊದಗುವುದು ಎಂಬುದನ್ನು ಅರಿಯದೇ ಇದ್ದರೆ ಪಾರಿವಾಳಗಳ ಸ್ಥಿತಿ ಬಂದೊದಗುವುದು. ಆದ್ದರಿದ ವ್ಯಾಮೋಹ ತೊರೆದು ತಾಳ್ಮೆಯಿಂದ ಯೋಚಿಸಿ ಕಾರ್ಯ ಸಾಧನೆ ಮಾಡಬೇಕು ಎನ್ನುವುದೇ ಈ ಕಥನ ಕವನದ ಆಶಯವಾಗಿದೆ.**

**ಈ .ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ .**

**೧. " ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ "**

**ಈ ಮೇಲಿನ ವಾಕ್ಯವನ್ನು ಸು. ರಂ. ಎಕ್ಕುಂಡಿಯವರು ಬರೆದ ಸಮಗ್ರ ಕಥನ ಕವನಗಳು ಕೃತಿಯಿಂದ ಆರಿಸಲಾದ ಪಾರಿವಾಳ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.**

**ಸಂದರ್ಭ : ದಟ್ಟ ಕಾಡಿನ ಹೆಮ್ಮರದ ಹೊದರಿನಲ್ಲಿ ವಾಸವಾಗಿದ್ದ ಪಾರಿವಾಳಗಳು ಬಹಳ ಪ್ರೀತಿಯಿಂದ ಒಂದನ್ನೊಂದು ಅಗಲದೇ ಹಗಲಿರುಳು ಜೊತೆಗೂಡಿ ಸಂಸಾರ ನಡೆಸಿದ್ದವು. ಅವುಗಳು ಇಟ್ಟ ಮೊಟ್ಟೆಯೊಡೆದು ಹೊರ ಬಂದ ಮರಿಗಳ ಮಧುರ ಧ್ವನಿ ಕೇಳಿ ಆನಂದದಿಂದ ಬಾಳುತ್ತಿದ್ದಾಗ ಒಮ್ಮೆ ಅಲ್ಲಿಗೆ ಬಂದ ಬೇಡನು ಬಲೆ ಬೀಸಿದನು.ಮರಿಗಳು ಅದರಲ್ಲಿ ಸಿಲುಕಿ ಚೀತ್ಕರಿಸತೊಡಗಿದಾಗ ತಾಯಿಯು ದುಗುಡದಿಂದ ಬಲೆಯಲ್ಲಿ ಹಾರಿತು. ಹೆಂಡತಿಯನ್ನು ಅಗಲಿರದ ಗಂಡು ಹಕ್ಕಿಯು ಹಾರಿ ಒಳಗೆ ಬಂದು ಬಿಕ್ಕಿತು ಎಂದು ಕವಿ ಹೇಳಿದ್ದಾರೆ.**

**ಸ್ವಾರಸ್ಯ : ಪರಸ್ಪರ ಕುರುಡು ವಾತ್ಸಲ್ಯದಲ್ಲಿ ವಿವೇಕ ಕಳೆದುಕೊಂಡ ಬಲೆಗೆ ಹಾರಿದ ತಂದೆ ತಾಯಿ ಪಾರಿವಾಳಗಳು ಬಲೆಯಿಂದ ಹೊರಬರಲಾರದೇ ಬಿಕ್ಕಿದ ಸನ್ನಿವೇಶ ಇದಾಗಿದೆ.**

**೨. " ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ "**

**ಈ ಮೇಲಿನ ವಾಕ್ಯವನ್ನು ಸು. ರಂ. ಎಕ್ಕುಂಡಿಯವರು ಬರೆದ ಸಮಗ್ರ ಕಥನ ಕವನಗಳು ಕೃತಿಯಿಂದ ಆರಿಸಲಾದ ಪಾರಿವಾಳ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.**

**ಸಂದರ್ಭ : ಬೇಡನು ಬೀಸಿದ ಬಲೆಯಲ್ಲಿ ಮರಿ ಪಾರಿವಾಳಗಳು ಸಿಲುಕಿ ಚೀತ್ಕರಿಸತೊಡಗಿದಾಗ ಅವುಗಳ ಪಾಡು ನೋಡಲಾರದ ತಾಯಿ ಪಾರಿವಾಳ ಬಲೆಗೆ ಹಾರಿತು.ಹೆಂಡತಿಯನ್ನು ಅಗಲಿರದ ಗಂಡು ಪಾರಿವಾಳವೂ ಬಲೆಗೆ ಹಾರಿತು.**

ಕುರುಡು ವಾತ್ಸಲ್ಯದಿಂದ ವಿವೇಕ ಕಳೆದುಕೊಂಡು ಬಲೆಗೆ ಹಾರಿದ ಪಾರಿವಾಳಗಳ ಹಿಂಡು ಬೇಡನಿಗೆ ಆಹಾರವಾದವು ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಮೋಹ ಆವರಿಸಿದಾಗ ವಿವೇಕ ಶೂನ್ಯವಾಗುತ್ತದೆ. ವ್ಯಾಮೋಹವು ಸರ್ವನಾಶಕ್ಕೆ ಕಾರಣವಾಗುತ್ತದೆ. ವ್ಯಾಮೋಹವನ್ನು ಬಿಟ್ಟು ಬದುಕುತ್ತ ಜೀವನದಲ್ಲಿ ಏನೇ ಬಂದರೂ ಎದುರಿಸಬೇಕೆಂದು ಕವಿ ಹೇಳಿದ್ದಾರೆ.

ಭಾಷಾ ಚಟುವಟಿಕೆ

೧. ರೂಪಕಾಲಂಕಾರವನ್ನು ನಿದರ್ಶನದ ಮೂಲಕ ವಿವರಿಸಿ.

ಉಪಮೇಯ ,ಉಪಮಾನಗಳು ಎರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವ ಅಲಂಕಾರವೇ ರೂಪಕಾಲಂಕಾರ.

ಉದಾ : ಶಾಲೆಗೆ ಈ ವಿದ್ಯಾರ್ಥಿಯೊಂದು ರತ್ನ

ಇಲ್ಲಿ ಉಪಮೇಯವಾದ ವಿದ್ಯಾರ್ಥಿಯನ್ನು ಉಪಮಾನವಾದ ರತ್ನಕ್ಕೆ ಅಭೇದ ಕಲ್ಪಿಸಿ ಹೇಳಲಾಗಿದೆ.

ಅದೇ ರೀತಿ

ಮನೆಯೇ ಧರ್ಮಾಶ್ರಮ , ಮನೆವಾಳ್ತೆಯೇ ಧರ್ಮ .

ಉಪಮೇಯ : ಮನೆ, ಮನೆವಾಳ್ತೆ

ಉಪಮಾನ : ಆಶ್ರಮ , ಧರ್ಮ

ಅಲಂಕಾರ : ರೂಪಕ

ಸಮನ್ವಯ : ಉಪಮೇಯವಾದ ಮನೆಯನ್ನು ಉಪಮಾನವಾದ ಆಶ್ರಮಕ್ಕೂ , ಹಾಗೆಯೇ ಉಪಮೇಯವಾದ ಮನೆವಾಳ್ತೆಯನ್ನು ಉಪಮಾನವಾದ ಧರ್ಮಕ್ಕೂ ಅಭೇದ ಕಲ್ಪಿಸಿ ಹೇಳಿರುವುದರಿಂದ ಇದು ರೂಪಕ ಅಲಂಕಾರವಾಗಿದೆ.

೨. ಸಾವಿತ್ರಿಯ ಮುಖ ಕಮಲ ಅರಳಿತು .... ಅಲಂಕಾರ ಹೆಸರಿಸಿ ಸಮನ್ವಯಿಸಿ.

ಉಪಮೇಯ : ಸಾವಿತ್ರಿಯ ಮುಖ

ಉಪಮಾನ : ಕಮಲ


ಅಲಂಕಾರ : ರೂಪಕಾಲಂಕಾರ

ಸಮನ್ವಯ : ಉಪಮೇಯವಾದ ಸಾವಿತ್ರಿಯ ಮುಖವನ್ನು ಉಪಮಾನವಾದ ಕಮಲಕ್ಕೆ ಅಭೇದವಾಗಿ ರೂಪಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

೩. ಪಾರಿವಾಳ ಪದ್ಯದಲ್ಲಿರುವ ಅಂತ್ಯಪ್ರಾಸ ಪದಗಳು ---ಹೂಡಿ-ಜೋಡಿ , ಒಂದು-ಬಂದು , ಕೇಳಿ-ಬಾಳಿ , ಸೆರೆಗೆ-ಹೊರಗೆ , ಹಕ್ಕಿ-ಬಿಕ್ಕಿ , ಹಿಂಡು -ಹೊತ್ತುಕೊಂಡು , ಬಾಳಬೇಕು-ತಾಳಬೇಕು .

## ಪದ್ಯಪಾಠ -೩ ಸಿರಿಯನಿನ್ನೇನ ಬಣ್ಣಿಪೆನು -ರತ್ನಾಕರವರ್ಣಿ

**ಕೃತಿಕಾರರ ಪರಿಚಯ :**



ರತ್ನಾಕರವರ್ಣಿ ದಕ್ಷಿಣಕನ್ನಡ ಜಿಲ್ಲೆಯ ಮೂಡಬಿದರೆಯವರು. ಇವರ ಕಾಲ ಕ್ರಿ.ಶ.೧೫೬೦ .ಇವರು ಭರತೇಶ ವೈಭವ ಸಾಂಗತ್ಯ ಕಾವ್ಯವನ್ನು ,ಅಪರಾಜಿತೇಶ್ವರ ಶತಕ ,ತ್ರಿಲೋಕಶತಕ , ರತ್ನಾಕರಾಧೀಶ್ವರ ಶತಕ ಮೊದಲಾದ ಜೈನಧಾರ್ಮಿಕ ಕಾವ್ಯಗಳನ್ನು ರಚಿಸಿರುವರು. ಇವರು ಸುಮಾರು ಎರಡುಸಾವಿರ ಸಾಂಪ್ರದಾಯಿಕ ಹಾಡುಗಳನ್ನು ರಚಿಸಿದ್ದು ಅವು ಆಧ್ಯಾತ್ಮ ಗೀತೆಗಳೆಂದು ಪ್ರಸಿದ್ಧವಾಗಿದೆ.ಇವರು ತಾಳ ಪ್ರದೇಶದ ಭೈರರಸ ಒಡೆಯರ ಆಸ್ಥಾನದಲ್ಲಿ ಕೆಲವು ಕಾಲ ಇದ್ದು ಶೃಂಗಾರ ಕವಿ ಎಂಬ ಅಭಿದಾನಕ್ಕೆ ಪಾತ್ರರಾಗಿದ್ದರು.

ಪ್ರಸ್ತುತ ಪದ್ಯಭಾಗವನ್ನು ತ.ಸು.ಶಾಮರಾವ್ ಅವರು ಸಂಪಾದಿಸಿದ ರತ್ನಾಕರವರ್ಣಿ ವಿರಚಿತ ಭರತೇಶವೈಭವ ಸಂಗ್ರಹ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

ಪ್ರಶ್ನೋತ್ತರಗಳು

**ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಭರತೇಶ ವೈಭವ ಕಾವ್ಯದ ಕರ್ತೃ ಯಾರು ?

ಉ: ಭರತೇಶ ವೈಭವ ಕಾವ್ಯದ ಕರ್ತೃ ರತ್ನಾಕರವರ್ಣಿ

೨.ಸಿರಿಯನಿನ್ನೇನ ಬಣ್ಣಿಪೆನು ಪದ್ಯವನ್ನು ಭರತೇಶವೈಭವ ಕೃತಿಯ ಯಾವ ಭಾಗದಿಂದ ಆರಿಸಿಕೊಳ್ಳಲಾಗಿದೆ ?

ಉ: ಸಿರಿಯನಿನ್ನೇನ ಬಣ್ಣಿಪೆನು ಪದ್ಯವನ್ನು ಭರತೇಶವೈಭವ ಕೃತಿಯ ಆಸ್ಥಾನ ಸಂಧಿಯ ೨,೪,೧೧,೧೨,೧೬,೧೭,೩೧ ಮತ್ತು ೩೪ ನೆಯ ಪದ್ಯಗಳನ್ನು ಆರಿಸಿ ಸಂಯೋಜಿಸಿ ನಿಗದಿ ಪಡಿಸಿದೆ.

೩.ಭರತ ಚಕ್ರವರ್ತಿ ಓಲಗಕ್ಕೆ ಹೇಗೆ ಬರುತ್ತಾನೆ ?

ಉ: ಭರತ ಚಕ್ರವರ್ತಿಯು ಉದಯಕಾಲದಲ್ಲಿಯೇ ಎದ್ದು ದೇವತಾರ್ಚನೆಯನ್ನು ಮಾಡಿ ಓಲಗಕ್ಕೆ ಬರುವನು.

೪. ಆಸ್ಥಾನ ಭವನದೊಳಗೆ ರಾಜನು ಹೇಗೆ ಶೋಭಿಸುವನು ?

ಉ: ಆಸ್ಥಾನ ಭವನದೊಳಗೆ ರಾಜನು ದೇವೇಂದ್ರನಂತೆ ಶೋಭಿಸುವನು .

೫. ತುಂಬಿದ ಸಭೆ ಮೈಮರೆತು ಕಾತರರಾಗಿದ್ದುದಕ್ಕೆ ಕಾರಣವೇನು ?

ಉ: ಕಮಲವು ರವಿಯನ್ನು ನೋಡುವಂತೆ ,ನೈದಿಲೆಗಳು ಶಶಿಯನ್ನು ನೋಡುವಂತೆ ತುಂಬಿದ ಸಭೆ ಭರತ ಚಕ್ರೇಶ್ವರನನ್ನು ನೋಡಲು ಕಾತರರಾಗಿದ್ದರು.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಧ್ಯಾನ ಬೇಸರವಾದಾಗ ಏನು ಮಾಡುತ್ತೇನೆಂದು ಕವಿ ಹೇಳುತ್ತಾರೆ ?

ಉ: ಗುರುವೆ ನಿನ್ನಲ್ಲಿ ಒಂದು ವಿಜ್ಞಾಪನೆ ,ಧ್ಯಾನ ಮಾಡಿ ಬೇಸರವಾದ ಸಮಯದಲ್ಲಿ ಗುರುವೆ ನಿನ್ನನ್ನೇ ಮೊದಲಾಗಿಸಿಕೊಂಡು ಕನ್ನಡದಲ್ಲಿ ಒಂದು ಕಥೆಯನ್ನು ಹೇಳುವೆನು. ಇದಕ್ಕೆ ನಿನ್ನ ಅಪ್ಪಣೆ ಬೇಕು ಎಂದು ಕವಿ ಹೇಳಿದ್ದಾರೆ.ಕನ್ನಡದಲ್ಲಿ ಒಂದು ಸುಂದರವಾದ ಕಥೆ ಬರೆಯುವ ಅಪೇಕ್ಷೆ ಕವಿಯದಾಗಿದೆ.

೨. ಬೇರೆ ಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುವನು ?

ಉ: ಕನ್ನಡಿಗರು ಈ ಕಥೆ ಎಷ್ಟು ಚೆನ್ನಾಗಿದೆ ಎಂದು ಹೇಳಬೇಕು. ಅಯ್ಯಾ ಮಂಚಿದಿಯನೆ ಎಂದು ತೆಲುಗರು ಹೇಳಬೇಕು. ಅಯ್ಯಾ ಎಂಚ ಪೊರ್ಲಾಂಡು ಎಂದು ತುಳುವರು ಹೇಳಬೇಕು. ತನ್ನ ಕಥೆಯನ್ನು ಎಲ್ಲರು ಅಭಿಮಾನದಿಂದ ಕೇಳುವಂತಾಗಬೇಕು ಎಂದು ಕವಿ ಬಯಸುವನು.

೩. ಭರತ ಚಕ್ರವರ್ತಿ ಓಲಗಮಂಟಪವನ್ನೇರಿದ ಸಂದರ್ಭವನ್ನು ಬಣ್ಣಿಸಿ

ಭರತ ಚಕ್ರವರ್ತಿಯು ಮುಂಜಾನೆ ಎದ್ದು ದೇವತೆಗಳ ಪೂಜೆಯನ್ನು ನೆರವೇರಿಸಿ ರಾಜ ಸಭೆಗೆ ಬರುವ ವೈಭವ ಬಣ್ಣಿಸಲಿಕ್ಕೆ ಅಸಾಧ್ಯ. ನವರತ್ನ ಬಂಗಾರಗಳಿಂದ ನಿರ್ಮಿತವಾದ ಆಸ್ಥಾನ ಭವನದಲ್ಲಿ ರಾಜರತ್ನನು ರತ್ನಪುಷ್ಪಕದಲ್ಲಿ ಕಾಂತಿಯಿಂದ ಶೋಭಿಸಿ ಓಲಗವನ್ನು ನಡೆಸುವ ರೀತಿ ದೇವೇಂದ್ರನನ್ನು ಹೋಲುವಂತದ್ದು.

ಏಳು /ಎಂಟು ವಾಕ್ಯಗಳಲ್ಲಿ ಉತ್ತರಿಸಿ.

೧.ಭರತ ಚಕ್ರವರ್ತಿಯ ರಾಜ ದರ್ಬಾರಿನ ವೈಭವವನ್ನು ವರ್ಣಿಸಿ

ಉ: ಭರತ ಚಕ್ರೇಶ್ವರನು ಮೂರು ಲೋಕವು ಹೊಗಳುವಂತೆ ಆಳ್ವಿಕೆ ನಡೆಸುತ್ತಿದ್ದನು. ಉದಯ ಕಾಲದಲ್ಲಿಯೇ ಎದ್ದು ದೇವತಾರ್ಚನೆಯನ್ನು ಕೈಗೊಂಡ ನಂತರ ಓಲಗವನ್ನು ನಡೆಸುತ್ತಿದ್ದನು. ನವರತ್ನಗಳಿಂದ ,ಬಂಗಾರದಿಂದ ನಿರ್ಮಿತವಾದ ಅವನ ಆಸ್ಥಾನ ಭವನದಲ್ಲಿ ,ರತ್ನಪುಷ್ಪಕದಲ್ಲಿ ಕುಳಿತಿದ್ದ ಚಕ್ರೇಶ್ವರನು ಕಾಂತಿಯಿದ ಕೂಡಿ , ದೇವೇಂದ್ರನು ಶೋಭಿಸುವಂತೆ ಶೋಭಿಸುತ್ತಿದ್ದನು. ರತ್ನಪುಷ್ಪಕದಲ್ಲಿ ಕುಳಿತಿದ್ದ ಅವನಿಗೆ ಚಾಮರಗಳನ್ನು ಅವನ ಸೇವಕರು ಬೀಸುತ್ತಿದ್ದ ಸಂದರ್ಭದಲ್ಲಿ ಚಾಮರಗಳ ಮಧ್ಯೆ ಆಗಾಗ ಮರೆಯಾಗಿ ಮತ್ತೆ ಕಾಣುತ್ತಿದ್ದ ಭರತನು ಚಲಿಸುವ ಮೋಡಗಳ ಮರೆಯಲ್ಲಿ ಮತ್ತೆ ಮತ್ತೆ ಇಣುಕಿ ಮರೆಯಾಗಿ ಮತ್ತೆ ಕಾಣಿಸಿಕೊಳ್ಳುವ ಚಂದಿರನಂತೆಯೂ , ಸೂರ್ಯನಂತೆಯೂ ಕಾಣುತ್ತಿದ್ದನು. ಕಮಲಗಳು ಸೂರ್ಯನಿಗಾಗಿ ಹಂಬಲಿಸುವಂತೆ , ನೈದಿಲೆಗಳು ಚಂದಿರನಿಗಾಗಿ ಕಾಯುವಂತೆ ಅಲ್ಲಿ ನೆರೆದಿದ್ದ ಜನರಲ್ಲಿ ರಾಜನನ್ನು ಕಾಣುವ ಅಪೇಕ್ಷೆ ಮಹತ್ತರವಾದುದಾಗಿತ್ತು.

ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿ.

೧. "ಕನ್ನಡದೊಳಗೊಂದು ಕಥೆಯ ಪೇಳುವೆನು ."

ಈ ಮೇಲಿನ ವಾಕ್ಯವನ್ನು ತ.ಸು.ಶಾಮರಾವ್ ಸಂಪಾದಿಸಿದ ರತ್ನಾಕರವರ್ಣಿ ಬರೆದಿರುವ ಭರತೇಶ ವೈಭವ ಕಾವ್ಯದಿಂದ ಆರಿಸಲಾದ ಸಿರಿಯನಿನ್ನೇನ ಬಣ್ಣಿಪೆನು ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ: ಧ್ಯಾನ ಮಾಡಿ ಬೇಸರವಾದ ಸಂದರ್ಭದಲ್ಲಿ ಕವಿಯು ಕನ್ನಡದಲ್ಲಿ ಒಂದು ಕಥೆಯನ್ನು ಹೇಳಲು (ರಚಿಸಲು ) ಅನುಮತಿಯನ್ನು ಕೊಡುವಂತೆ ಗುರುವನ್ನು ವಿನಂತಿಸಿಕೊಂಡಿದ್ದಾರೆ.

ಸ್ವಾರಸ್ಯ : ಕನ್ನಡದಲ್ಲಿ ಕೃತಿ ರಚಿಸಬೇಕೆಂಬ ಕವಿಯ ಅಪೇಕ್ಷೆ ಇಲ್ಲಿ ವ್ಯಕ್ತವಾಗಿದೆ.

೨."ಶ್ರೀ ವಿಲಾಸವನೇನೆಂಬೆ ?"

ಈ ಮೇಲಿನ ವಾಕ್ಯವನ್ನು ತ.ಸು.ಶಾಮರಾವ್ ಸಂಪಾದಿಸಿದ ರತ್ನಾಕರವರ್ಣಿ ಬರೆದಿರುವ ಭರತೇಶ ವೈಭವ ಕಾವ್ಯದಿಂದ ಆರಿಸಲಾದ ಸಿರಿಯನಿನ್ನೇನ ಬಣ್ಣಿಪೆನು ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಭರತ ಚಕ್ರೇಶ್ವರನು ಉದಯ ಕಾಲದಲ್ಲಿಯೇ ಎದ್ದು ದೇವತಾರ್ಚನೆಯನ್ನು ಮಾಡಿ ಓಲಗವನ್ನು ನಡೆಸುವ ರೀತಿಯನ್ನು , ಆ ವೈಭವವನ್ನು ಏನೆಂದು ವರ್ಣಿಸಲಿ ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಭರತ ಚಕ್ರವರ್ತಿಯ ಆಡಳಿತ ನಡೆಸುವ ರೀತಿ ವರ್ಣನೆಗೆ ನಿಲುಕದ್ದು ಎಂಬುದು ಕವಿಯ ಅಭಿಪ್ರಾಯವಾಗಿದೆ

೩. " ಚಂದಿರನೋ ಭಾಸ್ಕರನೋಯೆಂಬಂತೆ "

ಈ ಮೇಲಿನ ವಾಕ್ಯವನ್ನು ತ.ಸು.ಶಾಮರಾವ್ ಸಂಪಾದಿಸಿದ ರತ್ನಾಕರವರ್ಣಿ ಬರೆದಿರುವ ಭರತೇಶ ವೈಭವ ಕಾವ್ಯದಿಂದ ಆರಿಸಲಾದ ಸಿರಿಯನಿನ್ನೇನ ಬಣ್ಣಿಪೆನು ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ವಿವಿಧ ಚಾಮರಗಳ ಸಾಲಿನಲ್ಲಿ ಹೊಳೆಯುತ್ತಿದ್ದ ಭರತ ಚಕ್ರೇಶ್ವರನು ಚಲಿಸುವ ಬಿಳಿಯ ಮುಗಿಲಿನಲ್ಲಿ ಆಗಾಗ ಕಾಣಿಸಿಕೊಳ್ಳುವ ಚಂದಿರನೋ ಭಾಸ್ಕರನೋ ಎಂಬಂತೆ ಶೋಭಿಸುತ್ತಿದ್ದನು.

ಸ್ವಾರಸ್ಯ : ಭರತ ಚಕ್ರೇಶ್ವರನ ಸೊಬಗನ್ನು ವರ್ಣಿಸಲು ಕವಿ ಮೇಲಿನಂತೆ ಹೇಳಿದ್ದಾರೆ.

ಮೊದಲಿನ ಎರಡು ಪದಗಳ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

೧. ಬಿನ್ನಹ : ಅರಿಕೆ : : ವಿಭು : ……… (ದೊರೆ)

೨. ಪೊಗಳು : ತೆಗಳು : : ಕಾರ್ಮುಗಿಲ್ : …….. (ಬೆಳ್ಮುಗಿಲ್ )

೩.ಭರತ : ಅಯೋಧ್ಯೆ: : ಬಾಹುಬಲಿ : …… (ಪೌದನಪುರ )

೪. ನೀಲಾಂಬುಜ : ನೀಲ +ಅಂಬುಜ : : ಚಕ್ರೇಶ್ವರ : ----- (ಚಕ್ರ +ಈಶ್ವರ )

## ಪದ್ಯ ಪಾಠ -೪ ನಿಯತಿಯನಾರ್ ಮೀರಿದಪರ್ -ಜನ್ನ

### ಕೃತಿಕಾರರ ಪರಿಚಯ



**ಜನ್ನ ಹಾಸನ ಜಿಲ್ಲೆಯ ಹಳೇಬೀಡು ಪ್ರಾಂತ್ಯದ ಕವಿ. ಇವನ ಕಾಲ ಕ್ರಿ.ಶ.೧೨೨೫ .ಇವನು ಯಶೋಧರ ಚರಿತೆ, ಅನಂತನಾಥಪುರಾಣ ಮತ್ತು ಅನುಭವ ಮುಕುರ ಎನ್ನುವ ಕಾವ್ಯಗಳನ್ನು ರಚಿಸಿದ್ದಾನೆ. ಇವನು ಹೊಯ್ಸಳರ ದೊರೆ ಬಲ್ಲಾಳನಿಂದ ಕವಿಚಕ್ರವರ್ತಿ ಎಂಬ ಅಭಿದಾನವನ್ನು ಪಡೆದಿದ್ದನು.**

**ಪ್ರಸ್ತುತ ಪದ್ಯ ಭಾಗವನ್ನು ಈತನ 'ಯಶೋಧರ ಚರಿತೆ 'ಎನ್ನುವ ಕಾವ್ಯದಿಂದ ಆರಿಸಲಾಗಿದೆ.**

**ಪೂರ್ವಕಥೆ**

**ಉಜ್ಜಯನಿಯ ಯಶೌಘ ಮತ್ತು ಚಂದ್ರಮತಿಯ ಮಗನಾದ ಯಶೋಧರನು ಪತ್ನಿ ಅಮೃತಮತಿಯೊಡನೆ ಸುಖವಾಗಿ ರಾಜ್ಯಭಾರ ನಡೆಸುತ್ತಿದ್ದ ಸಂದರ್ಭದಲ್ಲಿಯೇ ರಾಣಿ ಅಮೃತಮತಿಯು ತನ್ನ ಅರಮನೆಯ ಗಜಶಾಲೆಯ ಮಾವಟಿಗ ಅಷ್ಟವಂಕನ ಗಾನ ಮಾಧುರ್ಯಕ್ಕೆ ಮನಸೋತು ,ಅವನೊಂದಿಗೆ ಒಡನಾಟ ಬೆಳಸಿ ತನ್ನ ಗಂಡ ಯಶೋಧರನಿಂದ ಕ್ರಮಕ್ರಮವಾಗಿ ದೂರವಾಗುತ್ತಾಳೆ. ಇದನ್ನು ತಿಳಿದ ಯಶೋಧರನು ಅವರಿಬ್ಬರನ್ನೂ ಕೊಲ್ಲಬಯಸಿದರೂ ಕೊಲ್ಲದೆ ಕದಡಿದ ಮನಸ್ಸಿನವನಾಗಿರಲು ಅವನ ತಾಯಿ ಚಂದ್ರಮತಿ ವಿಚಾರಿಸುತ್ತಾಳೆ. ರಾಜನು ನಡೆದ ವಿಚಾರವನ್ನು ತಾಯಿಯೊಂದಿಗೆ ಕನಸಿನ ರೂಪದಲ್ಲಿ ವಿವರಿಸಿದಾಗ ತಾಯಿಯು ಶಾಂತಿಗಾಗಿ ಪ್ರಾಣಿಬಲಿ ಕೊಡಲ ಸಲಹೆ ನೀಡುತ್ತಾಳೆ. ಕೊನೆಗೆ ಅವರು ಹಿಟ್ಟಿನ ಕೋಳಿಯನ್ನು ಬಲಿಕೊಡುತ್ತಿದ್ದಾಗ ಅದರಲ್ಲಿ ಸೇರಿದ್ದ ಬೆಂತರವೊಂದು ಕೋಳಿಯಂತೆ ಕೂಗುತ್ತದೆ. ದಿಗಿಲಾದ ದೊರೆಯು ತನ್ನ ಮಗನಾದ ಯಶೋಮತಿಗೆ ಪಟ್ಟ ಕಟ್ಟಿ ತಪಸ್ಸಿಗೆ ಹೊರಡಲು ಸಿದ್ಧನಾಗುತ್ತಾನೆ.ಅದನ್ನು ತಿಳಿದ ಅಮೃತಮತಿ ಅವರಿಬ್ಬರನ್ನೂ ವಿಷವಿಕ್ಕಿ ಕೊಲ್ಲುತ್ತಾಳೆ. ತದನಂತರದಲ್ಲಿ ಯಶೋಧರ ಮತ್ತು ಚಂದ್ರಮತಿಯರು ಹಲವು ಸಲ ಜನ್ಮವೆತ್ತಿ ಕೊನೆಯಲ್ಲಿ ಯಶೋಮತಿಗೆ ಅಭಯರುಚಿ ಅಭಯಮತಿಗಳೆಂಬ ಅವಳಿ ಮಕ್ಕಳಾಗಿ ಜನಿಸುತ್ತಾರೆ. ಎಳವೆಯಲ್ಲೇ ದೀಕ್ಷೆ ವಹಿಸಿ ಅವರಿಬ್ಬರೂ ಸುದತ್ತಾಚಾರ್ಯ ಮುನಿಗಳ ಶಿಷ್ಯರಾಗುತ್ತಾರೆ. ಅಯೋಧ್ಯಾ ದೇಶದ ರಾಜಪುರದ ರಾಜ ವಸಂತಕಾಲದಲ್ಲಿ ನಡೆಯುತ್ತಿದ್ದ ಜಾತ್ರೆಯಲ್ಲಿ ಚಂಡಮಾರಿ ದೇವತೆಗೆ ಬಲಿಕೊಡಲು ನರರನ್ನು ಕರೆತರಲೆಂದು ತನ್ನ ತಳಾರ ಚಂಡಕರ್ಮನಿಗೆ ಅಪ್ಪಣೆಯಿತ್ತಾಗ ಸುದತ್ತಾಚಾರ್ಯರ ಸಲಹೆಯೆಂತೆ ಭಿಕ್ಷೆಗೆ ಬರುತ್ತಿದ್ದ ಅಭಯರುಚಿ ಅಭಯಮತಿಯರು ಚಂಡಕರ್ಮನಿಗೆ ಸಿಗಲಾಗಿ ಅವರಿಬ್ಬರನ್ನೂ ಅವನು ಹಿಡಿದು ಚಂಡಮಾರಿಗೆ ಬಲಿಕೊಡಲು ಮಾರಿದತ್ತನ ಬಳಿ ಕರೆತರುತ್ತಾನೆ.**

**ಆ ಸಂದರ್ಭದ ವಿವರಣೆ ಪ್ರಸ್ತುತ ಪದ್ಯಭಾಗದಲ್ಲಿ ಬಿಂಬಿತವಾಗಿದೆ.**

**ಪದ್ಯದ ಹೊಸಗನ್ನಡ ರೂಪ**

**ಸಿಸಿರಮನೆ ಪಿಡಿದು ಪರಕೆಗೆ**
**ವಸಂತನಲವೋ್ರದ ಮಾವಿನಡಿಮಂಚಿಕೆಯೊಳ್**
**ಕುಸುರಿದರಿದಡಗಿನಂತೆವೊ**
**ಲೆಸೆದುವು ತದ್ವನದೊಳುದಿರ್ದ ಮುತ್ತದ ಮುಗುಳ್ಗಳ್ ||೧||**

ದೇವಿಗೆ ಹರಕೆಯೊಪ್ಪಿಸುವುದಕ್ಕಾಗಿ ಶಿಶಿರವನ್ನೇ ಹಿಡಿದು ಹೂ ಬಿಟ್ಟ ಮಾವಿನ ಮರದ ಅಡಿ ಮಂಚಿಕೆಯಲ್ಲಿ ಅವನನ್ನು ಕೊಚ್ಚಿ ಕೊಚ್ಚಿ ಕತ್ತರಿಸಿ ಹಾಕಿದ ಮಾಂಸದ ರಾಶಿಯೆಂಬಂತೆ ಆ ವನದಲ್ಲಿ ಉದುರಿಬಿದ್ದ ಮುತ್ತುಗದ ಮೊಗ್ಗೆಗಳು ಕೆಂಪಾಗಿ ತೋರುತ್ತಿದ್ದವು.

ಮಾರಿ ಮಲಯಾನಿಳಂ ನವ
ನೀರಜವನಮೆಂಬ ಕೆಂಡದೊಳ್ ದಂಡನಮ
ಸ್ಕಾರ್ರದೆ ಬಂದಪನಿತ್ತವ
ಧಾರಿಪುದೆಂಬಂತಿರುಲಿದುವರಗಿಳಿ ಬನದೊಳ್ ||೨||
ವನದಲ್ಲಿ ಅರಗಿಳಿಗಳು ಗಟ್ಟಿಯಾಗಿ ಉಲಿಯುತ್ತಿದ್ದವು. “ಎಲೆ ಮಾರಿ ದೇವತೆಯೇ ,ಮಲಯ ಮಾರುತನು ಹೊಸ ತಾವರೆಗಳ ಸಮೂಹವೆಂಬ ಕೆಂಡದಲ್ಲಿ ದೀರ್ಘದಂಡ ನಮಸ್ಕಾರ ಮಾಡುತ್ತಾ ಬರುತ್ತಿದ್ದಾನೆ. ಈ ಕಡೆ ಗಮನವಿಡು.

ಅಂತು ದೊರೆವೆತ್ತು ಬಂದ ವ
ಸಂತದೊಳಾ ಮಾರಿದತ್ತನುಂ ಪುರಜನಮಂ
ತಂತಮಗೆ ಚಂಡಮಾರಿಗೆ
ಸಂತಸಮಂ ಮಾಡಲೆಂದು ಜಾತ್ರೆಗೆ ನೆರೆದರ್ ||೩||
ಆ ರೀತಿಯಲ್ಲಿ ಒದಗಿಬಂದ ವಸಂತಕಾಲದಲ್ಲಿ ಮಾರಿದತ್ತ ರಾಜನೂ ನಗರದ ಜನರೂ ಎಲ್ಲರೂ ಒಂದಾಗಿ ಚಂಡಮಾರಿದೇವತೆಗೆ ಸಂತೋಷವಾಗುವಂತೆ ಜಾತ್ರೆಯನ್ನು ನೆರವೇರಿಸಲು ಅಲ್ಲಿ ಸೇರಿದರು.

ನಿಂದು ನರಪತಿ ತಳಾರಂ
ಗಂದು ನೀನ್ ಬರಿಸು ಮನುಜಯುಗಮಂ ಮುನ್ನಂ
ಕೊಂದರ್ಚಿಸುವೆಂ ಪೂಜೆಯೊ
ಳೆಂದಿನ ಪರಿ ತಪ್ಪೆ ದೇವಿ ತಪ್ಪದೆ ಮಾಣಳ್ ||೪||
ತನ್ನ ತಳಾರನನ್ನು ಕರೆದು , ನೀನು ಈಗಲೇ ಮನುಷ್ಯ ಯುಗ್ಮವನ್ನು ಭರಿಸು . ಎಂದಿನಂತೆ ಮೊದಲು ನಾನೇ ಅವರನ್ನು ಬಲಿಕೊಟ್ಟು ಅರ್ಚಿಸಬೇಕಾಗಿದೆ. ಪದ್ಧತಿ ಪ್ರಕಾರ ನಡೆದುಕೊಳ್ಳದಿದ್ದರೆ ದೇವಿಗೆ ಸಿಟ್ಟಾದೀತು .ಪರಿಣಾಮವಾಗಿ ಅವಳೂ ನಮ್ಮ ವಿಷಯದಲ್ಲಿ ತಪ್ಪಿನಡೆಯದಿರಲಾರಳು , ಆದುದರಿಂದ ತ್ವರೆ ಮಾಡು ಎಂದು ಮಾರಿದತ್ತನು ಚಂಡಕರ್ಮನಿಗೆ ಹೇಳಿದನು.

ತಡವಾದಪ್ಪುದು ಪೌರರ್
ಕುಡವೇಳ್ಪುದು ಪಲವು ಜೀವರಾಶಿಯಂ ಬಲಿಯಂ
ನಡೆಯನೆ ಹಸಾದಮಾಗಳೆ
ಪಿಡಿತಾರದೆ ಮಾಣರೆನ್ನ ಕಿಂಕರರೆನುತುಂ ||೫||
ಉಳಿದ ನಾಗರಿಕರೆಲ್ಲರೂ ಅನೇಕಾನೇಕ ಜೀವರಾಶಿಯ ಬಲಿಯನ್ನು ಕೊಡಲಿದ್ದಾರೆ, ತಡಮಾಡದಿರು ಎಂದು ಮಾರಿದತ್ತನು ಅಪ್ಪಣೆಯಿತ್ತನು. ತಳಾರ ಚಂಡಕರ್ಮನು ಅಪ್ಪಣೆ ಎಂದು ಉತ್ತರವನ್ನೇನೋ ಕೊಟ್ಟನು. ಒಡನೆಯೇ ತನ್ನ ಕಿಂಕರರು ಈಗಾಗಲೇ ಬಲಿಪಶುಗಳನ್ನು ತಂದಿರಲೇ ಬೇಕು ಎಂದು ಭಾವಿಸಿ

ಕಿರುವರೆಯದ ಶುಭಲಕ್ಷಣ
ದರಕೆಯ ಸತ್ಕುಲದ ಮರ್ತ್ಯಯುಗಲಕಮಂ ತಾ
ನರಸಲ್ ಬಳರಿಯ ಬನದಿಂ
ಪೊರಮಟ್ಟಂ ಚಂಡಕರ್ಮನೆಂಬ ತಳಾರಂ ||೬||

ಎಳೆಯ ವಯಸ್ಸಿನ ,ಶುಭಲಕ್ಷಣವುಳ್ಳ ಬುದ್ಧಿವಂತರಾದ ಒಳ್ಳೆಯ ವಂಶದಲ್ಲಿ ಹುಟ್ಟಿದ ಮಾನವ ಜೋಡಿಯನ್ನು ಹುಡುಕುತ್ತಾ ಆ ಮಾರಿಯ ಬನದಿಂದ ಹೊರಟನು.

ಮುನಿಸಮುದಾಯಸಮೇತಂ
ವಿನೇಯಜನವನಜವನದಿವಾಕರನಂತಾ
ಮುನಿಪನುಪವಾಸಮಂ ಪ
ರ್ವನಿಮಿತ್ತಂ ಕಳೆದು ಬಳಿಕ ಬಾಲಕಯುಗಮಂ ||೭||

ತಾವರೆಗಳನ್ನರಳಿಸುವ ಸೂರ್ಯನಂತೆ ಸುದತ್ತಾಚಾರ್ಯರು ಶಿಷ್ಯ ವೃಂದದ ವಿಕಾಸಕ್ಕೆ ಕಾರಣವಾಗಿದ್ದರು. ಅವರು ಈ ಮುನಿಗಳ ಸಮುದಾಯವನ್ನು ಕೂಡಿಕೊಂಡು ,ವ್ರತದ ಅಂಗವಾಗಿ ಉಪವಾಸವನ್ನು ಮಾಡಿದರು. ಅನಂತರ ಇಬ್ಬರು ಮಕ್ಕಳನ್ನು ಕರೆದು ಭಿಕ್ಷೆಯೆತ್ತಿ ತರುವಂತೆ ಕಳುಹಿಸಿಕೊಟ್ಟರು.

ಚರಿಗೆಗೆ ಬೀಳ್ಕೊಡೆ ಗುರುಗಳ
ಚರಣಕ್ಕಾ ಯುಗಳಮೆರಗಿ ಪೊರಮಟ್ಟಾಗಳ್
ತರುಣವನಹರಿಣಯುಗಮಂ
ತರಕ್ಷು ಪಿಡಿವಂತೆ ಚಂಡಕರ್ಮಂ ಪಿಡಿದಂ ||೮||

ಆ ಬಾಲಕರು ಗುರುಗಳ ಪಾದಕ್ಕೆ ನಮಸ್ಕರಿಸಿ ಅಲ್ಲಿಂದ ಹೊರಟರು. ಅಷ್ಟರಲ್ಲೇ ಎರಡು ಎಳೆಯ ಜಿಂಕೆ ಮರಿಗಳನ್ನು ಹುಲಿಯು ಹಿಡಿಯುವಂತೆ ,ಅವರನ್ನು ಚಂಡಕರ್ಮನು ಹಿಡಿದನು.

ಅಭಯರುಚಿಯಭಯಮತಿಯಿಂ
ಬುಭಯಮನಾ ಪಾಪಕರ್ಮನುಯ್ವೆಡೆಯೊಳ್ ಮ
ತ್ತಭಯರುಚಿ ತಂಗೆಗೆಂದಪ
ನಭೀತೆಯಾಗೆಲಗೆ ತಾಯೆ ಮರಣದ ದೆಸೆಯೊಳ್ ||೯||

ಅಭಯರುಚಿ ಮತ್ತು ಅಭಯಮತಿ ಎಂಬ ಆ ಇಬ್ಬರು ಮಕ್ಕಳನ್ನು ಪಾಪ ಕಾರ್ಯ ಪ್ರವೃತ್ತನಾದ ಚಂಡಕರ್ಮನು ಹಿಡಿದೊಯ್ಯತೊಡಗಿದನು. ಇಬ್ಬರಿಗೂ ಆತನ ಉದ್ದೇಶದ ಅರಿವಾಯಿತು. ಅಭಯರುಚಿ ತನ್ನ ತಂಗಿಯೊಡನೆ "ಎಲೆ ತಂಗಿ ,ನಮಗೆ ಮೃತ್ಯುವೇ ಸನ್ನಿಹಿತವಾಗಿದೆಯೆಂದು ಹೆದರಿಕೊಳ್ಳಬೇಡ ಎಂದು ಮಾತಿಗಾರಂಭಿಸಿದನು.

ನಿಯತಿಯನಾರ್ ಮೀರಿದಪರ್
ಭಯಮೇವುದೋ ಮುಟ್ಟಿದೆಡೆಗೆ ಸೈರಿಸುವುದೆ ಕೇಳ್
ನಯವಿದೆ ಪೆತ್ತ ಪರೀಷಹ
ಜಯಮೆ ತಪಂ ತಪಕೆ ಬೇರೆ ಕೊಡೆರಡೊಳವೇ ||೧೦||

“ವಿಧಿ ನಿಯಮವನ್ನು ಮೀರುವವರು ಯಾರಿದ್ದಾರೆ ? ಅದಕ್ಕಾಗಿ ಅಂಜಿದರೆ ಪ್ರಯೋಜನವಾದರೂ ಏನಿದೆ ?ಏನಾದರೂ ಸಂಗಟಿಸಿತೆಂದಾದರೆ ಅದನ್ನು ಸಹಿಸಿಕೊಳ್ಳುವುದೇ ನ್ಯಾಯವಾದ ದಾರಿ .ಒದಗಿ ಬರುವ ಪರೀಕ್ಷಹಗಳನ್ನು ಜಯಿಸುವುದನ್ನೇ ತಪಸ್ಸು ಎಂಬ ಹೆಸರಿನಿಂದ ಕರೆಯುತ್ತಾರೆ. ತಪಸ್ಸಿಗೆ ಬೇರೆ ಎರಡು ಕೋಡುಗಳಿವೆಯೇ ? ಎಂದು ಅಭಯರುಚಿಯು ಅಭಯಮತಿಗೆ ಧೈರ್ಯವಿತ್ತನು.

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

೧. ಮುತ್ತುಗದ ಹೂವುಗಳು ಎಲ್ಲಿ ಉದುರಿ ಬಿದ್ದಿದ್ದವು ?

ಉ: ಮುತ್ತುಗದ ಹೂವುಗಳು ವನದಲ್ಲಿ ಮಾವಿನ ಮರದಡಿಯಲ್ಲಿ ಉದುರಿಬಿದ್ದಿದ್ದವು .

೨. ವನದಲ್ಲಿ ಅರಗಿಳಿಗಳು ಏನೆಂದು ಉಲಿಯುತ್ತಿದ್ದವು ?

ಉ: “ಎಲೆ ಮಾರಿ ದೇವತೆಯೇ ,ಮಲಯ ಮಾರುತನು ಹೊಸ ತಾವರೆಗಳ ಸಮೂಹವೆಂಬ ಕೆಂಡದಲ್ಲಿ ದೀರ್ಘದಂಡ ನಮಸ್ಕಾರ ಮಾಡುತ್ತಾ ಬರುತ್ತಿದ್ದಾನೆ. ಈ ಕಡೆ ಗಮನವಿಡು ಎಂದು ವನದಲ್ಲಿ ಅರಗಿಳಿಗಳು ಉಲಿಯುತ್ತಿದ್ದವು .

೩. ಯಾವ ದೇವತೆಯ ಹೆಸರಿನಲ್ಲಿ ಜಾತ್ರೆಯು ನಡೆಯುತ್ತಿತ್ತು ?

ಉ: ಚಂಡಮಾರಿ ದೇವತೆಯ ಹೆಸರಿನಲ್ಲಿ ಜಾತ್ರೆಯು ನಡೆಯುತ್ತಿತ್ತು.

೪. ಮಾರಿದತ್ತನ ಬಳಿಯಿದ್ದ ತಳಾರನ ಹೆಸರೇನು ?

ಉ: ಮಾರಿದತ್ತನ ಬಳಿಯಿದ್ದ ತಳಾರನ ಹೆಸರು ಚಂಡಕರ್ಮ

೫. ಚಂಡಕರ್ಮನು ಯಾರನ್ನು ಹಿಡಿದು ತಂದನು ?

ಉ: ಚಂಡಕರ್ಮನು ಸುದತ್ತಾಚಾರ್ಯರಲ್ಲಿ ಶಿಷ್ಯರಾಗಿ ಅವರ ಸಲಹೆಯಂತೆ ಭಿಕ್ಷೆಗೆ ಬರುತ್ತಿದ್ದ ಅಭಯರುಚಿ ಮತ್ತು ಅಭಯಮತಿಯರನ್ನು ಹಿಡಿದು ತಂದನು .

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .**

೧. ಮಾವಿನ ಮರದಡಿಯಲ್ಲಿ ಉದುರಿದ್ದ ಮುತ್ತುಗದ ಹೂವುಗಳು ಹೇಗೆ ಕಾಣುತ್ತಿದ್ದವು ?

ಉ: ದೇವಿಗೆ ಹರಕೆಯೊಪ್ಪಿಸುವುದಕ್ಕಾಗಿ ಶಿಶಿರವನ್ನೇ ಹಿಡಿದು ಹೂ ಬಿಟ್ಟ ಮಾವಿನ ಮರದ ಅಡಿ ಮಂಚಿಕೆಯಲ್ಲಿ ಅವನನ್ನು ಕೊಚ್ಚಿ ಕೊಚ್ಚಿ ಕತ್ತರಿಸಿ ಹಾಕಿದ ಮಾಂಸದ ರಾಶಿಯೆಂಬಂತೆ ಆ ವನದಲ್ಲಿ ಉದುರಿಬಿದ್ದ ಮುತ್ತುಗದ ಮೊಗ್ಗೆಗಳು ಕೆಂಪಾಗಿ ತೋರುತ್ತಿದ್ದವು.

೨. ಮಾರಿದತ್ತ ಹಾಗೂ ಜನರು ಏಕೆ ಒಂದೆಡೆ ಸೇರಿದ್ದರು ?

ಉ:ಮಾರಿದತ್ತ ರಾಜನು ಆಳುತ್ತಿದ್ದ ರಾಜಪುರ ಪಟ್ಟಣದಲ್ಲಿ ಚಂಡಮಾರಿಯ ದೇವಾಲಯವಿತ್ತು.ಆಶ್ವಯುಜ ಮತ್ತು ಚೈತ್ರ ಋತುಗಳಲ್ಲಿ ದೊರೆ ಮತ್ತು ಪ್ರಜೆಗಳು ಜಾತ್ರೆ ನಡೆಸಿ ,ದೇವಿಯನ್ನು ಆರಾಧಿಸುತ್ತಿದ್ದರು. ಒಮ್ಮೆ ಚೈತ್ರ ಮಾಸದಲ್ಲಿ ಜಾತ್ರೆ ನಡೆಯಬೇಕಿತ್ತು.ಒದಗಿಬಂದ ವಸಂತಕಾಲದಲ್ಲಿ ಮಾರಿದತ್ತ ರಾಜನೂ ನಗರದ ಜನರೂ ಎಲ್ಲರೂ ಒಂದಾಗಿ ಚಂಡಮಾರಿದೇವತೆಗೆ ಸಂತೋಷವಾಗುವಂತೆ ಜಾತ್ರೆಯನ್ನು ನೆರವೇರಿಸಲು ಅಲ್ಲಿ ಸೇರಿದರು.

**೩. ಚಂಡಕರ್ಮನು ಎಂತಹ ಬಲಿಯನ್ನು ಹುಡುಕಿ ಹೊರಟನು ?**

**ಉ: ಒದಗಿ ಬಂದ ಚೈತ್ರ ಮಾಸದಲ್ಲಿ ಮಾರಿದತ್ತ ರಾಜನೂ ಅವನ ಪ್ರಜೆಗಳೂ ಸೇರಿ ಚಂಡಮಾರಿ ದೇವತೆಗೆ ಸಂತೋಷವಾಗುವಂತೆ ಜಾತ್ರೆ ನಡೆಸಲು ಸೇರಿದರು. ಮಾರಿಗೆ ಬಲಿಕೊಡುವುದಕ್ಕಾಗಿ ಮಾನವರನ್ನು ಹಿಡಿದು ತರುವಂತೆ ಮಾರಿದತ್ತನು ತಳಾರ ಚಂಡಕರ್ಮನಿಗೆ ಆಜ್ಞಾಪಿಸಿದನು. ಆಗ ಚಂಡಕರ್ಮನು ಎಳೆಯ ವಯಸ್ಸಿನ ,ಶುಭಲಕ್ಷಣವುಳ್ಳ ಬುದ್ಧಿವಂತರಾದ ಒಳ್ಳೆಯ ಯ ವಂಶದಲ್ಲಿ ಹುಟ್ಟಿದ ಮಾನವ ಜೋಡಿಯನ್ನು ಹುಡುಕುತ್ತಾ ಆ ಮಾರಿಯ ಬನದಿಂದ ಹೊರಟನು.**

**೪. ಅಭಯರುಚಿಯು ಅಭಯಮತಿಗೆ ಏನೆಂದು ಧೈರ್ಯವನ್ನು ಹೇಳಿದನು ?**

**ಚಂಡಕರ್ಮನು ಭಿಕ್ಷೆಗೆ ಹೊರಟಿದ್ದ ಅಭಯರುಚಿ ಅಭಯಮತಿಯರನ್ನು ಮಾರಿಗೆ ಬಲಿಕೊಡಲು ಕರೆದುಕೊಂಡು ಹೊರಟಾಗ ಎಲೆ ತಂಗಿ ,ನಮಗೆ ಮೃತ್ಯುವೇ ಸನ್ನಿಹಿತವಾಗಿದೆಯೆಂದು ಹೆದರಿಕೊಳ್ಳಬೇಡ ,ವಿಧಿ ನಿಯಮವನ್ನು ಮೀರುವವರು ಯಾರಿದ್ದಾರೆ ? ಅದಕ್ಕಾಗಿ ಅಂಜಿದರೆ ಪ್ರಯೋಜನವಾದರೂ ಏನಿದೆ ?ಏನಾದರೂ ಸಂಗಟಿಸಿತೆಂದಾದರೆ ಅದನ್ನು ಸಹಿಸಿಕೊಳ್ಳವುದೇ ನ್ಯಾಯವಾದ ದಾರಿ .ಒದಗಿ ಬರುವ ಪರೀಷಹಗಳನ್ನು ಜಯಿಸುವುದನ್ನೇ ತಪಸ್ಸು ಎಂಬ ಹೆಸರಿನಿಂದ ಕರೆಯುತ್ತಾರೆ. ತಪಸ್ಸಿಗೆ ಬೇರೆ ಎರಡು ಕೋಡುಗಳಿವೆಯೇ ? ಎಂದು ಅಭಯರುಚಿಯು ಅಭಯಮತಿಗೆ ಧೈರ್ಯವಿತ್ತನು.**

**<u>ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.</u>**

**ನಿಯತಿಯನಾರ್ ಮೀರಿದಪರ್ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಉ: ಜನ್ನ ಕವಿಯ ಯಶೋಧರ ಚರಿತೆಯಿಂದ ಪ್ರಸ್ತುತ ಪದ್ಯಭಾಗವನ್ನು ಆಯ್ದುಕೊಳ್ಳಲಾಗಿದೆ. ರಾಜಪುರ ಪಟ್ಟಣವನ್ನು ಮಾರಿದತ್ತ ರಾಜನು ಆಳುತ್ತಿದ್ದನು. ಅವನು ತನ್ನ ಪಟ್ಟಣದಲ್ಲಿರುವ ಚಂಡಮಾರಿ ದೇವತೆಗೆ ಆಶ್ವೀಜ ಮತ್ತು ಚೈತ್ರ ಮಾಸಗಳಲ್ಲಿ ಜಾತ್ರೆ ನಡೆಸುತ್ತಿದ್ದನು. ಹಾಗೆಯೇ ಒಂದು ವಸಂತಕಾಲದ ಆಗಮನವಾಗಿ ಮಾರಿಯ ಬನದಲ್ಲಿ ಮಾವಿನ ಮರಗಳು ಚಿಗುರಿ ನಿಂತಿದ್ದವು. ಗಿಳಿಗಳು ಉಲಿಯುತ್ತಿದ್ದವು. ಮಾರಿದತ್ತ ರಾಜನು ಪ್ರಜೆಗಳೊಂದಿಗೆ ಸೇರಿ ಜಾತ್ರೆಯ ವಿಚಾರವಾಗಿ ತನ್ನ ತಳಾರನಾದ ಚಂಡಕರ್ಮನಿಗೆ ದೇವಿಗೆ ನರಬಲಿಯನ್ನು ಕೊಡಲೇಬೇಕು. ನಿಯಮ ತಪ್ಪಿಸಿದರೆ ದೇವಿ ಮುನಿಸಿಕೊಳ್ಳಬಹುದು ಎಂದು ಚಂಡಕರ್ಮನಿಗೆ ನರರನ್ನು ಹಿಡಿದು ತರುವಂತೆ ಆದೇಶಿಸಿದನು. ಆಗ ಚಂಡಕರ್ಮನು ಒಳ್ಳೆಯ ಎಳೆಯ ವಯಸ್ಸಿನ ,ಶುಭಲಕ್ಷಣವುಳ್ಳ ಬುದ್ಧಿವಂತರಾದ ಒಳ್ಳೆಯ ವಂಶದಲ್ಲಿ ಹುಟ್ಟಿದ ಮಾನವ ಜೋಡಿಯನ್ನು ಹುಡುಕುತ್ತಾ ಆ ಮಾರಿಯ ಬನದಿಂದ ಹೊರಟನು. ಆಗ ಅದೇ ವೇಳೆಯಲ್ಲಿ ಸುದತ್ತಾಚಾರ್ಯರಿಂದ ಭಿಕ್ಷೆಗೆ ಕಳಿಸಲ್ಪಟ್ಟ ಅವರ ಶಿಷ್ಯರಾದ ಅಭಯರುಚಿ ಅಭಯಮತಿಯರು ಬರುತ್ತಿದ್ದರು. ಅವರನ್ನು ಜಿಂಕೆಮರಿಗಳನ್ನು ಹಿಡಿಯುವ ಹುಲಿಯಂತೆ ಚಂಡಕರ್ಮನು ಹಿಡಿದನು. ಆಗ ಅಭಯರುಚಿಯು ತನ್ನ ಸಹೋದರಿಯನ್ನು ಸಮಾಧಾನಿಸಿದನು. ಬಂದುದಕ್ಕೆ ಭಯ ಪಡಬೇಡವೆಂದು ವಿಧಿಯ ನಿಯಮವನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ. ಒದಗಿ ಬಂದ ಪರೀಷಹಗಳನ್ನು ಜಯಿಸುವುದೇ ನಿವಾದ ತಪಸ್ಸು ಎಂದು ಸಮಾಧಾನ ಪಡಿಸಿ ಚಂಡಕರ್ಮನೊಡನೆ ಮಾರಿಗೆ ಬಲಿಯಾಗಲು ಮಾರಿದತ್ತ ರಾಜನ ಬಳಿ ಹೋಗುವ ಸಂದರ್ಭ ಪ್ರಸ್ತುತ ಪದ್ಯ ಭಾಗದಲ್ಲಿ ವರ್ಣಿತವಾಗಿದೆ.**

**ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

**೧. “ಪೂಜೆಯೊಳೆಂದಿನ ಪರಿ ತಪ್ಪೆ ದೇವಿ ತಪ್ಪದೆ ಮಾಣಳ್ ."**

ಉ: ಈ ಮೇಲಿನ ವಾಕ್ಯವನ್ನು ಜನ್ನನು ಬರೆದ ' ಯಶೋಧರ ಚರಿತೆ ' ಕಾವ್ಯದಿಂದ ಆರಿಸಲಾದ ನಿಯತಿಯನಾರ್ ಮೀರಿದಪರ್ ಪದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ : ರಾಜಪುರ ಪಟ್ಟಣದ ಮಾರಿದತ್ತನು ತನ್ನ ಪಟ್ಟಣದಲ್ಲಿರುವ ಚಂಡಮಾರಿದೇವತೆಗೆ ಆಶ್ವೀಜ ಮತ್ತು ಚೈತ್ರ ಮಾಸಗಳಲ್ಲಿ ಪ್ರಜೆಗಳೊಡನೆ ಸೇರಿ ಜಾತ್ರೆ ನಡೆಸುತ್ತಿದ್ದನು. ಅದೇ ರೀತಿ ಒಂದು ವಸಂತಕಾಲದಲ್ಲಿ ಜಾತ್ರೆ ನಡೆಸುವಾಗ ಮಾರಿಗೆ ನರ ಬಲಿ ಕೊಡಬೇಕಿತ್ತು. ಆಗ ಮಾರಿದತ್ತನು ತನ್ನ ತಳಾರನನ್ನು ಕರೆದು , ನೀನು ಈಗಲೇ ಮನುಷ್ಯ ಯುಗ್ಮವನ್ನು ಭರಿಸು . ಎಂದಿನಂತೆ ಮೊದಲು ನಾನೇ ಅವರನ್ನು ಬಲಿಕೊಟ್ಟು ಅರ್ಚಿಸಬೇಕಾಗಿದೆ. ಪದ್ಧತಿ ಪ್ರಕಾರ ನಡೆದುಕೊಳ್ಳದಿದ್ದರೆ ದೇವಿಗೆ ಸಿಟ್ಟಾದೀತು .ಪರಿಣಾಮವಾಗಿ ಅವಳೂ ನಮ್ಮ ವಿಷಯದಲ್ಲಿ ತಪ್ಪಿನಡೆಯದಿರಲಾರಳು , ಆದುದರಿಂದ ತ್ವರೆ ಮಾಡು ಎಂದು ಹೇಳಿದನು.

ಸ್ವಾರಸ್ಯ : ಪದ್ಧತಿಯಂತೆ ನರ ಬಲಿ ಕೊಡದಿದ್ದರೆ ದೇವಿ ಶಿಕ್ಷಿಸಬಹುದು ಎಂಬ ಮಾರಿದತ್ತನ ಆತಂಕ ಇಲ್ಲಿ ವ್ಯಕ್ತವಾಗಿದೆ ಅಲ್ಲದೇ ನರ ಬಲಿ ಕೊಟ್ಟು ಮಾರಿ ದೇವತೆಯನ್ನು ಸಂತೃಪ್ತಿ ಪಡಿಸಬೇಕೆಂಬ ಮೂಢನಂಬಿಕೆಯೂ ಇಲ್ಲಿ ವ್ಯಕ್ತವಾಗಿದೆ.

೨. " ತರಕ್ಷು ಪಿಡಿವಂತೆ ಚಂಡಕರ್ಮಂ ಪಿಡಿದಂ "

ಉ: ಈ ಮೇಲಿನ ವಾಕ್ಯವನ್ನು ಜನ್ನನು ಬರೆದ ' ಯಶೋಧರ ಚರಿತೆ ' ಕಾವ್ಯದಿಂದ ಆರಿಸಲಾದ ನಿಯತಿಯನಾರ್ ಮೀರಿದಪರ್ ಪದ್ಯ ಭಾಗದಿಂದ ಆರಿಸಲಾಗಿದೆ.

ಜಾತ್ರೆಯಲ್ಲಿ ಚಂಡಮಾರಿ ದೇವತೆಗೆ ಸಂಪ್ರದಾಯದಂತೆ ನರ ಬಲಿ ಕೊಡಬೇಕೆಂದು ಮಾರಿದತ್ತ ರಾಜನು ಸೇವಕನಾದ ಚಂಡಕರ್ಮನಿಗೆ ನರರನ್ನು ಹಿಡಿದು ತರಬೇಕೆಂದು ಆಜ್ಞಾಪಿಸಲು ಚಂಡಕರ್ಮನು ಬಲಿಯನ್ನು ಹುಡುಕಿ ಹೊರಟನು. ಎಳೆಯ ವಯಸ್ಸಿನ ,ಶುಭಲಕ್ಷಣವುಳ್ಳ ಬುದ್ಧಿವಂತರಾದ ಒಳ್ಳೆಯ ವಂಶದಲ್ಲಿ ಹುಟ್ಟಿದ ಮಾನವ ಜೋಡಿಯನ್ನು ಹುಡುಕುತ್ತಾ ಆ ಮಾರಿಯ ಬನದಿಂದ ಹೊರಟನು. ಅದೇ ವೇಳೆಯಲ್ಲಿ ಸುದತ್ತಾಚಾರ್ಯರು ತಮ್ಮ ಬಳಿ ಶಿಷ್ಯರಾಗಿದ್ದ ಅಭಯರುಚಿ ಅಭಯಮತಿಯರನ್ನು ಭಿಕ್ಷೆಗೆ ಕಳಿಸಿದ್ದರು.ಆ ಬಾಲಕರು ಗುರುಗಳ ಪಾದಕ್ಕೆ ನಮಸ್ಕರಿಸಿ ಅಲ್ಲಿಂದ ಹೊರಟರು. ಅಷ್ಟರಲ್ಲೇ ಎರಡು ಎಳೆಯ ಜಿಂಕೆ ಮರಿಗಳನ್ನು ಹುಲಿಯು ಹಿಡಿಯುವಂತೆ ,ಅವರನ್ನು ಚಂಡಕರ್ಮನು ಹಿಡಿದನು.

ಸ್ವಾರಸ್ಯ : ಎಳೆಯ ಮಕ್ಕಳನ್ನು ಮಾರಿಗೆ ಬಲಿ ಕೊಡಲು ಚಂಡಕರ್ಮನು ಹಿಡಿದೊಯ್ದುದನ್ನು ಕವಿ ಎಳೆಯ ಜಿಂಕೆಯ ಮರಿಗಳನ್ನು ಕ್ರೂರಿಯಾದ ಹುಲಿಯು ಹಿಡಿದುದಕ್ಕೆ ಹೋಲಿಸಿದ್ದಾರೆ .

೩. " ಅಭೀತೆಯಾಗೆಲಗೆ ತಾಯೆ ಮರಣದ ದೆಸೆಯೊಳ್ ."

ಉ: ಈ ಮೇಲಿನ ವಾಕ್ಯವನ್ನು ಜನ್ನನು ಬರೆದ ' ಯಶೋಧರ ಚರಿತೆ ' ಕಾವ್ಯದಿಂದ ಆರಿಸಲಾದ ನಿಯತಿಯನಾರ್ ಮೀರಿದಪರ್ ಪದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ : ಸುದತ್ತಾಚಾರ್ಯರು ಭಿಕ್ಷೆಗೆ ಕಳಿಸಲು ಅಭಯರುಚಿ ಅಭಯಮತಿಯರು ಅವರಾದೇಶದಂತೆ ಗುರುಗಳಿಗೆ ನಮಸ್ಕರಿಸಿ ಭಿಕ್ಷೆಗೆ ಹೊರಟರು. ಅದೇ ವೇಳೆಯಲ್ಲಿ ಚಂಡಮಾರಿ ದೇವತೆಗೆ ಬಲಿಕೊಡಲು ನರರನ್ನು ಹಿಡಿದು ತರಲು ಮಾರಿದತ್ತನು ಚಂಡಕರ್ಮನಿಗೆ ಆದೇಶಿಸಿದ್ದರಿಂದ ಎಳೆಯ ಮಕ್ಕಳನ್ನು ಹಿಡಿದು ತರಬೇಕೆಂದು ಚಂಡಕರ್ಮನು ಹೊರಟಿದ್ದನು. ದಾರಿಯಲ್ಲಿ ಸಿಕ್ಕ ಅಭಯರುಚಿ ಅಬಯಮತಿಯರನ್ನೇ ಚಂಡಕರ್ಮನು ಹಿಡಿದು ಹೊರಟಾಗ ಅಭಯರುಚಿಯು ಅಭಯಮತಿಗೆ ಭಯಭೀತೆ ಯಾಗಬೇಡ ಎಂದು ಮೇಲಿನಂತೆ ಸಮಾಧಾನಿಸಿದನು.

ಸ್ವಾರಸ್ಯ : ಚಂಡಕರ್ಮನು ತಮ್ಮನ್ನು ಹಿಡಿದೊಯ್ಯುವುದರ ಪರಿಣಾಮ ಅರಿತ ಅಭಯರುಚಿಯು ತನ್ನ ಸಹೋದರಿಯನ್ನು ಸಮಾಧಾನಿಸುವ ಸನ್ನಿವೇಶ ಇಲ್ಲಿ ವ್ಯಕ್ತವಾಗಿದೆ.

೪. “ ನಿಯತಿಯನಾರ್ ಮೀರಿದಪರ್ .”

ಉ: ಈ ಮೇಲಿನ ವಾಕ್ಯವನ್ನು ಜನ್ನನು ಬರೆದ ' ಯಶೋಧರ ಚರಿತೆ ' ಕಾವ್ಯದಿಂದ ಆರಿಸಲಾದ ನಿಯತಿಯನಾರ್ ಮೀರಿದಪರ್ ಪದ್ಯ ಭಾಗದಿಂದ ಆರಿಸಲಾಗಿದೆ.

ಸಂದರ್ಭ : ಚಂಡಮಾರಿ ದೇವತೆಗೆ ಬಲಿ ಕೊಡುವುದಕ್ಕಾಗಿ ನರರನ್ನು ಹಿಡಿದು ತರುವಂತೆ ಮಾರಿದತ್ತ ರಾಜನು ಚಂಡಕರ್ಮನಿಗೆ ಆದೇಶಿಸಿದಾಗ ಅವನು ಸುದತ್ತಾಚಾರ್ಯರ ಆದೇಶದಂತೆ ಭಿಕ್ಷೆಗೆ ಹೊರಟಿದ್ದ ಎಳೆಯ ಮಕ್ಕಳಾದ ಅಭಯರುಚಿ ಅಭಯಮತಿಯರನ್ನು ಹಿಡಿದು ಬಲಿಕೊಡಲು ಕರೆದೊಯ್ಯುತ್ತಿದ್ದನು. ಆಗ ಅಭಯರುಚಿಯು “ ವಿಧಿ ನಿಯಮವನ್ನು ಮೀರುವವರು ಯಾರಿದ್ದಾರೆ ? ಅದಕ್ಕಾಗಿ ಅಂಜಿದರೆ ಪ್ರಯೋಜನವಾದರೂ ಏನಿದೆ ?ಏನಾದರೂ ಸಂಗಟಿಸಿತೆಂದಾದರೆ ಅದನ್ನು ಸಹಿಸಿಕೊಳ್ಳವುದೇ ನ್ಯಾಯವಾದ ದಾರಿ .ಒದಗಿ ಬರುವ ಪರೀಷಹಗಳನ್ನು ಜಯಿಸುವುದನ್ನೇ ತಪಸ್ಸು ಎಂಬ ಹೆಸರಿನಿಂದ ಕರೆಯುತ್ತಾರೆ. ತಪಸ್ಸಿಗೆ ಬೇರೆ ಎರಡು ಕೋಡುಗಳಿವೆಯೇ ? ಎಂದು ಅಭಯಮತಿಗೆ ಧೈರ್ಯವಿತ್ತನು.

ಸ್ವಾರಸ್ಯ : ಬಂದದ್ದನ್ನು ಬಂದ ಹಾಗೆ ಎದುರಿಸಬೇಕೆಂಬ ಅಭಯರುಚಿಯ ಸ್ಥಿತಪ್ರಜ್ಞತೆ ,ಅಲ್ಲದೇ ಮಾರಿಗೆ ಬಲಿಕೊಡಬೇಕೆಂದು ಕರೆದೊಯ್ಯುತ್ತಿದ್ದರೂ ಹೆದರದ ಅಭಯರುಚಿಯ ಧೈರ್ಯವೂ ಇಲ್ಲಿ ವ್ಯಕ್ತವಾಗಿದೆ.

## ಭಾಷಾ ಚಟುವಟಿಕೆ

೧. ಮಾತ್ರೆಗಳಲ್ಲಿ ಎಷ್ಟು ವಿಧ ?ಅವು ಯಾವುವು ?

ಮಾತ್ರೆಗಳಲ್ಲಿ ಎರಡು ವಿಧ ಅವು ಲಘು ಮತ್ತು ಗುರು . (U ಮತ್ತು __ )

೨. ಲಘು ಮತ್ತು ಗುರು ಎಂದರೇನು ?

ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ ಲಘು .ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ ಗುರು.

೩. ಕಂದ ಪದ್ಯದ ಲಕ್ಷಣವನ್ನು ಬರೆಯಿರಿ.

ಕಂದ ಪದ್ಯವು ನಾಲ್ಕು ಸಾಲಿನ ಪದ್ಯ. ಒಂದು ಮತ್ತು ಮೂರನೆಯ ಪಾದಗಳು ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಮೂರು ಗಣಗಳಿರಬೇಕು. ಎರಡು ಮತ್ತು ನಾಲ್ಕನೆಯ ಪಾದಗಳು ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಐದೈದು ಗಣಗಳಿರಬೇಕು. ಪ್ರತೀ ಪಾದವೂ ಆದಿ ಪ್ರಾಸದಿಂದ ಕೂಡಿರಬೇಕು.

ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ.

೧. 4 | 4 | 4
_ U U |UUU U| _ _
ನಿಂದು ನ| ರಪತಿ ತ|ಳಾರಂ
4 | 4 | 4 | 4 |4
_ _ | _ UU| U UUU | UU _ | _ _
ಗಂದಂ | ನೀನ್ ಬರಿ| ಸು ಮನುಜ| ಯುಗಮಂ| ಮುನ್ನಂ

ಛಂದಸ್ಸು : ಕಂದಪದ್ಯ

೨. 4 | 4 |4
U U_ | _U U |_ _
ತಡವಾ| ದಪ್ಪುದು ಪೌರರ್
4 |4 |4 | 4 | 4
UU _ |UU UU| U _U | _ U U | U U _ |
ಕುಡುವೇ|ಳ್ವುದು ಹಲ|ವು ಜೀವ| ರಾಶಿಯ| ಬಲಿಯಂ

ಛಂದಸ್ಸು : ಕಂದಪದ್ಯ

## ಮರಳಿ ಮನೆಗೆ – ಅರವಿಂದ ಮಾಲಗತ್ತಿ

### ಕೃತಿಕಾರರ ಪರಿಚಯ



ಅರವಿಂದ ಮಾಲಗತ್ತಿಯವರು ಕ್ರಿ.ಶ.೧೯೫೬ರಲ್ಲಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಜನಿಸಿದರು.ಜನಪ್ರಿಯ ಕವಿಯಾಗಿರುವ ಇವರು ವಿಶ್ವತೋಮುಖ –ಹೂ ಬಲುಭಾರ ,ಮೂಕನಿಗೆ ಬಾಯಿ ಬಂದಾಗ ,ಕಪ್ಪುಕಾವ್ಯ, ಮೂರನೆಯ ಕಣ್ಣು ,ನಾದ–ನಿನಾದ ,ಸಿಲಿಕಾನ್ ಸಿಟಿ ಮತ್ತು ಕೋಗಿಲೆ ,ಚಂಡಾಲ ಸ್ವರ್ಗಾರೋಹಣಂ ಕವನ ಸಂಕಲನಗಳನ್ನು ರಚಿಸಿದ್ದಾರೆ. ಕಾರ್ಯ ಎಂಬ ಕಾದಂಬರಿಯನ್ನೂ ಮುಗಿಯದ ಕತೆಗಳು ಎಂಬ ಕಥಾ ಸಂಕಲನವನ್ನೂ ಗೌರ್ಮೆಂಟ್ ಬ್ರಾಹ್ಮಣ ಎಂಬ ಆತ್ಮಕಥನವನ್ನೂ ಬರೆದಿದ್ದಾರೆ. ಜಾನಪದ ಶೋಧ ,ಭೂತಾರಾಧನೆ ,ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ ,ದಲಿತ ಪ್ರಜ್ಞೆ ,ಸಾಹಿತ್ಯ –ಸಮಾಜ ಮತ್ತು ಸಂಸ್ಕೃತಿ ಇವರ ವಿಮರ್ಶಾ ಕೃತಿಗಳಾಗಿವೆ. ಶ್ರೀಯುತರ ಮೂಕನಿಗೆ ಬಾಯಿ ಬಂದಾಗ ಕವನ ಸಂಕಲನಕ್ಕೆ ದೇವರಾಜ ಬಹದ್ದೂರ್ ಪ್ರಶಸ್ತಿ ,ಕಪ್ಪು ಕಾವ್ಯ ಕೃತಿಗೆ ನರಸಿಂಹಯ್ಯ ಪುರಸ್ಕಾರ , ಗೌರ್ಎಂಟ್ ಬ್ರಾಹ್ಮಣ ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳು ಲಭಿಸಿವೆ . ಪ್ರಸ್ತುತ ಪದ್ಯಭಾಗವನ್ನು ಇವರ ವಿಶ್ವತೋಮುಖ –ಹೂ ಬಲು ಭಾರ ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಬುದ್ಧನು ಲುಂಬಿನಿಯ ವನಕ್ಕೆ ಯಾವ ರೀತಿ ಬರಬೇಕು ?

ಉ: ಬುದ್ಧನು ಲುಂಬಿನಿಯ ಬನಕ್ಕೆ ವೈಶಾಖ ಬಂದಂತೆ ಬರಬೇಕು.

೨. ಮನೆಯ ಬಾಗಿಲು ಯಾರಿಗಾಗಿ ತೆರೆದಿಹುದು ?

ಉ: ಮನೆಯ ಬಾಗಿಲು ಬುದ್ಧನಿಗಾಗಿ ತೆರೆದಿಹುದು.

೩. ಮಹಾಮನೆಯಲ್ಲಿ ಯಾವ ಮಂತ್ರವನ್ನು ಸಾರಬೇಕು ?

ಉ: ಬಹುಜನತೆಯ ಹಿತವೇ ಬಹುಜನತೆಯ ಸುಖವು ನಮ್ಮುಸಿರ ನೀತಿಯು ನಮ್ಮನೆಯ ರೀತಿಯು ಎಂಬ ಮಂತ್ರವನ್ನು ಮಹಾಮನೆಯಲ್ಲಿ ಸಾರಬೇಕು.

೪. ನಮ್ಮ ನಡೆ ಯಾರ ನಡೆಯಂತೆ ಇರಬೇಕು ?

ಉ: ಬುದ್ಧನ ನಡೆಯಂತೆ ನಮ್ಮ ನಡೆ ಇರಬೇಕು.

**ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಬುದ್ಧನೆಂದರೆ ಏನೇನು ಎಂದು ಕವಿಗಳು ಹೇಳುತ್ತಾರೆ ?

ಉ: ಇಂದಿನ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು ಬುದ್ಧನ ಬೆಳಕು ನಮಗೆ ಅವಶ್ಯಕ. ಬುದ್ಧನೆಂದರೆ ನಿತ್ಯ, ಸತ್ಯ , ಅಹಿಂಸಾ ಪ್ರತಿಪಾದಕನಾದ ಬುದ್ಧನು ಶಾಂತಿದೂತ , ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದವನು, ಅವನು ಕರುಣೆಯ ಸಂಕೇತ .ಅವನು ಅಜ್ಞಾನದ ಕತ್ತಲು ಹೋಗಲಾಡಿಸುವ ಜ್ಞಾನವೆಂಬ ಬೆಳಕಿನ ಸಂಕೇತ . ಅವನು ಲುಂಬಿನಿಯ ವನದಲ್ಲಿ ಜನಿಸಿದುದು ವಸಂತನಾಗಮನವನ್ನು ಸಾರಿದಂತೆ ಎಂದು ಕವಿ ಹೇಳಿದ್ದಾರೆ.

೨. ಭವ್ಯ ಮನುಜರಾಗಿ ಬಾಳಲು ನಮ್ಮಲ್ಲಿ ಇರಬೇಕಾದ ಗುಣಗಳಾವುವು ?
ಉ: ಬಹುಜನತೆಯ ಹಿತವೇ ಬಹುಜನತೆಯ ಸುಖವು ಎಂಬ ಕಲ್ಪನೆಯು ನಮ್ಮಲ್ಲಿರಬೇಕು. ಅದೇ ನಮ್ಮ ಉಸಿರಾಗ ಬೇಕು, ಬಹುಜನತೆಯ ಹಿತ ಸಾಧಿಸುವುದು ನಮ್ಮ ನೀತಿಯಾಗಬೇಕು. ನಾವು ಶ್ರೇಷ್ಠ ಸಮಾಜದ ಭವ್ಯ ಮನುಜರಾಗಿ ಬಾಳ ಬೇಕಾದರೆ ಬುದ್ಧ ಮಾರ್ಗದಲ್ಲಿ ನಡೆಯಬೇಕು .

೩. ಬುದ್ಧನು ಬೋಧಿಸಿದ ಪಂಚಶೀಲತತ್ವಗಳು ಯಾವುವು ?
ಉ: ಐದು ಕ್ಲೇಶಕಾರಕ ಪ್ರವೃತ್ತಿಗಳಿಂದ ವಿರತರಾಗುವುದೇ ಶೀಲ ಪಾಲನೆಯ ಉದ್ದೇಶ. ಬುದ್ಧನು ದುಃಖದ ನಿರೋಧಕ್ಕಾಗಿ ರೂಪಿಸಿದ ಅಷ್ಟಾಂಗ ಮಾರ್ಗ ಸಾಧನೆಯಲ್ಲಿ ಗೃಹಸ್ಥರು ಅಳವಡಿಸಿಕೊಳ್ಳಬೇಕಾದ ಐದು ಶೀಲಗಳ ಕುರಿತು ವಿವರಿಸಿದ್ದಾನೆ. ಅವುಗಳೆಂದರೆ

- ಯಾವುದೇ ಜೀವಿಗಳನ್ನು ಕೊಲ್ಲದಿರುವುದು ಅಥವಾ ಹಿಂಸೆ ಮಾಡದಿರುವುದು.
- ನಮ್ಮದಲ್ಲದ ವಸ್ತುಗಳನ್ನು ಕದಿಯದಿರುವುದು ಅಥವಾ ತೆಗೆದುಕೊಳ್ಳದಿರುವುದು .
- ಶೀಲಹರಣ ಮಾಡದಿರುವುದು ಅಥವಾ ಅತ್ಯಾಚಾರ ಮಾಡದಿರುವುದು
- ಸುಳ್ಳನ್ನು ಹೇಳದಿರುವುದು ಅಥವಾ ಅಸತ್ಯವನ್ನು ನುಡಿಯದಿರುವುದು .
- ಮಾದಕ ಪಾನೀಯ ಅಥವಾ ಮಾದಕ ವಸ್ತುಗಳನ್ನು ಸೇವಿಸದಿರುವುದು.

೪. ಬುದ್ಧನ ನಡೆ ಏನು ? ವಿವರಿಸಿ.
ಉ: ಬುದ್ಧನ ನಡೆಯು ಜಾತಿಯ ಸೀಮೆಯನ್ನು ಮೀರಿರುವುದು. ಧರ್ಮದ ಗಡಿಯಿಲ್ಲದಿರುವುದು. ಲಿಂಗ ಭೇದ ಮಾಡ –ದಿರುವುದು. ಮೇಲು ಕೀಳು ಎಂಬ ತಾರತಮ್ಯ ತೋರದಿರುವುದು. ಸರ್ವರಲಿ ಸಮಭಾವನೆಯನ್ನು ಹೊಂದಿ ಬಾಳಿ ಬದುಕಬೇಕೆನ್ನುವುದು ಬುದ್ಧನ ನಡೆಯಾಗಿದೆ.

ಎಂಟು –ಹತ್ತು ವಾಕ್ಯಗಳಲ್ಲಿ ಉತ್ತರಿಸಿ.
೧. ಮರಳಿ ಮನೆಗೆ ಕವನದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
ಮರಳಿ ಮನೆಗೆ ಕವನವು ಇಂದಿನ ಪ್ರಕ್ಷುಬ್ಧ ಸ್ಥಿತಿಗೆ ಬುದ್ಧನ ಆಗಮನದ ಪ್ರಸ್ತುತತೆಯನ್ನು ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ಇಂದಿನ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು ಬುದ್ಧನ ಬೆಳಕು ನಮಗೆ ಅವಶ್ಯಕ .ಬುದ್ಧನು ಸತ್ಯ ,ಶಾಂತಿ , ಕರುಣೆಯ ಬೆಳಕು . ಸಾಮಾಜಿಕ ಪರಿವರ್ತನೆಯ ಕ್ರಾಂತಿಯನ್ನುಂಟು ಮಾಡಿದವನು. ಅಜ್ಞಾನದ ಕತ್ತಲೆಯನ್ನು ಕಳೆದು ಸುಜ್ಞಾನದ ಸುಧೆ ಚೆಲ್ಲುವವನು. ಬುದ್ಧನ ಆಗಮನವು ಲುಂಬಿನಿ ವನಕ್ಕೆ ವೈಶಾಖದ ಆಗಮನದಂತೆ . ಕತ್ತಲಾಗಿದ್ದ ,ಮಾನವೀಯತೆಯ ಸೆಲೆ ಬತ್ತಿ ಹೋಗಿದ್ದ ,ಹಿಂಸೆ ,ಕ್ರೂರತೆ ಹೆಚ್ಚುತ್ತಿದ್ದ ದಿನಗಳಲ್ಲಿ ಶಾಂತಿ ಮಂತ್ರವೆಂಬ ಹಸುರನ್ನು ಚಿಗುರಿಸಿದವನು ಬುದ್ಧ. ಬುದ್ಧನು ಬಿತ್ತಿದ್ದ , ಬುದ್ಧನಿಂದಲೇ ಉದಿಸಿದ್ದ ,ಕಟ್ಟಲ್ಪಟ್ಟಿದ್ದ  ಶಾಂತಿಯ ಮನೆಯು ಮರೆತು ಹೋದ ಇಂದಿನ ದಿನಗಳಲ್ಲಿ  ಬುದ್ಧ ಪುನಃ ಮರಳಿ ಬಂದು ಅವನಿಂದಲೇ ಸಾರಲ್ಪಟ್ಟಿದ್ದ ಪಂಚಶೀಲ ತತ್ವಗಳನ್ನು ನೆನಪಿಸಬೇಕಾದ ಅಗತ್ಯತೆ ಇದೆ. ಬುದ್ಧ ನಮ್ಮ ತಂದೆ , ತಾಯಿ , ಬಂಧು ಬಳಗ ಅಂದರೆ ನಮ್ಮ ಆಲೋಚನೆಗಳಲ್ಲಿ , ನುಡಿಯಲ್ಲಿ ,ಕೃತಿಯಲ್ಲಿ ಬುದ್ಧನ ಉಪದೇಶಗಳು ನೆಲೆಸಲೇ ಬೇಕಾದ ಅನಿವಾರ್ಯತೆ ಹಿಂದಿಗಿಂತಲೂ ಇಂದು ಹೆಚ್ಚಾಗಿದೆ. ಬಹುಜನ ಹಿತಾಯ ,ಬಹುಜನ ಸುಖಾಯ ತತ್ವ ಮೈಗೂಡ ಬೇಕಾದುದು ಅವಶ್ಯವಿದೆ. ದಿವ್ಯ ಜಗದ ಭವ್ಯ ಮನುಜರಾಗಬೇಕಾದರೆ ಬುದ್ಧನ ಉಪದೇಶ ಅನುಸರಿಸುವುದು ಅಗತ್ಯವಿದೆ. ನಾವೆಲ್ಲರೂ ಜಾತಿಯ ಸೀಮೆಯಾಚೆ, ಧರ್ಮದ ಗಡಿಯಾಚೆ ನಿಂದು ಮೇಲು ಕೀಳು ಭೇದವಿಲ್ಲದೆ ಎಲ್ಲರೂ ಸಮಾನರೆಂದು

ಒಂದಾಗಿ ಬಾಳಬೇಕಿದೆ. ನಮ್ಮ ನಡೆ ಬುದ್ಧನ ಕಡೆ ,ನಮ್ಮ ನುಡಿ ಬುದ್ಧನ ನುಡಿಯಾಗಬೇಕು. ಅದಕ್ಕೆ ಬುದ್ಧನು ನಮ್ಮ ಮನೆಗೆ ,ಮನಕ್ಕೆ ಮರಳಿ ಬರಬೇಕು ಎಂದು ಕವಿ ಅರವಿಂದ ಮಾಲಗತ್ತಿಯವರು ಆಶಿಸಿದ್ದಾರೆ.

ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

೧.“ ಬಾರಯ್ಯ ಬಾರೊ ಬೆಳಕಿನ ಆದಿಗೆ "

ಉ: ಈ ಮೇಲಿನ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದ ವಿಶ್ವತೋಮುಖ –ಹೂ ಬಲುಭಾರ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾದ ಮರಳಿ ಮನೆಗೆ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಅಜ್ಞಾನದ ಕತ್ತಲಿನಿಂದ ನಮ್ಮನ್ನು ಜ್ಞಾನದ ಬೆಳಕಿನೆಡೆಗೆ ಕರೆದೊಯ್ಯಲು ಪುನಃ ಬುದ್ಧನ ಆಗಮನವಾಗಬೇಕಿದೆ . ಮರೆಯಾಗಿರುವ ಬುದ್ಧನ ತತ್ವಗಳು ಮತ್ತೆ ಬೆಳಕಿಗೆ ಬರಬೇಕು ಎನ್ನುವಾಗ ಕವಿ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಸರ್ವರಲ್ಲಿ ಸಮಾನತೆ ಮೂಡಿಸಲು, ಶಾಂತಿ ಸ್ಥಾಪನೆ ಮಾಡಲು, ಜ್ಞಾನದ ಬೆಳಕಿನೆಡೆಗೆ ಸಾಗಬೇಕೆಂಬುದು ಬುದ್ಧನ ಉಪದೇಶಗಳನ್ನು ಅನುಸರಿಸಬೇಕೆಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨. “ ಬುದ್ಧನೆಂದರೆ ಕರುಣೆ ಬುದ್ಧನೆಂದರೆ ಬೆಳಕು "

ಉ: ಈ ಮೇಲಿನ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದ ವಿಶ್ವತೋಮುಖ –ಹೂ ಬಲುಭಾರ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾದ ಮರಳಿ ಮನೆಗೆ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಬುದ್ಧನ ಉಪದೇಶಗಳು ನಿತ್ಯವೂ ಪ್ರಸ್ತುತವಾದವುಗಳು. ಬುದ್ಧನು ಸತ್ಯ, ಶಾಂತಿ, ಕರುಣೆ ಯ ಸಂಕೇತ . ಕ್ರಾಂತಿಕಾರಕವಾದ ಸಾಮಾಜಿಕ ಬದಲಾವಣೆಯನ್ನು ತಂದವನು. ಅವನು ಅಜ್ಞಾನದ ಕತ್ತಲೆಯನ್ನು ನೀಗಿಸುವ ಸುಜ್ಞಾನದ ಬೆಳಕಿನಂತವನು ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ :ಇಂದಿನ ಅಜ್ಞಾನದ ಕತ್ತಲೆ ನೀಗಿಸಲು ಬುದ್ಧನ ಬೆಳಕು ನಮಗೆ ಅವಶ್ಯಕ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೩. “ ಬಯಲಿನಲಿ ಬಂಧನ ಮೆಚ್ಚಳಾ ತಾಯಿ "

ಉ: ಈ ಮೇಲಿನ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದ ವಿಶ್ವತೋಮುಖ –ಹೂ ಬಲುಭಾರ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾದ ಮರಳಿ ಮನೆಗೆ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಬುದ್ಧನ ಉಪದೇಶದ ದಾರಿಯಲ್ಲಿಯೇ ಸಾಗಬೇಕು. ಬುದ್ಧನೇ ನಮ್ಮ ತಂದೆ ತಾಯಿ ,ಅವನು ನಮ್ಮ ಬಂಧು ಬಳಗ ಇದ್ದಂತೆ. ಬುದ್ಧನ ಉಪದೇಶಗಳು ನಮ್ಮ ಹಿತಕ್ಕಾಗಿ ರೂಪುಗೊಂಡಂತದ್ದು .ಅದನ್ನು ಮೀರಿ ನಡೆದರೆ ಬುದ್ಧನು ಮೆಚ್ಚಲಾರ. ಐಹಿಕವಾದ ಸುಖಕ್ಕೆ ಆಸೆ ಪಡದೇ ಮೋಹವನ್ನು ತೊರೆದು ಬಾಳಬೇಕು ಎಂದು ಹೇಳುವಾಗ ಕವಿ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಬುದ್ಧನ ಉಪದೇಶದಲ್ಲಿ ನಮ್ಮ ಹಿತವು ಅಡಗಿರುವುದರಿಂದ ಅವನ ತತ್ವಗಳನ್ನು ಮೀರದೇ ಅದೇ ದಾರಿಯಲ್ಲಿ ನಡೆಯುವುದರಲ್ಲಿ ನಮ್ಮ ಹಿತವಿದೆ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. “ ದಿವ್ಯ ಜಗದ ಭವ್ಯ ಮನುಜರಾಗಿ ನೀವು ಬಾಳಿರೊ "

ಉ: ಈ ಮೇಲಿನ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದ ವಿಶ್ವತೋಮುಖ –ಹೂ ಬಲುಭಾರ ಎಂಬ ಕವನ ಸಂಕಲನದಿಂದ ಆರಿಸಿಕೊಳ್ಳಲಾದ ಮರಳಿ ಮನೆಗೆ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ ಬಹುಜನತೆಯ ಹಿತವೇ ಬಹುಜನತೆಯ ಸುಖವು ಎಂಬ ಮಹಾಮನೆಯ ಮಹಾಮಂತ್ರವನ್ನು ನಾವು ಅಳವಡಿಸಿಕೊಳ್ಳಬೇಕಾದ ಅಗತ್ಯತೆ ಇದೆ .ದಿವ್ಯ ಜಗದ ಭವ್ಯ ಮನುಜರಾಗಿ ಬದುಕಬೇಕಾದರೆ ಬುದ್ಧನ ಉಪದೇಶವನ್ನು

ನಾವು ಅನುಸರಿಸಬೇಕು ಎಂದು ಕವಿ ಹೇಳಿದ್ದಾರೆ.
ಸ್ವಾರಸ್ಯ : ಸರ್ವ ಜನರ ಹಿತಕ್ಕಾಗಿ ನಾವೆಲ್ಲರೂ ಒಂದಾಗಬೇಕಾದ , ಬುದ್ಧನ ತತ್ವಗಳನ್ನು ಮೈಗೂಡಿಸಿಕೊಳ್ಳಬೇಕಾದ ಅಗತ್ಯತೆ ಯನ್ನು ಮೇಲಿನ ವಾಕ್ಯವು ಸೂಚಿಸುವುದು.


೫. " ಬುದ್ಧ ನಡೆಯೆಮ್ಮನಡೆ ಬುದ್ಧ ನುಡಿಯೆಮ್ಮನುಡಿ "
ಉ: ಈ ಮೇಲಿನ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದ ವಿಶ್ವತೋಮುಖ –ಹೂ ಬಲುಭಾರ ಎಂಬ ಕವನ ಸಂಕಲನ ದಿಂದ ಆರಿಸಿಕೊಳ್ಳಲಾದ ಮರಳಿ ಮನೆಗೆ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಸಂದರ್ಭ : ನಾವೆಲ್ಲರೂ ಜಾತಿಯ ಸೀಮೆಯಾಚೆಗೆ ಬಂದು ,ಧರ್ಮದ ಗಡಿಯಾಚೆಗೆ ನಿಂದು ,ಲಿಂಗಭೇದ ಮಾಡದೆ , ಮೇಲುಕೀಳು ಮನೋಭಾವನೆಯನ್ನು ತೊರೆದು ಬಾಳಿ ಬದುಕಲು ನಮ್ಮ ನಡೆ ಬುದ್ಧನ ಕಡೆ ಇರಬೇಕು ಎಂದು ಹೇಳುವಾಗ ಕವಿ ಮೇಲಿನಂತೆ ಹೇಳಿದ್ದಾರೆ.
ಸ್ವಾರಸ್ಯ : ನಾವು ಬುದ್ಧನ ಉಪದೇಶದ ದಾರಿಯಲ್ಲಿ ಸಾಗಬೇಕು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧. ನಿತ್ಯ :ಅನಿತ್ಯ : : ಸತ್ಯ : ಅಸತ್ಯ
೨. ನಮ್ಮುಸಿರು : ಲೋಪಸಂಧಿ : : ಸೀಮೆಯಾಚೆ : ಆಗಮಸಂಧಿ
೩. ರಥ : ತೇರು : : ಪಥ : ಮಾರ್ಗ
೪. ಸುಖವು : ಪ್ರಥಮ ವಿಭಕ್ತಿ : : ಮನೆಗೆ : ಚತುರ್ಥಿ
೫. ನಿತ್ಯ : ನಿಚ್ಚ : :ವೈಶಾಖ : ಬೇಸಗೆ

## ಪದ್ಯಪಾಠ ೬ . ತತ್ತ್ವಪದಗಳು

## ಕೃತಿಕಾರರ ಪರಿಚಯ



ಗುರುಕರುಣೆ - ಕಡಕೋಳ ಮಡಿವಾಳಪ್ಪ ಇವರ ಕಾಲ ಕ್ರಿ.ಶ.೧೭೬೫ . ಇವರು ಕಲ್ಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಬಿದನೂರ ಗ್ರಾಮದಲ್ಲಿ ಜನಿಸಿದರು. ಇವರು ಮಹಾಂತೇಶ ಎಂಬ ಅಂಕಿತವನ್ನು ಇಟ್ಟುಕೊಂಡು ನೂರಾರು ತತ್ತ್ವಪದಗಳನ್ನು ರಚಿಸಿದ್ದಾರೆ .



ಬಿದಿರು: ಸಂತ ಶಿಶುನಾಳ ಶರೀಫರ ಕಾಲ ಕ್ರಿ.ಶ. ೧೮೧೯ .ಇವರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಶಿಶುನಾಳದವರು. ಇವರ ಬಾಲ್ಯದ ಹೆಸರು ಮಹಮ್ಮದ್ ಶರೀಫ . ಶಿಶುನಾಳಾಧೀಶ ,ಶಿಶುನಾಳೇಶ ಎನ್ನುವುದು ಇವರ ಅಂಕಿತ .ಇವರು ನೂರಾರು ತತ್ತ್ವಪದಗಳನ್ನು ರಚಿಸಿದ್ದಾರೆ.

ಪ್ರಶ್ನೋತ್ತರಗಳು

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಯಾರ ಸ್ನೇಹವು ಸಾಯುವ ತನಕ ಬೇಡ ಎಂದಿದ್ದಾರೆ ?

ಉ: ಗುರು ಕರುಣೆಯಿಲ್ಲದವನ ಸ್ನೇಹವು ಸಾಯುವ ತನಕ ಬೇಡ ಎಂದಿದ್ದಾರೆ.

೨. ಯಾರ ಸ್ನೇಹವನ್ನು ಮಾಡಿ ಕೆಡಬಾರದು ?

ಉ: ಹೀನ ಮನುಷ್ಯನ ಸ್ನೇಹ ಮಾಡಿ ಕೆಡಬಾರದು.

೩. ತತ್ತ್ವಪದಕಾರರು ಯಾರ ಸೇವೆ ಮಾಡಬೇಕು ಎಂದಿದ್ದಾರೆ ?

ಉ: ಸಾಧು ಸತ್ಪುರುಷರ ಸೇವೆ ಮಾಡಬೇಕು ಎಂದು ತತ್ತ್ವಪದಕಾರರು ಹೇಳಿದ್ದಾರೆ.

೪. ಬಿದಿರು ಹೇಗೆ ಬೆಳೆಯಿತು ?

ಉ: ಹುಲ್ಲಾಗಿ ಹುಟ್ಟಿದ ಬಿದಿರು ದಿವಿನಾಗಿ ಬೆಳೆಯಿತು.

೫. ಬಿದಿರಿನ ಚಪ್ಪರವು ಏನನ್ನು ಕೊಡುತ್ತದೆ ?

ಉ: ಬಿದಿರಿನ ಚಪ್ಪರವು ನೆರಳನ್ನು ಕೊಡುತ್ತದೆ .

೬. ಬಿದಿರು ಶಿಶುನಾಳಾಧೀಶನಿಗೆ ಏನಾಗುತ್ತದೆ ?

ಉ: ಬಿದಿರು ಶೀಶುನಾಳಾಧೀಶನಿಗೆ ಓಲಗವಾಗುತ್ತದೆ .

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಬಿದಿರು ಮಕ್ಕಳಿಗೆ ,ರೈತರಿಗೆ ,ಮಹಾತ್ಮರಿಗೆ ಯಾವ ರೀತಿಯಲ್ಲಿ ಉಪಯೋಗವಾಗುತ್ತದೆ ?

ಉ: ಬಿದಿರು ಮಕ್ಕಳನ್ನು ತೂಗಲು ತೊಟ್ಟಿಲಾಗುವುದು. ರೈತರಿಗೆ ಬೀಜವನ್ನು ಬಿತ್ತಲು ಕೂರಿಗೆಯಾಗುವುದು. ಮಹಾತ್ಮರ ಕೈಯಲ್ಲಿನ ಬೆತ್ತವಾಗುವುದು .

೨. ಧಾನ್ಯಗಳನ್ನು ಕುಟ್ಟಲು ,ಬೀಸಲು , ಕೇರಲು ಬಿದಿರು ಹೇಗೆ ಸಹಾಯಕವಾಗುತ್ತದೆ ?
ಉ: ಧಾನ್ಯಗಳನ್ನು ಬಿತ್ತಲು ಬಿದಿರನ್ನು ಒನಕೆಯಾಗಿ ಬಳಸುವರು. ಧಾನ್ಯಗಳನ್ನು ಹಿಟ್ಟಾಗಿ ಮಾಡಲು ಬೀಸುವ ಕಲ್ಲಿಗೆ ಗೂಟವಾಗುವುದು. ಧಾನ್ಯಗಳನ್ನು ಕೇರಲು ಬಿದಿರನ್ನು ಮೊರವಾಗಿ ಬಳಸುವರು.

೩. ತತ್ವಪದಕಾರರು ಸ್ನೇಹ ಮಾಡುವ ಬಗೆಗೆ ಏನೆಂದು ತಿಳಿಸಿದ್ದಾರೆ ?
ಉ: ನಮ್ಮ ಎಲ್ಲ ಕಾರ್ಯಗಳಿಗೆ ಗುರು ಕರುಣೆ ಅಗತ್ಯ. ಗುರುಕರುಣೆಯಿಲ್ಲದವನ ಸ್ನೇಹವನ್ನು ಸಾಯುವ ತನಕ ಮಾಡಬಾರದು. ಮಾತಿನೊಳಗೆ ಮಾತಿಲ್ಲದವನ ಸ್ನೇಹವನ್ನು ,ಹೀನ ಮನುಷ್ಯನ ಸ್ನೇಹವನ್ನು ಮಾಡಿ ಕೆಡಬಾರದು ಎಂದು ತತ್ವಪದಕಾರರು ತಿಳಿಸಿದ್ದಾರೆ.

೪. ' ಗುರುಕರುಣೆ ' ಪದ್ಯದ ಮೂರು ಮತ್ತು ನಾಲ್ಕನೆಯ ಚರಣದಲ್ಲಿ ಏನನ್ನು ಮಾಡಬಾರದೆಂದು ತತ್ವ ಸಾರಿದ್ದಾರೆ ?
ಉ: ಅಕ್ಕತಂಗಿಯರೆಂದು ಬಾಯಲಿ ಕರೆದು ಅತಿಯಾಗಿ ಮನೆಗೆ ಸೇರಿಸಬಾರದು. ನಿತ್ಯ ಹಗಲಿನಲ್ಲಿ ಸದಾ ಕಾಲ ತಿನ್ನುತ್ತ ಹೊತ್ತು ಕಳೆಬಾರದು . ಹಿಂದಿನ ಕಾಲಕ್ಕೂ ಇಂದಿನ ಕಾಲಕ್ಕೂ ಸರಿ ಮಾಡಬಾರದು. ಹಿಂದೆ ಕಿರಿದಾಗುವುದು ಇಂದು ಹಿರಿದಾಗುತ್ತದೆ. ಆದ್ದರಿಂದ ಯಾವುದನ್ನೂ ಉಪೇಕ್ಷಿಸಬಾರದು. ಒಂದನ್ನು ಮತ್ತೊಂದಕ್ಕೆ ಹೋಲಿಸಿ ಸರಿ ಮಾಡಬಾರದು. ಗುರು ಮಹಾಂತೇಶನ ಪಾದವ ಹಿಡಿಯುವುದು ಅವನಲ್ಲಿ ಭಕ್ತಿ ಭಾವ ಹೊಂದುವುದು ಶರಣಾಗುವುದು ನಮಗೆ ಒಳ್ಳೆಯದು ಎಂದು ತತ್ವಪದಕಾರರು ಹೇಳಿದ್ದಾರೆ.

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

೧. 'ಗುರುಕರುಣೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
ಉ: ಕಡಕೋಳ ಮಡಿವಾಳಪ್ಪ ಅವರ ತತ್ವಪದವು ಮಾನವನು ತನ್ನ ಜೀವನದಲ್ಲಿ ಅನುಸರಿಸಬೇಕಾದ ನಡೆನುಡಿಗಳನ್ನು ಬಹುಸುಂದರವಾಗಿ ಚಿತ್ರಿಸುತ್ತದೆ. ನಮ್ಮ ಎಲ್ಲ ಕಾರ್ಯಗಳಿಗೆ ಗುರುಕರುಣೆ ಅಗತ್ಯ. ಗುರುಕರುಣೆಯಿಲ್ಲದವನ ಸ್ನೇಹವನ್ನು ಸಾಯುವ ತನಕ ಮಾಡಬಾರದು. ಮಾತಿನೊಳಗೆ ಮಾತಿಲ್ಲದವನ ಸ್ನೇಹವನ್ನು, ಹೀನ ಮನುಷ್ಯನ ಸ್ನೇಹವನ್ನು ಮಾಡಿ ಕೆಡಬಾರದು ಎಂದು ತತ್ವಪದಕಾರರು ತಿಳಿಸಿದ್ದಾರೆ. ಸಾಧು ಸತ್ಪುರುಷರ ಸೇವೆ ಮಾಡಬೇಕು. ಅಕ್ಕತಂಗಿಯರೆಂದು ಬಾಯಲಿ ಕರೆದು ಅತಿಯಾಗಿ ಮನೆಗೆ ಸೇರಿಸಬಾರದು. ನಿತ್ಯ ಹಗಲಿನಲ್ಲಿ ಸದಾ ಕಾಲ ತಿನ್ನುತ್ತ ಹೊತ್ತು ಕಳೆಯಬಾರದು. ಹಿಂದಿನ ಕಾಲಕ್ಕೂ ಇಂದಿನ ಕಾಲಕ್ಕೂ ಸರಿ ಮಾಡಬಾರದು. ಹಿಂದೆ ಕಿರಿದಾಗುವುದು ಇಂದು ಹಿರಿದಾಗುತ್ತದೆ. ಆದ್ದರಿಂದ ಯಾವುದನ್ನೂ ಉಪೇಕ್ಷಿಸಬಾರದು. ಒಂದನ್ನು ಮತ್ತೊಂದಕ್ಕೆ ಹೋಲಿಸಿ ಸರಿ ಮಾಡಬಾರದು. ಗುರು ಮಹಾಂತೇಶನ ಪಾದವ ಹಿಡಿಯುವುದು ಅವನಲ್ಲಿ ಭಕ್ತಿ ಭಾವ ಹೊಂದುವುದು ಶರಣಾಗುವುದು ನಮಗೆ ಒಳ್ಳೆಯದು ಎಂದು ತತ್ವಪದಕಾರರು ಹೇಳಿದ್ದಾರೆ.

೨. ' ಬಿದಿರು ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
ಉ : ಸಮಾಜದಲ್ಲಿ ಎಲ್ಲರಿಗೂ ಎಲ್ಲಾ ಸಂದರ್ಭಗಳಲ್ಲಿ ಬೇಕಾದ ಅಮೂಲ್ಯ ಅತ್ಯಗತ್ಯ ಬಿದಿರನ್ನು ಸಂತ ತನ್ನ ದೃಷ್ಟಿಯಲ್ಲಿ ನೋಡಿದ ಪರಿ ಈ ತತ್ವಪದದಲ್ಲಿ ವ್ಯಕ್ತವಾಗಿದೆ. ಬಿದಿರು ಹುಟ್ಟುವಾಗ ಒಂದು ಸಾಮಾನ್ಯ ಸಸ್ಯವಾಗಿದ್ದು ಬೆಳೆಯುತ್ತ ಅದರ ಪ್ರಯೋಜನಗಳು ಹಲವು. ಹುಲ್ಲಾಗಿ ಹುಟ್ಟಿ ದಿವಿನಾಗಿ ಬೆಳೆದು ಅದು ಹಲವು ರೀತಿಯ ಪ್ರಯೋಜನಕ್ಕೆ ಸಿದ್ಧವಾಗುತ್ತದೆ. ಮಕ್ಕಳು ನಿದ್ದೆ ಮಾಡುವಂತೆ

ತೂಗಲು ಬೇಕಾಗುವ ತೊಟ್ಟಿಲನ್ನು ಬಿದಿರಿನಿಂದ ನಿರ್ಮಿಸಬಹುದು. ಪಲ್ಲಕ್ಕಿ ಹೊರಲು ಬೇಕಾಗುವ ದಂಡಿಗೆಯಾಗಿ ಬಿದಿರು ಸಹಾಯಕವಾಗುತ್ತದೆ. ಹೂ ಮಾರಲು ಬೇಕಾಗುವ ದೇವರಿಗೆ ಅರ್ಪಿಸುವ ಹೂವನ್ನು ಇಡಲು ಬಳಸುವ ಬುಟ್ಟಿಯನ್ನು ಬೆತ್ತದಿಂದ ತಯಾರಿಸಬಹುದು. ಮಹಾತ್ಮರ ಕೈಯಲ್ಲಿ ಶೋಭಿಸುವ ಬೆತ್ತವೂ ಕೂಡ ಬಿದಿರಿನದ್ದೇ ಆಗಿದೆ. ಧಾನ್ಯ ಕುಟ್ಟಲು ಬೇಕಾಗುವ ಒನಕೆ ಬಿದಿರಿನಿಂದಲೇ ತಯಾರಾಗುತ್ತದೆ. ಅಂಬಿಗನ ದೋಣಿ ಮತ್ತು ದೋಣಿಯನ್ನು ನಡೆಸಲು ಬಳಸುವ ಹರಿಗೋಲು ಬಿದಿರಿನದು. ರೈತ ಭೂಮಿಯನ್ನು ಉಳಲು ಬಳಸುವ ,ಬೀಜವನ್ನು ಬಿತ್ತಲು ಬಳಸುವ ಕೂರಿಗೆ ಎಲ್ಲವೂ ಬಿದಿರಿನದೇ ಆಗಿದೆ.

ಬೀಸುವ ಕಲ್ಲಿಗೆ ಆಧಾರವಾದ ಗೂಟ ಧಾನ್ಯಗಳಿಂದ ಕಲ್ಲನ್ನು ,ಕಸವನ್ನು ಬೇರ್ಪಡಿಸುವ ಮೊರವೂ ಬೆತ್ತದಿಂದ ಆಗಿರುತ್ತದೆ. ಮುದುಕರು ಊರಲು ಬಳಸುವ ಬೆತ್ತ ಬಿದಿರಿನದ್ದೇ ಆಗಿದೆ. ಮಕ್ಕಳ ಕೈಯಲ್ಲಿನ ಆಟವಾಡುವ ಕೋಲು ,ಚಕ್ಕಡಿಯ ಚಕ್ರ ,ಸಿದ್ಧರಾಮೆಶನ ನಂದಿ ಕೋಲಾಗಿ ಬಳಕೆಯಾಗಿ ಬಿದಿರು ನೆರಳನ್ನು ನೀಡುವ ಚಪ್ಪರವಾಗಿ, ಏಕದಂಡಿಗೆ ಕೊಳವೆಯಾಗಿಯೂ ಕಾರ್ಯವನ್ನು ಮಾಡಬಲ್ಲುದು. ಅಷ್ಟೇ ಅಲ್ಲದೆ ಸಂತ ಶಿಶುನಾಳರ ಕೈಯಲ್ಲಿರುವ ಓಲಗವಾಗಿಯೂ ಅದು ಕಾರ್ಯನಿರ್ವಹಿಸಬಲ್ಲುದು ಮತ್ತು ಪೂಜನಿಯವಾಗಿರುವುದು.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. “ ಹೀನ ಮನುಷ್ಯನ ಸ್ನೇಹ ಮಾಡಿ ಕೆಡಲಿಬೇಡ .”

ಉ: ಈ ಮೇಲಿನ ವಾಕ್ಯವನ್ನು ಆಯ್ದು ತತ್ತ್ವಪದಗಳು ಸಂಕಲನದಿಂದ ಆರಿಸಲಾದ ಕಡಕೋಳ ಮಡಿವಾಳಪ್ಪನವರು ಬರೆದ ಗುರುಕರುಣೆ ತತ್ತ್ವಪದದಿಂದ ಆರಿಸಲಾಗಿದೆ. ಈ ಮಾತನ್ನು ತತ್ತ್ವಪದಕಾರರು ಹೇಳಿದ್ದಾರೆ.

ಸಂದರ್ಭ : ಗುರುಕರುಣವಿಲ್ಲದವನ ಸ್ನೇಹ ಮಾಡಬಾರದು. ಸಾಧು ಸತ್ಪುರುಷರ ಸೇವೆ ಮಾಡಬೇಕು. ಮಾತಿನೊಳಗೆ ಮಾತಿಲ್ಲದವನ ಸ್ನೇಹ ಮಾಡಬಾರದು. ಹೀನ ಮನುಷ್ಯನ ಸ್ನೇಹ ಮಾಡಬಾರದು ಎಂದು ಕಡಕೋಳ ಮಡಿವಾಳಪ್ಪನವರು ಹೇಳಿದ್ದಾರೆ.

ಸ್ವಾರಸ್ಯ : ಯಾರೊಂದಿಗೆ ಸ್ನೇಹ ಮಾಡಿದರೆ ಉತ್ತಮ ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೨. “ ನಿತ್ಯಕಾಲದಲ್ಲಿ ಅಶನವ ಉಂಡು ಹೊತ್ತು ಗಳೆಯಲಿ ಬೇಡ "

ಉ: ಈ ಮೇಲಿನ ವಾಕ್ಯವನ್ನು ಆಯ್ದು ತತ್ತ್ವಪದಗಳು ಸಂಕಲನದಿಂದ ಆರಿಸಲಾದ ಕಡಕೋಳ ಮಡಿವಾಳಪ್ಪನವರು ಬರೆದ ಗುರುಕರುಣೆ ತತ್ತ್ವಪದದಿಂದ ಆರಿಸಲಾಗಿದೆ. ಈ ಮಾತನ್ನು ತತ್ತ್ವಪದಕಾರರು ಹೇಳಿದ್ದಾರೆ.

ಸಂದರ್ಭ : ಅಕ್ಕತಂಗಿಯರೆಂದು ಬಾಯಲಿ ಕರೆದು ಅತಿಯಾಗಿ ಮನೆಗೆ ಸೇರಿಸಬಾರದು. ನಿತ್ಯ ಹಗಲಿನಲ್ಲಿ ಸದಾ ಕಾಲ ತಿನ್ನುತ್ತ ಹೊತ್ತು ಕಳೆಯಬಾರದು ಎಂದು ತತ್ತ್ವಪದಕಾರರು ಹೇಳಿದ್ದಾರೆ.

ಸ್ವಾರಸ್ಯ : ಸಮಯ ಅಮೂಲ್ಯವಾದುದು .ಅದನ್ನು ವ್ಯರ್ಥವಾಗಿ ಕಳೆಯಬಾರದು ಎಂದು ಮೇಲಿನ ವಾಕ್ಯವು ಸೂಚಿಸುವುದು.

೩. “ ಬೆಳೆಬೆಳೆಯುತ್ತ ದಿವಿನಾದೆ "

ಈ ಮೇಲಿನ ವಾಕ್ಯವನ್ನು ವಿದ್ವಾನ್ ಸದ್ಯೋಜಾತ ಮೂರ್ತಿಯವರು ಸಂಪಾದಿಸಿದ ಶಿಶುನಾಳರ ಗೀತೆಗಳು ಸಂಕಲನದಿಂದ ಆರಿಸಲಾದ ಸಾರ್ಥಕ ರಕ್ಷಣೆ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಬಿದಿರಿನ ಬಗ್ಗೆ ವಿವರಿಸುತ್ತ ಕವಿ ಬಿದಿರು ಮೊದಲು ಹುಲ್ಲಿನ ರೂಪಲ್ಲಿದ್ದು ಬೆಳೆಯುತ್ತ ದಿವಿನಾಗಿ ಸಾಕಷ್ಟು ರೀತಿಯ ಪ್ರಯೋಜನಕ್ಕೆಬರುವ ಗಿಡ ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಬಿದಿರಿನ ಬೆಳವಣಿಗೆಯ ಕುರಿತು ವ್ಯಕ್ತವಾಗಿದೆ.

೪. " ಮಹಾತ್ಮರ ಕೈಗೆ ಬೆತ್ತ ನಾನಾದೆ "

ಈ ಮೇಲಿನ ವಾಕ್ಯವನ್ನು ವಿದ್ವಾನ್ ಸದ್ಯೋಜಾತ ಮೂರ್ತಿಯವರು ಸಂಪಾದಿಸಿದ ಶಿಶುನಾಳರ ಗೀತೆಗಳು ಸಂಕಲನದಿಂದ ಆರಿಸಲಾದ ಸಾರ್ಥಕ ರಕ್ಷಣೆ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಬಿದಿರು ಸಾಮಾನ್ಯ ಸಸ್ಯವಾದರೂ ಹಲವಾರು ಪ್ರಯೋಜನಕ್ಕೆ ಬರುವ ಗಿಡ . ಪಲ್ಲಕ್ಕಿ ಹೊರಲು ಆಧಾರವಾದ ದಂಡಿಗೆಯಾಗಿಯೂ ,ಷತ್ರೆಯ ಬುಟ್ಟಿಯಾಗಿಯೂ ಮಹಾತ್ಮರ ಕೈಯಲ್ಲಿಯ ಬೆತ್ತವಾಗಿಯೂ ಅದು ಕಂಗೊಳಿಸುವುದು.

ಸ್ವಾರಸ್ಯ : ಮಹಾತ್ಮರೂ ಕೂಡ ಬಳಸುವ ಬಿದಿರಿನ ಮಹತ್ವ ಇಲ್ಲಿ ವ್ಯಕ್ತವಾಗಿದೆ.

ಕೊಟ್ಟಿರುವ ಪದಗಳಲ್ಲಿ ಸೂಕ್ತಪದವನ್ನು ಆರಿಸಿ ಬರೆಯಿರಿ.

೧. ' ಅಶನ 'ಪದದ ಅರ್ಥ ----(ಅನ್ನ)

(ಅನ್ನ ,ಆಸೆ, ಬಟ್ಟೆ,ನೀರು )

೨. ಬೆತ್ತ ಪದದ ತತ್ಸಮ ರೂಪ –--- ವೇತ್ರ .

(ವೆತ್ತ ,ವೇತ್ರ, ಬೆತ್ರ ,ಪೆತ್ತ )

೩. ' ಕರುಣೆ' ಪದದ ವಿರುದ್ಧಾರ್ಥಕ ಪದ –-- ನಿಷ್ಕರುಣೆ

(ಅನುಕರಣೆ ,ನಿಕರುಣೆ ,ನಿಷ್ಕರುಣೆ ,ಅಪಕರುಣೆ )

೪. ' ಅಂಬಿಗ'  ಎಂದರೆ –- ದೋಣಿ ನಡೆಸುವವ

(ರೈತ, ಗಾಡಿ ಹೊಡೆಯುವವ , ಗುರು ,ದೋಣಿ ನಡೆಸುವವ )

ಮೊದಲೆರಡು ಪದಗಳಿಗೆ ಸಂಬಂಧ ಇರುವಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

೧. ಹಿಂದು : ಮುಂದು : : ಹಿರಿದು : ------ ಕಿರಿದು

೨. ಮಾತಿಲ್ಲದವನ : ಲೋಪಸಂಧಿ : : ಕರುಣವಿಲ್ಲದವನ : ------ ಆಗಮ ಸಂಧಿ

೩. ಮನುಷ್ಯನ : ಷಷ್ಠಿ ವಿಭಕ್ತಿ : : ಕಾಲದಲ್ಲಿ  : ಸಪ್ತಮೀ ವಿಭಕ್ತಿ

೪. ಪತ್ರ : ಎಲೆ : : ಚಕ್ಕಡಿ : ----- ಎತ್ತಿನ ಗಾಡಿ

## ಪದ್ಯಪಾಠ -೭ ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು - ರಾಘವಾಂಕ

### ಕೃತಿಕಾರರ ಪರಿಚಯ -

ಇವನ ಕಾಲ ಕ್ರಿ.ಶ .ಸುಮಾರು ೧೨೨೫ .ಇವನ ಸ್ಥಳ ಹಂಪಿ ಕ್ಷೇತ್ರ. ಹರಿಶ್ಚಂದ್ರ ಕಾವ್ಯ ,ಸಿದ್ಧರಾಮ ಚಾರಿತ್ರ ,ವೀರೇಶ್ವರ ಚರಿತೆ ,ಶರಭಚಾರಿತ್ರ ,ಹರಿಹರ ಮಹತ್ವ ಮೊದಲಾದ ಕಾವ್ಯಗಳನ್ನು ಬರೆದಿದ್ದಾನೆ. ಇವನಿಗೆ ಉಭಯಕಮಲರವಿ ,ಕವಿ ಶರಭ ಭೇರುಂಡ ,ಷಟ್ಪದಿ ಬ್ರಹ್ಮ ಮೊದಲಾದ ಅಭಿದಾನಗಳನ್ನು ಹೊಂದಿದ್ದಾನೆ.

ಆಕರ ಕೃತಿ : ಹರಿಶ್ಚಂದ್ರಕಾವ್ಯ

ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ.

೧. ಗಾನ ರಾಣಿಯರು ಅವನೀಶನನ್ನು ನೋಡಲು ಬಂದದ್ದನ್ನು ಕವಿಯು ಯಾವುದಕ್ಕೆ ಹೋಲಿಸಿದ್ದಾನೆ ?

ಉ : ಕತ್ತಲೆಯ ರಾತ್ರಿ ಕನ್ಯೆಯರು ಹಗಲನ್ನು ನೋಡಲು ಬಂದರೋ ಎಂಬಂತೆ ಗಾನ ರಾಣಿಯರು ಅವನೀಶನನ್ನು ನೋಡಲು ಬಂದರೆಂದು ಕವಿಯು ಹೇಳಿದ್ದಾನೆ.

೨. ಗಾನ ರಾಣಿಯರಿಗೆ ಹರಿಶ್ಚಂದ್ರನು ಯಾವ ಬಹುಮಾನವನ್ನು ಕೊಟ್ಟನು ?

ಉ : ಗಾನ ರಾಣಿಯರಿಗೆ ಹರಿಶ್ಚಂದ್ರನು ಸರ್ವಾಭರಣಗಳನ್ನು ಬಹುಮಾನವಾಗಿ ಕೊಟ್ಟನು.

೩. ಗಾನ ರಾಣಿಯರು ಹರಿಶ್ಚಂದ್ರನನ್ನು ಏನನ್ನು ಕೊಡು ಎಂದು ಕೇಳಿದರು ?

ಉ : ಗಾನ ರಾಣಿಯರು ಹರಿಶ್ಚಂದ್ರನನ್ನು ನಿನ್ನ ಮುತ್ತಿನ ಸತ್ತಿಗೆಯನ್ನು ಕೊಡು ಎಂದು ಕೇಳಿದರು.

೪. ಸತ್ತಿಗೆಯು ಯಾವಾಗ ದೈವ ಸ್ವರೂಪ ಎಂದು ಹರಿಶ್ಚಂದ್ರನು ಹೇಳುತ್ತಾನೆ ?

ಉ: ರಾಜನಿಗೆ ಪಟ್ಟ ಕಟ್ಟುವ ಸಂದರ್ಭದಲ್ಲಿ ಪೂಜಿಸಲ್ಪಡುವ ಸತ್ತಿಗೆಯು ದೈವದ ಸ್ವರೂಪ ಎಂದು ಹರಿಶ್ಚಂದ್ರನು ಹೇಳಿದನು.

ಕೊಟ್ಟಿರುವ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ವಿಶ್ವಾಮಿತ್ರನ ತಪೋಬಲದಿಂದ ಜನಿಸಿದ ಕನ್ಯೆಯರ ರೂಪ ಲಾವಣ್ಯ ಹೇಗಿತ್ತು ? ವಿವರಿಸಿ .

ಉ: ವಿಶ್ವಾಮಿತ್ರನ ತಪೋಬಲದಿಂದ ಜನಿಸಿದ ಕನ್ಯೆಯರು ಕಾಳ ರಾತ್ರಿ ಕನ್ಯೆಯರು ಹಗಲನ್ನು ನೋಡಲು ಬಂದರೋ ಎಂಬಂತೆ ಹರಿಶ್ಚಂದ್ರನನ್ನು ನೊಡಲು ಬಂದರು. ಸಮುದ್ರಮಂಥನ ಕಾಲದಲ್ಲಿ ಹೊರಬಂದ ವಿಷದ ಹೊಗೆಗೆ ಕಪ್ಪಾದ ಜಲದೇವಿಯರು ಮನುಷ್ಯರೂಪವನ್ನು ತಳೆದರೋ ಎಂಬಂತೆ ಇದ್ದರು. ಬ್ರಹ್ಮನು ನೀಲಿ ಬಣ್ಣದಿಂದ ಮಾಡಿದ ಸಾಲ ಭಂಜಿಕೆಗಳು ಜೀವವನ್ನು ಪಡೆದು ಬಂದವೋ ಎಂಬಂತೆ ಬಂದ ಗಾನರಾಣಿಯರು ಹರಿಶ್ಚಂದ್ರನಿರುವಲ್ಲಿ ಬಂದರು.

೨. ಗಾನ ರಾಣಿಯರು ಏನೆಂದು ಹರಿಶ್ಚಂದ್ರನನ್ನು ಕೀರ್ತಿಸಿ ಹಾಡಿದರು ?

ಉ : ವಿಶ್ವಾಮಿತ್ರನ ಅಣತಿಯಂತೆ ಹರಿಶ್ಚಂದ್ರನಿಗೆ ಮಾಯದ ಬಲೆಯನ್ನು ಬೀಸಲೆಂದು ಬಂದ ಗಾನರಾಣಿಯರು ರಾಜನನ್ನು ಕುರಿತು ಮಝು ,ಭಾಪು ,ರಾಯ ,ರಾಯದಳವುಕಾರ , ರಾಯಜಗಜಟ್ಟಿ , ಶತ್ರು ರಾಜರಿಗೆ ತಲ್ಲಣವುಂಟು ಮಾಡುವವನು . ರಾಯಭುಜಬಲಭೀಮ ,ಶತ್ರುರಾಜ ಸಂಹಾರಕ ,ರಾಜರ ಒಡೆಯ ಚಿರಂಜೀವ ಎಂದು ಹರಿಶ್ಚಂದ್ರನನ್ನು ಕೀರ್ತಿಸಿ ಹಾಡಿದರು.

೩. ಹರಿಶ್ಚಂದ್ರ ಮುತ್ತಿನ ಸತ್ತಿಗೆಯನ್ನು ಏಕೆ ಕೊಡಲು ಸಾಧ್ಯವಿಲ್ಲ ಎಂದು ಹೇಳಿದನು ?

ಉ : ತನ್ನೆದುರು ಬಂದ ಗಾನ ರಾಣಿಯರು ದಂಡಿಗೆ ಹಿಡಿದು ಹಾಡಿದಾಗ ರಾಜನು ಕ್ಷಣದಲ್ಲಿ ಎಲ್ಲ ತಲ್ಲಣಗಳನ್ನೂ ಮರೆತು ಹಾಡಿನ ಮಾಧುರ್ಯಕ್ಕೆ ಮನಸೋತು ಆಭರಣಗಳನ್ನು ಗಾನ ರಾಣಿಯರಿಗೆ ಬಹುಮಾನವಾಗಿ ಕೊಟ್ಟನು. ಆದರೆ ಗಾನ ರಾಣಿಯರು ನಿನ್ನ ಮುತ್ತಿನ ಸತ್ತಿಗೆಯನ್ನು ಕೊಡು ಎಂದರು. ರವಿಕುಲದಲ್ಲಿ ಜನಿಸಿದ ರಾಜರಿಗೆ ಪಟ್ಟವ ಕಟ್ಟುವ ಸಂದರ್ಭದಲ್ಲಿ ಮುತ್ತಿನ ಸತ್ತಿಗೆಯಿಲ್ಲದಿದ್ದರೆ ಅರಸುತನ ಸಲ್ಲದು ,ಭೂಮಿಯ ಒಡೆತನ ಸಿಗದು ,ಯುದ್ಧರಂಗದಲ್ಲಿ ಮುತ್ತಿನ ಸತ್ತಿಗೆಯನ್ನು ನೋಡಿ ಶತ್ರು ರಾಜರು / ಸೈನಿಕರು ಭಯಗೊಂಡು ಓಡಿ ಹೋಗುವರು. ಮುತ್ತಿನ ಸತ್ತಿಗೆಯ ನೆಳಲೊಳಗೆ ಇದ್ದ ರಾಜನಿಗೆ ಯಾವುದೇ ಅಡೆತಡೆ ,ಆತಂಕ ,ದಾರಿದ್ರ್ಯ ರೋಗ ,ಅಪಕೀರ್ತಿ ,ಭಯ ಯಾವುದೂ ಕಾಡುವುದಿಲ್ಲ .ಇವೆಲ್ಲ ತಿಳಿದೂ ತಿಳಿದೂ ಮುತ್ತಿನ ಸತ್ತಿಗೆ ಕೊಡಬಹುದೆ ?ಎಂದು ಹರಿಶ್ಚಂದ್ರನು ಗಾನ ರಾಣಿಯರಿಗೆ ಕೇಳಿದನು .

೪. ಮುತ್ತಿನ ಸತ್ತಿಗೆಯ ವಿಶೇಷತೆ ಕುರಿತು ಹರಿಶ್ಚಂದ್ರನು ಏನು ಹೇಳುತ್ತಾನೆ ?

ಉ : ಈ ಮುತ್ತಿನ ಸತ್ತಿಗೆಯು ಸಾಮಾನ್ಯರಿಗೆ ಕೊಡುವಂತದ್ದಲ್ಲ .ಆದ್ದರಿಂದ ಇದು ಸತಿಯಂತೆ ; ವಂಶಪಾರಂಪರ್ಯವಾಗಿ ಬಂದುದರಿಂದ ಇದು ತಂದೆಯಿದ್ದಂತೆ ; ಪಟ್ಟ ಕಟ್ಟುವ ಸಂದರ್ಭದಲ್ಲಿ ಇದನ್ನು ಅರ್ಚಿಸುವುದರಿಂದ ಇದು ದೇವರಿದ್ದಂತೆ ; ಇದರ ಕೆಳಗಡೆ ಇದ್ದವರಿಗೆ ಯಾವುದೇ ಅಡಚಣೆ ,ಆತಂಕ ತೊಂದರೆಯಿಲ್ಲದಂತೆ ಇದು ನೆರಳಿನಂತೆ ಕಾಪಾಡುವುದರಿಂದ ಈ ಮುತ್ತಿನ ಸತ್ತಿಗೆಯು ತಾಯಿಯಂತೆ ; ಈ ಭೂಮಂಡಲದ ರಾಜನ ಶತ್ರುಗಳನ್ನು ನಡುಗಿಸಲು ಕಾರಣವಾಗುವುದರಿಂದ ಇದು ಚತುರಂಗಬಲವಿದ್ದಂತೆ ಎಂದು ಹರಿಶ್ಚಂದ್ರನು ಮುತ್ತಿನ ಸತ್ತಿಗೆಯ ಕುರಿತು ಹೇಳಿದನು.

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿದ ಗಾನ ರಾಣಿಯರು ಹೇಳಿದ ಮಾತುಗಳನ್ನು ತಿಳಿಸಿ.

ಉ: ವಿಶ್ವಾಮಿತ್ರ ನಿಂದ ಸೃಷ್ಟಿಸ್ಪಲ್ಪಟ್ಟ ಗಾನ ರಾಣಿಯರು ಹರಿಶ್ಚಂದ್ರನ ಬಳಿ ಬಂದು ಅವನನ್ನು ಕೀರ್ತಿಸಿ ಹಾಡಿದರು. ಆಗ ಅವರ ಗಾನವನ್ನು ಮೆಚ್ಚಿದ ರಾಜನು ಅವರಿಗೆ ಆಭರಣಗಳನ್ನು ನೀಡಿದನು. ಆಗ ಅವರು ಬಡತನದ ಹೊತ್ತು ಆನೆ ದೊರಕಿ ಫಲವೇನು ? ನೀರಡಿಕೆಯಾದ ಸಂದರ್ಭದಲ್ಲಿ ತುಪ್ಪ ದೊರೆತು ಫಲವೇನು ?ಅನಾರೋಗ್ಯದಿಂದ ಬಳಲುತ್ತಿದ್ದ ಸಂದರ್ಭದಲ್ಲಿ ರಂಭೆ ಸಿಕ್ಕಿದರೆ ಫಲವೇನು ? ಸಾವು ಬರುವ ಹೊತ್ತಿನಲ್ಲಿ ಭೂಮಿಯ ಒಡೆತನ ದೊರಕಿ ಫಲವೇನು ?ಕಡಲಿನಲ್ಲಿ ಬಿದ್ದವರಿಗೆ ತೆಪ್ಪವನ್ನು ನೀಡಿದರೆ ಸಂತೋಷವಾಗುವುದು. ದರಿದ್ರನಿಗೆ ಬಂಗಾರವನ್ನು ಕೊಟ್ಟರೆ ಸಂತೋಷವಾಗುವುದು. ರೋಗದಿಂದ ಬಳಲುತ್ತಿರುವವನಿಗೆ ಅಮೃತ ಕೊಟ್ಟರೆ ಸಂತೋಷವಾಗುವುದು. ಅದೇ ರೀತಿ ಬಿರು ಬಿಸಿಲು ಉರಿಯಲ್ಲಿ ಬಾಯಿ ಬತ್ತಿ ಬಳಲುತ್ತಿರುವ ನಮಗೆ ನಿನ್ನ ಮುತ್ತಿನ ಸತ್ತಿಗೆಯನ್ನಿತ್ತು ಸಲಹು ಎಂದು ಗಾನ ರಾಣಿಯರು ಹೇಳಿದರು.

೨. ಹರಿಶ್ಚಂದ್ರ ಮತ್ತು ಗಾನ ರಾಣಿಯರ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.

ಉ : ಮಾಯದ ಅಬಲೆಯರು ಗಾನ ರಾಣಿಯರು ವಿಧವಿಧವಾಗಿ ಹರಿಶ್ಚಂದ್ರನನ್ನು ಕೀರ್ತಿಸಿ ಹಾಡಿದರು. ಹರಿಶ್ಚಂದ್ರನು ಮೆಚ್ಚಿ ಅವರಿಗೆ ಆಭರಣಗಳನ್ನು ನೀಡಿದಾಗ ಅವರು ಬಡತನ ಆನೆ ದೊರಕಿದರೆ , ನೀರಡಿಕೆಯಾದಾಗ ತುಪ್ಪ ದೊರೆತರೆ , ಅನಾರೋಗ್ಯದಿಂದ ಬಳಲುತ್ತಿದ್ದ ಸಂದರ್ಭದಲ್ಲಿ ರಂಭೆ ಸಿಕ್ಕಿದರೆ , ಸಾಯುವ ಹೊತ್ತು ಭೂಮಿಯ ಒಡೆತನ ಸಿಕ್ಕರೆ ಏನು ಪ್ರಯೋಜನ ? ಕಡಲಲ್ಲಿ ಬಿದ್ದವನಿಗೆ ತೆಪ್ಪದ ಅವಶ್ಯಕತೆ ,ಬಡವನಿಗೆ ಬಂಗಾರದ ಅವಶ್ಯಕತೆ , ರೋಗಿಗೆ ಅಮೃತದ ಅವಶ್ಯಕತೆ ಇರುವಂತೆ ಬಿಸಿಲಿನಿಂದ ಬಳಲಿ ಬೆಂಡಾಗಿರುವ ನಮಗೆ ನಿನ್ನ ಮುತ್ತಿನ ಸತ್ತಿಗೆ ಬೇಕಾಗಿದೆ .ಅದನ್ನು ನಮಗೆ ನೀಡಿ ಸಲಹಬೇಕು ಎಂದರು. ರವಿಕುಲದಲ್ಲಿ ಜನಿಸಿದ ರಾಜರಿಗೆ ಪಟ್ಟವ ಕಟ್ಟುವ ಸಂದರ್ಭದಲ್ಲಿ ಮುತ್ತಿನ ಸತ್ತಿಗೆಯಿಲ್ಲದಿದ್ದರೆ ಅರಸುತನ ಸಲ್ಲದು . ಭೂಮಿಯ ಒಡೆತನ ಸಿಗದು . ಯುದ್ಧರಂಗದಲ್ಲಿ ಮುತ್ತಿನ ಸತ್ತಿಗೆಯನ್ನು ನೋಡಿ ಶತ್ರು ರಾಜರು / ಸೈನಿಕರು ಭಯಗೊಂಡು

ಓಡಿ ಹೋಗುವವರು. ಮುತ್ತಿನ ಸತ್ತಿಗೆಯ ನೆಳಲೊಳಗೆ ಇದ್ದ ರಾಜನಿಗೆ ಯಾವುದೇ ಅಡೆತಡೆ ,ಆತಂಕ ,ದಾರಿದ್ರ್ಯ ರೋಗ ,ಅಪಕೀರ್ತಿ ,ಭಯ ಯಾವುದೂ ಕಾಡುವುದಿಲ್ಲ .ಇವೆಲ್ಲ ತಿಳಿದೂ ತಿಳಿದೂ ಮುತ್ತಿನ ಸತ್ತಿಗೆ ಕೊಡಬಹುದೆ ?ಎಂದು ಹರಿಶ್ಚಂದ್ರನು ಗಾನ ರಾಣಿಯರಿಗೆ ಕೇಳಿದನು .ಈ ಮುತ್ತಿನ ಸತ್ತಿಗೆಯು ಸಾಮಾನ್ಯರಿಗೆ ಕೊಡುವಂತದ್ದಲ್ಲ .ಆದ್ದರಿಂದ ಇದು ಸತಿಯಂತೆ ; ವಂಶಪಾರಂಪರ್ಯವಾಗಿ ಬಂದುದರಿಂದ ಇದು ತಂದೆಯಿದ್ದಂತೆ ; ಪಟ್ಟ ಕಟ್ಟುವ ಸಂದರ್ಭದಲ್ಲಿ ಇದನ್ನು ಅರ್ಚಿಸುವುದರಿಂದ ಇದು ದೇವರಿದ್ದಂತೆ ; ಇದರ ಕೆಳಗಡೆ ಇದ್ದವರಿಗೆ ಯಾವುದೇ ಅಡಚಣೆ ,ಆತಂಕ ತೊಂದರೆಯಿಲ್ಲದಂತೆ ಇದು ನೆರಳಿನಂತೆ ಕಾಪಾಡುವುದರಿಂದ ಈ ಮುತ್ತಿನ ಸತ್ತಿಗೆಯು ತಾಯಿಯಂತೆ ; ಈ ಭೂಮಂಡಲದ ರಾಜನ ಶತ್ರುಗಳನ್ನು ನಡುಗಿಸಲು ಕಾರಣವಾಗುವುದರಿಂದ ಇದು ಚತುರಂಗಬಲವಿದ್ದಂತೆ ಇದನ್ನು ತಿಳಿದೂ ತಿಳಿದೂ ಮುತ್ತಿನ ಸತ್ತಿಗೆ ಕೇಳುವವರನ್ನು ಮೂರ್ಖರು ಎಂದು ಹರಿಶ್ಚಂದ್ರನು ಗಾನ ರಾಣಿಯರಿಗೆ ಹೇಳಿದನು.

**ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.**

೧. " ಸಂದ ಕಾರಿರುಳು ಕನ್ನೆಯರು ಹಗಲಂ ನೋಡಲೆಂದು ಬಂದರೋ "

ಉ : ಈ ಮೇಲಿನ ವಾಕ್ಯವನ್ನು ರಾಘವಾಂಕನು ಬರೆದ ಹರಿಶ್ಚಂದ್ರಕಾವ್ಯದಿಂದ ಆರಿಸಲಾದ ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಉ: ಹರಿಶ್ಚಂದ್ರನ ಬಾಯಿಂದ ಸುಳ್ಳನ್ನು ಹೇಳಿಸಿಯೇ ಸಿದ್ಧ ಎಂದು ವಸಿಷ್ಠರಿಗೆ ಸವಾಲೊಡ್ಡಿದ ವಿಶ್ವಾಮಿತ್ರನು ಹರಿಶ್ಚಂದ್ರನಿಗೆ ನೀಡಿದ ಮೊದಲ ಪರೀಕ್ಷೆಯಲ್ಲಿ ಹರಿಶ್ಚಂದ್ರನು ಯಶಸ್ವಿಯಾಗಿ ಗೆದ್ದಾಗ ಕ್ರೂರ ಪ್ರಾಣಿಗಳನ್ನು ಸೃಷ್ಟಿಸಿ ಅವರನ್ನು ಬೇಟೆಯಾಡಲೆಂದು ಬಂದ ಹರಿಶ್ಚಂದ್ರನು ತನ್ನಾಶ್ರಮದ ಬಳಿ ಬರುವಂತೆ ಮಾಡುವಲ್ಲಿ ವಿಶ್ವಾಮಿತ್ರನು ಯಶಸ್ವಿಯಾಗಿ ತದನಂತರದಲ್ಲಿ ಗಾನರಾಣಿಯರನ್ನು ಸೃಷ್ಟಿಸಿ ಸರ್ವಬುದ್ಧಿಗಳನ್ನು ಬಳಸಿ ಹರಿಶ್ಚಂದ್ರನನ್ನು ಮರುಳು ಮಾಡಿತ್ತಿರಿ ಎಂದು ಹರಿಶ್ಚಂದ್ರನ ಬಳಿ ಕಳಿಸಿದನು. ಆಗ ಬಂದ ಗಾನರಾಣಿಯರನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿ ಮೇಲಿನಂತೆ ಹೇಳಿದ್ದಾನೆ.

ಸ್ವಾರಸ್ಯ : ವಿಶ್ವಾಮಿತ್ರನಿಂದ ಸೃಷ್ಟಿಸಲ್ಪಟ್ಟ ಅಬಲೆಯರು ಹರಿಶ್ಚಂದ್ರನನ್ನು ಮರುಳು ಮಾಡಲೆಂದೇ ಬಂದರು ಎಂದು ರಾಘವಾಂಕನು ವರ್ಣಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

೨. " ಬಡತನದ ಹೊತ್ತಾನೆ ದೊರಕಿ ಫಲವೇನು ?"

ಉ : ಈ ಮೇಲಿನ ವಾಕ್ಯವನ್ನು ರಾಘವಾಂಕನು ಬರೆದ ಹರಿಶ್ಚಂದ್ರಕಾವ್ಯದಿಂದ ಆರಿಸಲಾದ ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಗಾನರಾಣಿಯರು ಹರಿಶ್ಚಂದ್ರನಿಗೆ ಹೇಳಿದರು. .

ಸಂದರ್ಭ : ವಿಶ್ವಾಮಿತ್ರನಿಂದ ಸೃಷ್ಟಿಸಲ್ಪಟ್ಟ ಗಾನ ರಾಣಿಯರು ಹರಿಶ್ಚಂದ್ರನ ಎದುರು ಬಂದು ಹಾಡಿದಾಗ ಅವರ ಗಾನ ಮಾಧುರ್ಯವನ್ನು ಮೆಚ್ಚಿದ ರಾಜನು ತನ್ನ ಆಭರಣಗಳನ್ನು ಅವರಿಗೆ ನೀಡಿದಾಗ ಅವರು ಬಡತನ ಬಂದಂತ ಸಮಯದಲ್ಲಿ ಆನೆ ಸಿಕ್ಕಿದರೆ ಏನು ಪ್ರಯೋಜನ ?ನೀರಡಿಕೆಯಾದ ಸಂದರ್ಭದಲ್ಲಿ ತುಪ್ಪ ಸಿಕ್ಕಿದರೆ ಏನು ಪ್ರಯೋಜನ ? ಅನಾರೋಗ್ಯವಿದ್ದ ಸಂದರ್ಭದಲ್ಲಿ ರಂಭೆ ದೊರೆತು ಪ್ರಯೋಜನವೇನು ? ಎಂದು ಕೇಳಿದರು.

ಸ್ವಾರಸ್ಯ : ಕಡು ಬಿಸಿಲಿನಲ್ಲಿ ಬಳಲಿ ಬೆಂಡಾದ ಸಂದರ್ಭದಲ್ಲಿ ನೆರಳಿನ ಆಶ್ರಯ ಬೇಕಾಗಿದೆ ಎನ್ನುವುದು ಗಾನ ರಾಣಿಯರ ಅಭಿಮತವಾಗಿದೆ.

೩. "ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಭೂಭುಜಯೆಂದರು "

ಉ : ಈ ಮೇಲಿನ ವಾಕ್ಯವನ್ನು ರಾಘವಾಂಕನು ಬರೆದ ಹರಿಶ್ಚಂದ್ರಕಾವ್ಯದಿಂದ ಆರಿಸಲಾದ ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಗಾನರಾಣಿಯರು ಹರಿಶ್ಚಂದ್ರನಿಗೆ ಹೇಳಿದರು.

ಸಂದರ್ಭ : ವಿಶ್ವಾಮಿತ್ರನಿಂದ ಸೃಷ್ಟಿಸಲ್ಪಟ್ಟ ಗಾನರಾಣಿಯರು ಹರಿಶ್ಚಂದ್ರನ ಬಳಿ ಬಂದು ಕೀರ್ತಿಸಿ ಹಾಡಿದಾಗ ಅವರ ಗಾನವನ್ನು ಮೆಚ್ಚಿದ ರಾಜನು ತನ್ನ ಆಭರಣಗಳನ್ನು ಅವರಿಗೆ ಬಹುಮಾನವಾಗಿ ಕೊಟ್ಟ ಸಂದರ್ಭದಲ್ಲಿ ಗಾನ ರಾಣಿಯರು ತಮಗೆ ಆಭರಣಗಳು ಬೇಕಿಲ್ಲ ಬೇಕಿರುವುದು ನಿನ್ನ ಮುತ್ತಿನ ಸತ್ತಿಗೆ ಎಂದು ಮೇಲಿನಂತೆ ಹೇಳಿದರು.

ಸ್ವಾರಸ್ಯ : ಕಡು ಬಿಸಿಲಿನಲ್ಲಿ ಬಳಲಿ ಬೆಂಡಾದ ಸಂದರ್ಭದಲ್ಲಿ ನೆರಳಿನ ಆಶ್ರಯ ಬೇಕಾಗಿದೆ ಎನ್ನುವುದರೊಂದಿಗೆ ಗಾನರಾಣಿಯರು ತಮಗೆ ರಾಜನ ಆಶ್ರಯ ಬೇಕಾಗಿದೆ ಎಂದು ಪರೋಕ್ಷವಾಗಿ ಕೋರಿದ್ದಾರೆ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. " ಅನುನಯದೊಳೆಲ್ಲವಂ ಕೊಡಬಹುದು ಬಿಡಬಹುದು ."

ಉ : ಈ ಮೇಲಿನ ವಾಕ್ಯವನ್ನು ರಾಘವಾಂಕನು ಬರೆದ ಹರಿಶ್ಚಂದ್ರಕಾವ್ಯದಿಂದ ಆರಿಸಲಾದ ನಿನ್ನ ಮುತ್ತಿನ ಸತ್ತಿಗೆಯನಿತ್ತು ಸಲಹು ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಹರಿಶ್ಚಂದ್ರ ಮಹಾರಾಜನು ಗಾನರಾಣಿಯರಿಗೆ ಕೇಳಿದನು.

ಸಂದರ್ಭ : ಗಾನ ರಾಣಿಯರು ನಿನ್ನ ಮುತ್ತಿನ ಸತ್ತಿಗೆಯನ್ನು ನಮಗೆ ಕೊಡಬೇಕೆಂದು ಹೇಳಿದಾಗ ರಾಜನು ಅನುನಯದಿಂದ ಕೇಳಿದಾಗ ಎಲ್ಲವನ್ನು ಕೊಡಬಹುದು ,ಬಿಡಬಹುದು .ಆದರೆ ಹೆತ್ತ ತಾಯಿಯನ್ನು ,ತಂದೆಯನ್ನು ,ಹೆಂಡತಿಯನ್ನು ,ನಂಬಿದ ಪರಿವಾರವನ್ನು ಬೇರೆಯವರಿಗೆ ಕೊಡುವಂತಹ ಕಲಿಗಳು ಇರುವರೇ ಎಂದು ಗಾನರಾಣಿಯರಿಗೆ ಕೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಮುತ್ತಿನ ಸತ್ತಿಗೆಯು ,ತಾಯಿ ತಂದೆ ,ಹೆಂಡತಿ ,ದೇವರು ಈ ಎಲ್ಲಕ್ಕೂ ಸಮಾನವಾದುದು ಎಂಬ ಹರಿಶ್ಚಂದ್ರನ ಭಾವನೆ ಇಲ್ಲಿ ವ್ಯಕ್ತವಾಗಿದೆ.

**ಭಾಷಾ ಚಟುವಟಿಕೆ**

ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಷಟ್ಪದಿ ಎಂದರೇನು ?ವಿಧಗಳಾವುವು ?

ಉ : ಷಟ್ಪದಿಯು ಆರು ಸಾಲುಗಳ ಪದ್ಯ ಮತ್ತು ಮಾತ್ರಾಗಣಕ್ಕೆ ಸೇರಿದ ಪದ್ಯ ಪ್ರಕಾರ .ಅದರ ವಿಧಗಳು

- ಶರ
- ಕುಸುಮ
- ಭೋಗ
- ಭಾಮಿನಿ
- ಪರಿವರ್ಧಿನಿ
- ವಾರ್ಧಕ

೨. ಭಾಮಿನಿ ಷಟ್ಪದಿಯ ಲಕ್ಷಣವೇನು ?

ಉ: ಭಾಮಿನಿ ಷಟ್ಪದಿಯ ೧,೨,೪ ಮತ್ತು ೫ ನೆಯ ಸಾಲುಗಳಲ್ಲಿ ಮೂರು ಮಾತ್ರೆಗಳ ಗಣದ ಅನಂತರ ನಾಲ್ಕು ಮಾತ್ರೆಗಳ ಗಣಗಳು ಅನುಕ್ರಮವಾಗಿ ಎರಡೆರಡು ಬರುತ್ತವೆ ೩ ಮತ್ತು ೬ ನೆಯ ಸಾಲುಗಳಲ್ಲಿ ಮೂರು ಮಾತ್ರೆಗಳ ಗಣದ ಅನಂತರ ನಾಲ್ಕು ಮಾತ್ರೆಗಳ ಗಣಗಳು ಅನುಕ್ರಮವಾಗಿ ಮೂರು ಮೂರು ಇದ್ದು ,ಕೊನೆಯಲ್ಲಿ ಒಂದು ಗುರುವಿನಿಂದ ಕೂಡಿರುತ್ತವೆ.

೩. ವಾರ್ಧಕ ಷಟ್ಪದಿಯ ಲಕ್ಷಣವನ್ನು ವಿವರಿಸಿ.

ಉ: ವಾರ್ಧಕ ಷಟ್ಪದಿಯ ೧,೨ ,೪ ಮತ್ತು ೫ ನೆಯ ಸಾಲುಗಳಲ್ಲಿ ೫ ಮಾತ್ರೆಗಳ ೪ ಗಣಗಳಿರುತ್ತವೆ. ೩ ಮತ್ತು ೬ ನೆಯ ಸಾಲುಗಳಲ್ಲಿ ೫ ಮಾತ್ರೆಗಳ ೬ ಗಣಗಳು ಮತ್ತು ಒಂದು ಗುರು ನಿಯತವಾಗಿರುತ್ತವೆ.

ಇ. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.


U U U U U | - U - | U U U U U | U U U U U
ಅನುನಯ ದೊ| ಳೆಲ್ಲವಂ| ಕೊಡಬಹುದು| ಬಿಡಬಹುದು
UUU _ | UUU - | - U - | - U -
ಜನನಿಯಂ| ಜನಕನಂ| ನಲ್ಲಳಂ ದೈವವಂ
U U _ U | - U - | - U UU| - U - | U U U UU | UUUUU|_
ಮನವಾರೆ| ನಂಬಿ ನ| ಚ್ಚರ್ದ ಪರಿ| ವಾರಮಂ| ಕೊಡುವ ಬಿಡು| ವತಿಕಲಿಗ| ಳು ವಾರ್ಧಕ ಷಟ್ಪದಿ

# ಪದ್ಯಪಾಠ -೮ ಕನ್ನಡ -ನಾಡು ನುಡಿ

## ಕೃತಿಕಾರರ ಪರಿಚಯ





ಶ್ರೀ ವಿಜಯ : ಶ್ರೀ ವಿಜಯನು ಸುಮಾರು ೯ ನೆಯ ಶತಮಾನದಲ್ಲಿ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿದ್ದನು. ಇವನು ಕವಿರಾಜಮಾರ್ಗ ಎಂಬ ಲಾಕ್ಷಣಿಕ ಗ್ರಂಥವನ್ನು ರಚಿಸಿದ್ದಾನೆ.




ನಯಸೇನ : ನಯಸೇನನು ಕ್ರಿ.ಶ. ಸುಮಾರು ೧೨ ನೆಯ ಶತಮಾನದಲ್ಲಿ ಧಾರವಾಡ ಜಿಲ್ಲೆಯ ಮುಳಗುಂದದಲ್ಲಿ ಜೀವಿಸಿದ್ದನು. ಈತನು ಧರ್ಮಾಮೃತ ಎಂಬ ಚಂಪೂ ಕೃತಿಯನ್ನು ರಚಿಸಿದ್ದಾನೆ.

ನೇಮಿಚಂದ್ರ : ನೇಮಿಚಂದ್ರನು ಕ್ರಿ.ಶ. ಸುಮಾರು ೧೨ ನೆಯ ಶತಮಾನದಲ್ಲಿ ಜೀವಿಸಿದ್ದನು. ಇವನು ಲೀಲಾವತೀ ಪ್ರಬಂಧ ಮತ್ತು ಅರ್ಧನೇಮಿ ಪುರಾಣ ಎಂಬ ಪ್ರಸಿದ್ಧ ಕಾವ್ಯಗಳನ್ನು ರಚಿಸಿದ್ದಾನೆ.



ಮಹಲಿಂಗರಂಗ: ಇವನು ಕ್ರಿ.ಶ. ಸುಮಾರು ೧೭ ನೆಯ ಶತಮಾನದಲ್ಲಿ ಜೀವಿಸಿದ್ದನು. ಇವನು ಅನುಭವಾಮೃತ ಎಂಬ ಕೃತಿಯನ್ನು ರಚಿಸಿದ್ದಾನೆ. ಇವನ ನಿಜನಾಮ ಶ್ರೀರಂಗ. ಇವನ ಆರಾಧ್ಯ ದೈವ ಶ್ರೀ ಶೈಲ ಮಲ್ಲಿಕಾರ್ಜುನ.



ಅಂಡಯ್ಯ: ಅಂಡಯ್ಯನು ಕ್ರಿ.ಶ. ಸುಮಾರು ೧೩ ನೆಯ ಶತಮಾನದಲ್ಲಿ ಕದಂಬರ ದೊರೆ ಕಾಮದೇವನ ಆಶ್ರಯದಲ್ಲಿದ್ದನು. ಇವನು ಕಬ್ಬಿಗರ ಕಾವ ಎಂಬ ಚಂಪೂಕಾವ್ಯವನ್ನು ರಚಿಸಿದ್ದಾನೆ.

ಕನ್ನಡ ನಾಡು-ನುಡಿ ಪದ್ಯದಲ್ಲಿ ಇರುವ ಎಲ್ಲ ನುಡಿಗಳನ್ನೂ ಬಿ.ಎಂ.ಶ್ರೀ ಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಿಕೊಳ್ಳಲಾಗಿದೆ.

## ಸಾರಾಂಶ

ಕನ್ನಡ ನಾಡಿನ ಜನ ಹೆಚ್ಚು ಕಡಿಮೆಗಳಾಗದಂತೆ ಸಂದರ್ಭಕ್ಕೆ ತಕ್ಕ ಹಾಗೆ ಹದವರಿತು ಮಾತಾಡುವುದಕ್ಕೂ ಆಡಿದ್ದನ್ನು ಅರ್ಥ ಮಾಡಿಕೊಂಡು ವಿಚಾರಮಾಡುವುದಕ್ಕೂ ಸಮರ್ಥರಾಗಿದ್ದರು. ಅವರು ಕಾವ್ಯಗಳನ್ನು ಉದ್ದೇಶಪೂರ್ವಕವಾಗಿ ಓದಿ ಅಭ್ಯಾಸ ಮಾಡಿದ್ದರೂ ಕವಿಗಳು ಉಪಯೋಗಿಸಿದ ವಾಕ್ಯಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಎಂದರೆ ಅವುಗಳನ್ನು ಕೇಳಿ ಅವುಗಳ ಸಾರವತ್ತಾದ ಭಾಗಗಳನ್ನು ಬಲ್ಲವರಾಗಿದ್ದರು. ವಿದ್ಯಾವಂತರಲ್ಲದಿದ್ದರೂ ಕಾವ್ಯ ರಚನೆ ಮಾಡಬಲ್ಲವರಾಗಿದ್ದರು. ಎಂದು ಕವಿ ಶ್ರೀ ವಿಜಯ ಕನ್ನಡ ನಾಡಿನ ಜನರ ಕುರಿತು ವರ್ಣಿಸಿದ್ದಾನೆ.

ಸಂಸ್ಕೃತದಲ್ಲಿ ಹೇಳುವುದಾದರೆ ಸಂಪೂರ್ಣವಾಗಿ ಸಂಸ್ಕೃತದಲ್ಲಿಯೇ ಹೇಳಲಿ ಅಥವಾ ಸಂಸ್ಕೃತದಲ್ಲಿಯೇ ಸಾಹತ್ಯ ರಚನೆ ಮಾಡಲಿ ,ಶುದ್ಧ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಪದಗಳನ್ನು ಸೇರಿಸುವುದು ಬೇಡ. ತುಪ್ಪ ಮತ್ತು ತೈಲವನ್ನು ಸೇರಿಸಿದ ಅಸ್ವಾದು ಮಿಶ್ರಣ ಬೇಡ. ಕನ್ನಡದಲ್ಲಿ ಸಂಸ್ಕೃತವನ್ನು ಸೇರಿಸುವುದು ತುಪ್ಪ ಮತ್ತು ತೈಲಗಳ ಅಸ್ವಾದು ಮಿಶ್ರಣದಂತೆ ಎಂದು ಕನ್ನಡ ಭಾಷೆಯಲ್ಲಿ ಸಂಸ್ಕೃತ ಪದಗಳನ್ನು ಸೇರಿಸುವ ಕುರಿತು ನಯಸೇನ ತನ್ನ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾನೆ.

ಕಪಿ ಸಂತತಿ  ಸೇತುವೆ ಕಟ್ಟಿದರೋ ಕಟ್ಟಲಿಲ್ಲವೋ ,ವಾಮನ ರೂಪ ಮುಗಿಲನ್ನು ಮುಟ್ಟಿದನೋ ಮುಟ್ಟಲಿಲ್ಲವೋ ನರನು ಹರನ ಗಂಟಲನ್ನು ಮೆಟ್ಟಿದನೋ ಮೆಟ್ಟಲಿಲ್ಲವೋ ಆದರೆ ಈ ಕವಿಗಳು ತಮ್ಮ ಕೃತಿಗಳಲ್ಲಿ ಕಟ್ಟಿದರು , ಮುಟ್ಟಿದರು ,ಒತ್ತಿದರು ,ಮೆಟ್ಟಿದರು .ಏನೆಲ್ಲ ಮಾಡಿದರು .ಅದೇನು ಅವರ ಕೌಶಲ್ಯವೋ ,ಹೆಗ್ಗಳಿಕೆಯೋ ಈ  ಕವಿರಾಜರದು ಎಂದು ನೇಮಿಚಂದ್ರನು ಕವೀಂದ್ರರ ಶ್ರೇಷ್ಠತೆಯನ್ನು ವರ್ಣಿಸಿದ್ದಾನೆ.

ಕನ್ನಡ ಭಾಷೆ ಎಷ್ಟು ಸುಲಭವಾಗಿದೆ ಎಂದರೆ ಅದು ಸುಲಿದ ಬಾಳೆಯ ಹಣ್ಣಿನಂತೆ ,ಕಬ್ಬಿನ ಸಿಗುರು ಎಂದರೆ ಹೊರಪದರವನ್ನು ತೆಗೆದು ಕಬ್ಬು ಸವಿಯಲು ಸಿದ್ಧವಾದಂತೆ ಇದೆ .ಕುದಿಸಿ ಆರಿಸಿದ ಹಾಲು ಬಿಸಿಯಿಲ್ಲದೆ ಕುಡಿಯಲು ಯೋಗ್ಯವಾದಂತೆ ಇದೆ. ಸುಂದರವಾದ ಕನ್ನಡದ ನುಡಿಯಲ್ಲಿ ಬರೆಯಲ್ಪಟ್ಟಿರುವ ಈ ಅನುಭವಾಮೃತದಿಂದ ಯಾವ ಸಾಧಕನಾದರೂ ತನ್ನ ನಿಜಸ್ವರೂಪವನ್ನು ತಿಳಿದು ಆತ್ಮಸಾಕ್ಷಾತ್ಕಾರವನ್ನು ಅಂದರೆ ಮೋಕ್ಷವನ್ನು ಪಡೆಯಬಹುದು. ಕೇವಲ ಸಂಸ್ಕೃತ ಗ್ರಂಥಗಳನ್ನು ಓದಿ ಸಾಧಿಸಬೇಕೆಂಬುದೇನೂ ನಿಯಮವಿಲ್ಲ ಎನ್ನುತ್ತಾನೆ ಕವಿ ಮಹಲಿಂಗರಂಗ. ಈ ಕವಿ ಇಲ್ಲಿ ಸಂಸ್ಕೃಥವನ್ನು ತೆಗಳುತ್ತಿಲ್ಲ. ನಮ್ಮ ಶಾಸ್ತ್ರದಲ್ಲಿ ಒಂದು ನಿಯಮವಿದೆ. 'ನಿಂದಾ ತು ನ ನಿಂಧ್ಯರ್ಥಂ ಪರಂತು ಸ್ತುತ್ಯರ್ಥಂ ' ಗ್ರಂಥದಲ್ಲಿ ಅಥವಾ ಮಾತುಗಳಲ್ಲಿ ವಿವರಿಸುವ ನಿಂದನೆ ಕೇವಲ ನಿಂದನೆಗಾಗಿಯಲ್ಲ ,ಅದು ಪ್ರಸ್ತುತ ಗ್ರಂಥವನ್ನು ಸ್ತುತಿಸಲು.

ಮಲ್ಲಿಗೆ ,ಸಂಪಿಗೆ ,ದಾಳಿಂಬೆಗಳಷ್ಟೇ ಅಲ್ಲದೇ ತೆಂಗು ,ಅಡಿಕೆ ,ಮಾವು ಮೊದಲಾಧ ಗಿಡಮರಗಳು ಕನ್ಡ ನಾಡಿನಲ್ಲಿವೆ. ಇವಿಲ್ಲದೇ ಕನ್ನಡ ನಾಡಿನ ಗಿಡಮರಗಳಿಲ್ಲ ಎಂದು ಅಂಡಯ್ಯನು ಕನ್ನಡ ನಾಡಿನ ಪ್ರಕೃತಿ ರಮ್ಯತೆಯನ್ನು ಮೆಚ್ಚಿ ವರ್ಣಿಸಿದ್ದಾನೆ.

ಪ್ರಶ್ನೋತ್ತರಗಳು

**ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಪದನರಿದು ನುಡಿಯುವವರು ಯಾರು ಎಂದು ಕವಿ ಹೇಳಿದ್ದಾರೆ ?

ಉ: ಪದನರಿದು ನುಡಿಯುವವರು ಕನ್ನಡ ನಾಡಿನ ಜನರು ಎಂದು ಕವಿ ಹೇಳಿದ್ದಾರೆ.

೨. ತುಪ್ಪದೊಡನೆ ಯಾವುದನ್ನು ಬೆರೆಸಬಾರದು ?

ಉ: ತುಪ್ಪದೊಡನೆ ತೈಲವನ್ನು ಬೆರೆಸಬಾರದು.

೩. ಮಹಲಿಂಗರಂಗನ ಪ್ರಕಾರ ಸುಲಿದ ಬಾಳೆಯ ಹಣ್ಣಿನಂತೆ ಇರುವ ಭಾಷೆ ಯಾವುದು ?

ಉ: ಮಹಲಿಂಗರಂಗನ ಪ್ರಕಾರ ಸುಲಿದ ಬಾಳೆಯ ಹಣ್ಣಿನಂತೆ ಇರುವ ಭಾಷೆ ಕನ್ನಡ .

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಕನ್ನಡಿಗರ ವಿಶೇಷತೆಯನ್ನು ಶ್ರೀ ವಿಜಯ ಹೇಗೆ ಸಾರಿದ್ದಾನೆ?

ಉ : ಕನ್ನಡ ನಾಡಿನ ಜನ ಹೆಚ್ಚು ಕಡಿಮೆಗಳಾಗದಂತೆ ಸಂದರ್ಭಕ್ಕೆ ತಕ್ಕ ಹಾಗೆ ಹದವರಿತು ಮಾತಾಡುವುದಕ್ಕೂ ಆಡಿದ್ದನ್ನು ಅರ್ಥ ಮಾಡಿಕೊಂಡು ವಿಚಾರಮಾಡುವುದಕ್ಕೂ ಸಮರ್ಥರಾಗಿದ್ದರು. ಅವರು ಕಾವ್ಯಗಳನ್ನು ಉದ್ದೇಶಪೂರ್ವಕವಾಗಿ ಓದಿ ಅಭ್ಯಾಸ ಮಾಡದಿದ್ದರೂ ಕವಿಗಳು ಉಪಯೋಗಿಸಿದ ವಾಕ್ಯಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಎಂದರೆ ಅವುಗಳನ್ನು ಕೇಳಿ ಅವುಗಳ ಸಾರವತ್ತಾದ ಭಾಗಗಳನ್ನು ಬಲ್ಲವರಾಗಿದ್ದರು. ವಿದ್ಯಾವಂತರಲ್ಲದಿದ್ದರೂ ಕಾವ್ಯ ರಚನೆ ಮಾಡಬಲ್ಲವರಾಗಿದ್ದರು. ಎಂದು ಕವಿ ಶ್ರೀ ವಿಜಯ ಕನ್ನಡ ನಾಡಿನ ಜನರ  ವಿಶೇಷತೆಯನ್ನು  ವರ್ಣಿಸಿದ್ದಾನೆ.

೨. ಕನ್ನಡ ಮತ್ತು ಸಂಸ್ಕೃತ ಭಾಷಾ ಬಳಕೆಯ ಬಗ್ಗೆ ನಯಸೇನ ಏನು ಹೇಳುತ್ತಾನೆ ?

ಉ : ಸಂಸ್ಕೃತದಲ್ಲಿ ಹೇಳುವುದಾದರೆ ಸಂಪೂರ್ಣವಾಗಿ ಸಂಸ್ಕೃತದಲ್ಲಿಯೇ ಹೇಳಲಿ ಅಥವಾ ಸಂಸ್ಕೃತದಲ್ಲಿಯೇ ಸಾಹತ್ಯ ರಚನೆ ಮಾಡಲಿ ,ಶುದ್ಧ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಪದಗಳನ್ನು ಸೇರಿಸುವುದು ಬೇಡ. ತುಪ್ಪ ಮತ್ತು ತೈಲವನ್ನು ಸೇರಿಸಿದ ಅಸಾಧ್ವು ಮಿಶ್ರಣ ಬೇಡ. ಕನ್ನಡದಲ್ಲಿ ಸಂಸ್ಕೃತವನ್ನು ಸೇರಿಸುವುದು ತುಪ್ಪ ಮತ್ತು ತೈಲಗಳ ಅಸಾಧ್ವು ಮಿಶ್ರಣದಂತೆ ಎಂದು ನಯಸೇನ ಹೇಳಿದ್ದಾನೆ .

೩. ಕವೀಂದ್ರರ ಶ್ರೇಷ್ಠತೆಯನ್ನು ನೇಮಿಚಂದ್ರನು ಹೇಗೆ ವರ್ಣಿಸಿದ್ದಾನೆ ?

ಉ: ಕಪಿಸಂತತಿ ಸೇತುವೆ ಕಟ್ಟಿದರೋ ಕಟ್ಟಲಿಲ್ಲವೋ ,ವಾಮನ ರೂಪ ಮುಗಿಲನ್ನು ಮುಟ್ಟಿದನೋ ಮುಟ್ಟಲಿಲ್ಲವೋ ನರನು ಹರನ ಗಂಟಲನ್ನು ಮೆಟ್ಟಿದನೋ ಮೆಟ್ಟಲಿಲ್ಲವೋ ಆದರೆ ಈ ಕವಿಗಳು ತಮ್ಮ ಕೃತಿಗಳಲ್ಲಿ ಕಟ್ಟಿದರು , ಮುಟ್ಟಿದರು ,ಒತ್ತಿದರು ,ಮೆಟ್ಟಿದರು .ಏನೆಲ್ಲ ಮಾಡಿದರು .ಅದೇನು ಅವರ ಕೌಶಲ್ಯವೋ ,ಹೆಗ್ಗಳಿಕೆಯೋ ಈ ಕವಿರಾಜರದು ಎಂದು ನೇಮಿಚಂದ್ರನು ಕವೀಂದ್ರರ ಶ್ರೇಷ್ಠತೆಯನ್ನು ವರ್ಣಿಸಿದ್ದಾನೆ.

೪. ಕನ್ನಡ ನುಡಿಯಲ್ಲೇ ಮೋಕ್ಷಸಾಧನೆ ಎಂದು ಕವಿ ಮಹಲಿಂಗರಂಗ ಹೇಗೆ ಸಾಧಿಸುತ್ತಾರೆ ?

ಉ: ಕನ್ನಡ ಭಾಷೆ ಎಷ್ಟು ಸುಲಭವಾಗಿದೆ ಎಂದರೆ ಅದು ಸುಲಿದ ಬಾಳೆಯ ಹಣ್ಣಿನಂತೆ ,ಕಬ್ಬಿನ ಸಿಗುರು ಎಂದರೆ ಹೊರಪದರವನ್ನು ತೆಗೆದು ಕಬ್ಬು ಸವಿಯಲು ಸಿದ್ಧವಾದಂತೆ ಇದೆ .ಕುದಿಸಿ ಆರಿಸಿದ ಹಾಲು ಬಿಸಿಯಿಲ್ಲದೆ ಕುಡಿಯಲು ಯೋಗ್ಯವಾದಂತೆ ಇದೆ. ಸುಂದರವಾದ ಕನ್ನಡದ ನುಡಿಯಲ್ಲಿ ಬರೆಯಲ್ಪಟ್ಟಿರುವ ಈ ಅನುಭವಾಮೃತದಿಂದ ಯಾವ ಸಾಧಕನಾದರೂ ತನ್ನ ನಿಜಸ್ವರೂಪವನ್ನು ತಿಳಿದು ಆತ್ಮಸಾಕ್ಷಾತ್ಕಾರವನ್ನು ಅಂದರೆ ಮೋಕ್ಷವನ್ನು ಪಡೆಯಬಹುದು. ಕೇವಲ ಸಂಸ್ಕೃತ ಗ್ರಂಥಗಳನ್ನು ಓದಿ ಸಾಧಿಸಬೇಕೆಂಬುದೇನೂ ನಿಯಮವಿಲ್ಲ ಎನ್ನುತ್ತಾನೆ ಕವಿ ಮಹಲಿಂಗರಂಗ.

೫. ಕನ್ನಡ ನಾಡಿನ ಪ್ರಾಕೃತಿಕ ವರ್ಣನೆಯನ್ನು ಆಂಡಯ್ಯ ಕವಿ ಹೇಗೆ ಸಾರಿದ್ದಾರೆ ?

ಉ: ಮಲ್ಲಿಗೆ ,ಸಂಪಿಗೆ ,ದಾಳಿಂಬೆಗಳಷ್ಟೇ ಅಲ್ಲದೇ ತೆಂಗು ,ಅಡಿಕೆ ,ಮಾವು ಮೊದಲಾಧ ಗಿಡಮರಗಳು ಕನ್ಡ ನಾಡಿನಲ್ಲಿವೆ. ಇವಿಲ್ಲದೇ ಕನ್ನಡ ನಾಡಿನ ಗಿಡಮರಗಳಿಲ್ಲ ಎಂದು ಅಂಡಯ್ಯನು ಕನ್ನಡ ನಾಡಿನ ಪ್ರಕೃತಿ ರಮ್ಯತೆಯನ್ನು ಮೆಚ್ಚಿ ವರ್ಣಿಸಿದ್ದಾನೆ.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.

೧. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಲಾದ ಕನ್ನಡ -ನಾಡುನುಡಿ ಪಧ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕನ್ನಡ ನಾಡಿನ ಜನರ ಕುರಿತು ಹೇಳುವ ಸಂದರ್ಭದಲ್ಲಿ ಕವಿ ಶ್ರೀ ವಿಜಯ ಹೇಳಿದ್ದಾನೆ.

ಸಂದರ್ಭ : ಕನ್ನಡ ನಾಡಿನ ಜನ ಹೆಚ್ಚು ಕಡಿಮೆಗಳಾಗದಂತೆ ಸಂದರ್ಭಕ್ಕೆ ತಕ್ಕ ಹಾಗೆ ಹದವರಿತು ಮಾತಾಡುವುದಕ್ಕೂ ಆಡಿದ್ದನ್ನು ಅರ್ಥ ಮಾಡಿಕೊಂಡು ವಿಚಾರಮಾಡುವುದಕ್ಕೂ ಸಮರ್ಥರಾಗಿದ್ದರು. ಅವರು ಕಾವ್ಯಗಳನ್ನು ಉದ್ದೇಶಪೂರ್ವಕವಾಗಿ ಓದಿ ಅಭ್ಯಾಸ ಮಾಡದಿದ್ದರೂ ಕವಿಗಳು ಉಪಯೋಗಿಸಿದ ವಾಕ್ಯಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು ಎಂದು ಕವಿ ಶ್ರೀ ವಿಜಯ ಹೇಳಿದ್ದಾನೆ .

ಸ್ವಾರಸ್ಯ : ನಮ್ಮ ಕನ್ನಡ ನಾಡಿನ ಜನರು ಅಕ್ಷರಸ್ಥರಲ್ಲದಿದ್ದರೂ ಕಾವ್ಯ ಪ್ರಯೋಗ ಪರಿಣತರಾಗಿದ್ದರು ಎನ್ನುವುದನ್ನು ಮೇಲಿನ ವಾಕ್ಯವು ಸೂಚಿಸುವುದು.

೨. ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಲಾದ ಕನ್ನಡ -ನಾಡುನುಡಿ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ನಯಸೇನ ಹೇಳಿದ್ದಾನೆ.

ಸಂದರ್ಭ : : ಸಂಸ್ಕೃತದಲ್ಲಿ ಹೇಳುವುದಾದರೆ ಸಂಪೂರ್ಣವಾಗಿ ಸಂಸ್ಕೃತದಲ್ಲಿಯೇ ಹೇಳಲಿ ಅಥವಾ ಸಂಸ್ಕೃತದಲ್ಲಿಯೇ ಸಾಹತ್ಯ ರಚನೆ ಮಾಡಲಿ ,ಶುದ್ಧ ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಪದಗಳನ್ನು ಸೇರಿಸುವುದು ಬೇಡ. ತುಪ್ಪ ಮತ್ತು ತೈಲವನ್ನು ಸೇರಿಸಿದ ಅಸ್ವಾದ್ಯು ಮಿಶ್ರಣ ಬೇಡ ಎಂದು ನಯಸೇನ ಹೇಳಿದ್ದಾನೆ.

ಸ್ವಾರಸ್ಯ : ನಮ್ಮ ಕನ್ನಡವು ಕೆಲವು ಪಂಡಿತರಿಂದ ಸಂಸ್ಕೃತಮಯವಾಗುವುದನ್ನು ಸಹಿಸದೇ ಶುದ್ಧ ಕನ್ನಡವೇ ಇರಬೇಕೆಂಬ ಕವಿಯ ಕಾಳಜಿ ಇಲ್ಲಿ ವ್ಯಕ್ತವಾಗಿದೆ.

೩. ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ .

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಲಾದ ಕನ್ನಡ -ನಾಡುನುಡಿ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ನೇಮಿಚಂದ್ರ ಹೇಳಿದ್ದಾನೆ.

ಸಂದರ್ಭ : ಕಪಿಸಂತತಿ ಸೇತುವೆ ಕಟ್ಟಿದರೋ ಕಟ್ಟಲಿಲ್ಲವೋ ,ವಾಮನ ರೂಪ ಮುಗಿಲನ್ನು ಮುಟ್ಟಿದನೋ ಮುಟ್ಟಲಿಲ್ಲವೋ ನರನು ಹರನ ಗಂಟಲನ್ನು ಮೆಟ್ಟಿದನೋ ಮೆಟ್ಟಲಿಲ್ಲವೋ ಆದರೆ ಈ ಕವಿಗಳು ತಮ್ಮ ಕೃತಿಗಳಲ್ಲಿ ಕಟ್ಟಿದರು , ಮುಟ್ಟಿದರು ,ಒತ್ತಿದರು ,ಮೆಟ್ಟಿದರು .ಏನೆಲ್ಲ ಮಾಡಿದರು ಎಂದು ಕವಿ ಹೇಳಿದ್ದಾನೆ.

ಸ್ವಾರಸ್ಯ : ಕನ್ನಡ ಕವಿಗಳ ಶ್ರೇಷ್ಠ ಕಾವ್ಯ ರಚನೆಯ ಕುರಿತು ಹೇಳುವಾಗ ಕವಿ ಮೇಲಿನಂತೆ ವರ್ಣಿಸಿದ್ದಾನೆ.

೪. ಕಳೆದ ಸಿಗುರಿನ ಕಬ್ಬಿನಂದದಿ

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಲಾದ ಕನ್ನಡ -ನಾಡುನುಡಿ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಕವಿ ಮಹಲಿಂಗರಂಗ ಹೇಳಿದ್ದಾನೆ .

ಸಂದರ್ಭ : ಕನ್ನಡ ಭಾಷೆ ಎಷ್ಟು ಸುಲಭವಾಗಿದೆ ಎಂದರೆ ಅದು ಸುಲಿದ ಬಾಳೆಯ ಹಣ್ಣಿನಂತೆ ,ಕಬ್ಬಿನ ಸಿಗುರು ಎಂದರೆ ಹೊರಪದರವನ್ನು ತೆಗೆದು ಕಬ್ಬು ಸವಿಯಲು ಸಿದ್ಧವಾದಂತೆ ಇದೆ .ಕುದಿಸಿ ಆರಿಸಿದ ಹಾಲು ಬಿಸಿಯಿಲ್ಲದೆ ಕುಡಿಯಲು ಯೋಗ್ಯವಾದಂತೆ ಇದೆ. ಸುಂದರವಾದ ಕನ್ನಡದ ನುಡಿಯಲ್ಲಿ ಬರೆಯಲ್ಪಟ್ಟಿರುವ ಈ ಅನುಭವಾಮೃತದಿಂದ ಯಾವ ಸಾಧಕನಾದರೂ ತನ್ನ ನಿಜಸ್ವರೂಪವನ್ನು ತಿಳಿದು ಆತ್ಮಸಾಕ್ಷಾತ್ಕಾರವನ್ನು ಅಂದರೆ ಮೋಕ್ಷವನ್ನು ಪಡೆಯಬಹುದು ಎಂದು ಕವಿ ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ನಮ್ಮ ಕನ್ನಡವು ಸರಳ ಸುಂದರ ,ಸಂಸ್ಕೃತಕ್ಕಿಂತ ಯಾವುದರಲ್ಲಿಯೂ ಕಡಿಮೆಯಿಲ್ಲ ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೫. ದಾಳಿಂಬಮಲ್ಲದೊಪ್ಪುವ ಚೆಂದಂ

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರ ಸಂಪಾದಕತ್ವದಲ್ಲಿ ಪ್ರಕಟಿಸಿರುವ ಕನ್ನಡ ಬಾವುಟ ಕೃತಿಯಿಂದ ಆರಿಸಲಾದ ಕನ್ನಡ -ನಾಡುನುಡಿ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. .ಈ ಮಾತನ್ನು ಆಂಡಯ್ಯ ಕವಿ ಹೇಳಿದ್ದಾನೆ.
ಸಂದರ್ಭ : ಮಲ್ಲಿಗೆ ,ಸಂಪಿಗೆ ,ದಾಳಿಂಬೆಗಳಷ್ಟೇ ಅಲ್ಲದೇ ತೆಂಗು ,ಅಡಿಕೆ ,ಮಾವು ಮೊದಲಾಧ ಗಿಡಮರಗಳು ಕನ್ಡ ನಾಡಿನಲ್ಲಿವೆ. ಇವಿಲ್ಲದೇ ಕನ್ನಡ ನಾಡಿನ ಗಿಡಮರಗಳಿಲ್ಲ ಎಂದು ಅಂಡಯ್ಯನು ಕನ್ನಡ ನಾಡಿನ ಪ್ರಕೃತಿ ರಮ್ಯತೆಯನ್ನು ಮೆಚ್ಚಿ ವರ್ಣಿಸುವಾಗ ಕವಿ ಮೇಲಿನಂತೆ ಹೇಳಿದ್ದಾನೆ.
ಸ್ವಾರಸ್ಯ : ಕನ್ನಡ ನಾಡಿನ ಪ್ರಾಕೃತಿಕ ಸೌಂದರ್ಯ ಇಲ್ಲಿ ವ್ಯಕ್ತವಾಗಿದೆ.

**ಭಾಷಾ ಚಟುವಟಿಕೆ .**

ಖ್ಯಾತ ಕರ್ಣಾಟಕ ವೃತ್ತಗಳು ಯಾವುವು ?
ಉ: ಉತ್ಪಲಮಾಲಾವೃತ್ತ ,ಚಂಪಕಮಾಲಾವೃತ್ತಸ್ರಗ್ಧರಾವೃತ್ತ ,ಮಹಾಸ್ರಗ್ಧರಾವೃತ್ತ ,ಶಾರ್ದೂಲವಿಕ್ರೀಡಿತ ವೃತ್ತ ,ಮತ್ತೇಭವಿಕ್ರೀಡಿತ ವೃತ್ತ ಇವು ಆರು ಖ್ಯಾತ ಕರ್ಣಾಟಕ ವೃತ್ತಗಳಾಗಿವೆ.

ಅಕ್ಷರಗಣದಲ್ಲಿ ಎಷ್ಟು ವಿಧ ?ಅವುಗಳು ಯಾವುವು ?
ಉ: ಅಕ್ಷರಗಣಗಳು ಎಂಟು .ಅವುಗಳನ್ನು ಸೂತ್ರದ ಸಹಾಯದಿಂದ ಹೀಗೆ ಹೇಳಬಹುದು.

ಯಮಾತಾರಾಜಭಾನ ಸಲಗಂ

ಯಮಾತಾ : U - - = ಯಗಣ

ಮಾತಾರಾ : - - - = ಮಗಣ

ತಾರಾಜ : - - U = ತಗಣ

ರಾಜಭಾ : - U - = ರಗಣ

ಜಭಾನ : U – U = ಜಗಣ

ಭಾನಸ : - U U = ಭಗಣ

ನಸಲ : U U U = ನಗಣ

ಸಲಗಂ : U U - = ಸಗಣ

ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ ಛಂದಸ್ಸಿನ ಹೆಸರು ಬರೆಯಿರಿ.
- UU | - - U | UUU
ಸಕ್ಕದ | ಮಂ ಪೇಳ್ವೊ ಡೆ ನೆರೆ
- UU | - - U | - U - | UU -
ಸಕ್ಕದ ಮಂ ಪೇಳ್ಗೆ | ಶುದ್ಧ ಕ| ನ್ನಡದೊಳ್
ಕಂದಪದ್ಯ

ಭ ರ ನ ಭ ಭ ರ ಲ +ಗು
- U U | - U – |U UU| - UU| - UU | - U - | U -
ಕಟ್ಟುಗೆ |ಕಟ್ಟದಿ| ರ್ಕೆ ಕಡ| ಲಂ ಕಪಿ| ಸಂತತಿ | ವಾಮನ| ಕ್ರಮಂ

ಉತ್ಪಲಮಾಲಾವೃತ್ತ

U U U | - U U | - U| – U U
ಸುಲಿದ |ಬಾಳೆಯ |ಹಣ್ಣಿ ನಂದದಿ

UUU| UUUU| - U | - UU
ಕಳೆದ ಸಿಗುರಿನ ಕಬ್ಬಿ| ನಂದದಿ

UUU| - UU | - U| – UU | UU U |- - |-
ಅಳಿದ ಉಷ್ಣದ ಹಾಲಿ| ನಂದದಿ |ಸುಲಭ| ವಾಗಿ| ರ್ಪ

ಭಾಮಿನಿ ಷಟ್ಪದಿ